ಸಂಪುಟ: 05 ಸಂಚಿಕೆ: 22 ಪುಟಗಳು: 08 ಭಾನುವಾರ 06 ಏಪ್ರಿಲ್ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ
ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**
ನಿಮ್ಮ ಧ್ಯೇಯದಲ್ಲಿ ಯಶಸ್ವಿಯಾಗಲು, ನೀವು ನಿಮ್ಮ ಗುರಿಯ ಬಗ್ಗೆ ಏಕ ಮನಸ್ಸಿನ ಭಕ್ತಿ ಹೊಂದಿರಬೇಕು

## ಒಳಮೀಸಲಾತಿ ಜಾರಿ ಅನುಮಾನ ಬೇಡ ಎಂದ ಸಿದ್ದರಾಮಯ್ಯ!



• ಉದಯವಾಹಿನಿ, ಬೆಂಗಳೂರು

ಮೀಸಲಾತಿ ವಿರುದ್ಧ ಮಾತಾಡುತ್ತಿದ್ದವರೆಲ್ಲಾ ಈಗ ಮೀಸಲಾತಿ ಪಡೆದು ಸವಲತ್ತುಗಳನ್ನು ಅನುಭವಿಸುತ್ತಿದ್ದಾರೆ. ಆದ್ದರಿಂದ ಈಗ ಮೀಸಲಾತಿ ವಿರೋಧಿಸುವವರು ಯಾರೂ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾರ್ಮಿಕವಾಗಿ ಹೇಳಿದ್ದಾರೆ.

ವಿಧಾನಸೌಧದ ಗ್ರಾಂಡ್ ಸ್ಟೆಪ್ಸ್ ಮೇಲೆ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಆಯೋಜಿಸಿದ್ದ, ಡಾ.ಬಾಬು ಜಗಜೀವನ ರಾಮ್ ಅವರ 118ನೇ ಜನ್ಮ ದಿನೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಬಾಬು ಜಗಜೀವನ್ ರಾಮ್ ಸ್ವಾತಂತ್ರ್ಯ ಪ್ರೇಮಿ, ಸಾಮಾಜಿಕ ನ್ಯಾಯದ ಪರವಾಗಿದ್ದವರು. ಜಾತಿ ವ್ಯವಸ್ಥೆ ಕಾರಣದಿಂದ ಸಮಾಜದಲ್ಲಿ ಅಸಮಾನತೆ ಇದೆ. ಜಾತಿ ಇರುವವರೆಗೂ ಮೀಸಲಾತಿ ಇರಬೇಕು ಎಂದು ಸ್ಪಷ್ಟವಾದ ನಿಲುವು ಹೊಂದಿದ್ದರು.. ಎಂದು ಹೇಳಿದರು. ಪ್ರಧಾನಮಂತ್ರಿ, ನರೇಂದ್ರ, ಮೋದಿ ಅವರು ಈಡಬ್ಲ್ಯೂಎಸ್ ಹೆಸರಲ್ಲಿ ಕಲ್ಪಿಸಿದ ಶೇ.10ರಷ್ಟು ಮೀಸಲಾತಿ ಬಳಿಕ ಎಲ್ಲರೂ ಮೀಸಲಾತಿ ಫಲಾನುಭವಿಗಳೇ ಆಗಿಬಿಟ್ಟಿದ್ದಾರೆ. ಹೀಗಾಗಿ ಮೀಸಲಾತಿ ವಿರೋಧಿಸುವವರೂ ಮೀಸಲಾತಿಯನ್ನು ಪಡೆದುಕೊಂಡವರೇ ಆಗಿದ್ದಾರೆ.. ಎಂದು ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

**ಹಬ್ಬ ಬಂದಾಗ ಮಾತ್ರ ಅನ್ನ ಉಂಡವನು ನಾನು**

ರಾಜ್ಯದಲ್ಲಿ ಒಳ ಮೀಸಲಾತಿ ಜಾರಿ ಬಗ್ಗೆ ಅನುಮಾನ ಬೇಡ. ಯಾರೂ ಬೇಡ ಅಂದರೂ ನಾವು ಒಳಮೀಸಲಾತಿಯನ್ನು ಸುಪ್ರೀಂಕೋರ್ಟ್ ಆದೇಶದನ್ವಯ ಜಾರಿ ಮಾಡಿಯೇ ಮಾಡುತ್ತೇವೆ. ನ್ಯಾ. ನಾಗಮೋಹನ್ ದಾಸ್ ಅವರು ಎರಡು ತಿಂಗಳ ಕಾಲಾವಧಿ ಕೇಳಿದ್ದು, ಪೂರ್ಣ ವರದಿ ಕೈಸೇರಿದ ಬಳಿಕ ಯಾರಿಗೂ ಅನ್ಯಾಯ ಆಗದಂತೆ ಒಳಮೀಸಲಾತಿಯನ್ನು ಜಾರಿ ಮಾಡುತ್ತೇವೆ.. ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಸುಪ್ತ ಪ್ರತಿಭೆ ಹೊರಗೆ ತರುವ ಶಿಕ್ಷಣದಿಂದ ಯುವ ಸಮೂಹ ಸ್ವಾಭಿಮಾನಿಗಳಾಗಿ ಬೆಳೆಯಲು ಸಾಧ್ಯ. ಕರ್ನಾಟಕ, ತೆಲಂಗಾಣ ಮತ್ತು ಆಂಧ್ರಪ್ರದೇಶದಲ್ಲಿ ಮಾತ್ರ ಕಾಯ್ದೆ ಜಾರಿಯಲ್ಲಿದೆ. ಸಾಮಾಜಿಕ ನ್ಯಾಯದ ಬಗ್ಗೆ ಭಾಷಣ ಮಾಡುವ ಬಿಜೆಪಿ, ತನ್ನ ಆಡಳಿತದ ರಾಜ್ಯಗಳಲ್ಲಿ ಈ ಕಾಯ್ದೆ ಏಕೆ ಜಾರಿ ಮಾಡಿಲ್ಲ? ಬರೀ ಭಾಷಣ ಮಾಡಿದರೆ ಸಾಕಾ, ಅದು ಕ್ರಿಯೆಯಲ್ಲಿ ಕಾಣಬಾರದಾ ಎಂದು ಮುಖ್ಯಮಂತ್ರಿಗಳು ಖಾರವಾಗಿ ಪ್ರಶ್ನಿಸಿದರು. ನಾವು ಜಾರಿ ಮಾಡಿರುವ ಐದೂ ಗ್ಯಾರಂಟಿಗಳೂ ಜನರ ಕೈಯಲ್ಲಿ ಹಣ ಇರಬೇಕು, ಕೊಳ್ಳುವ ಶಕ್ತಿ ಹೆಚ್ಚಾಗಬೇಕು ಎನ್ನುವ ನಮ್ಮ ಉದ್ದೇಶವನ್ನು ಯಶಸ್ವಿಯಾಗಿ ಈಡೇರಿಸಿದೆ. ಜನರ ಬದುಕಿನಲ್ಲಿ ನೆಮ್ಮದಿ ತಂದ ಹೆಗ್ಗಳಿಕೆ ನಮ್ಮ ಸರ್ಕಾರಕ್ಕಿದೆ. ಆದರೆ ಬಿಜೆಪಿಯವರು ಹೊಟ್ಟೆ ತುಂಬಿದವರಾಗಿದ್ದು, ಹಸಿವಿನ ಅರಿವು ಅವರಿಗಿಲ್ಲ ಎಂದು ಸಿದ್ದರಾಮಯ್ಯ ಪ್ರತಿಪಕ್ಷ ನಾಯಕರನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

## ಆಂಜನೇಯ ಸಾಹೇಬ್ರಿಗೆ ಎಂಎಲ್‌ಸಿ ಕೊಡಿ ಎಂದು ಕೂಗಿದ ಬೆಂಬಲಿಗ

• ಉದಯವಾಹಿನಿ, ಬೆಂಗಳೂರು

ಬಾಬು ಜಗಜೀವನ್ ರಾಮ್ ಸ್ವಾತಂತ್ರ್ಯ ಹೋರಾಟಗಾರರಾಗಿದ್ದವರು ಹಾಗೂ ದಮನಿತರಿಗೆ ಮಾತ್ರವಲ್ಲದೆ ಎಲ್ಲಾ ಶೋಷಿತ ವರ್ಗಕ್ಕೆ ಸಾಮಾಜಿಕ ನ್ಯಾಯ ದೊರಕಿಸಲು ಶ್ರಮಿಸಿದವರು. ಮಹಾನ್ ನಾಯಕರನ್ನು ಸ್ಮರಿಸಿ ಗೌರವಿಸುವ ಕೆಲಸವನ್ನು ಸರ್ಕಾರ ಮಾಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಬಿಜೆಪಿಯ ಬೇಡಿಕೆಗೆಲ್ಲಾ ಉತ್ತರಿಸಲು ಸಾಧ್ಯವಿಲ್ಲ. ಬಿಜೆಪಿಯವರು ಹತಾಶರಾಗಿದ್ದು, ಈ ರೀತಿಯ ಹೇಳಿಕೆ ನೀಡಿದ್ದಾರೆ. ಸಾವಿನಲ್ಲೂ ರಾಜಕೀಯ ಮಾಡುವುದು ಬಿಜೆಪಿಗೆ ಅಭ್ಯಾಸ. ಅವರು ಹೇಳಿದ್ದಕ್ಕೆಲ್ಲಾ ಪ್ರತಿಕ್ರಿಯೆ ನೀಡಲಾಗದು ಎಂದರು. ಹೀಗೆ ಸಿದ್ದರಾಮಯ್ಯ ಮಾತನಾಡುವಾಗ ಆಂಜನೇಯ ಬೆಂಬಲಿಗನೊಬ್ಬ ಆಂಜನೇಯ ಸಾಹೇಬ್ರಿಗೆ ಎಂಎಲ್‌ಸಿ ಕೊಡಿ ಎಂದು ಜೋರಾಗಿ ಕೂಗುತ್ತಾನೆ, ಸಡನ್ನಿ ಶಾಕ್ ಆದ ಸಿದ್ದರಾಮಯ್ಯ, ಬೆಂಬಲಿಗನಿಗೆ ಗದರಿಸುತ್ತಾರೆ.

## ಲಾಜಿಕ್ ಎಲ್ಲೋ ಮಿಸ್ ಆಗಿದೆ ನಮ್ಮ ಮೆಟ್ರೋ ದರ ಏರಿಕೆ

• ಉದಯವಾಹಿನಿ, ಬೆಂಗಳೂರು

ನಮ್ಮ ಮೆಟ್ರೋ ಟಿಕೆಟ್ ದರದಲ್ಲಿ ಗಣನೀಯವಾಗಿ ಏರಿಕೆಯನ್ನು ಮಾಡಿ, ಕಣ್ಣೊರೆಸುವಂತೆ ಸ್ವಲ್ಪ ಕಮ್ಮಿ ಮಾಡಿತ್ತು. ಬೆಲೆ ಏರಿಕೆಗೆ ವ್ಯಾಪಕ ವಿರೋಧದ ನಡುವೆ, ಬೆಂಗಳೂರು ಸೆಂಟ್ರಲ್ ಲೋಕಸಭಾ ಕ್ಷೇತ್ರದ ಸಂಸದ ಪಿ.ಸಿ.ಮೋಹನ್, ದರ ಏರಿಕೆಯನ್ನು ಪ್ರಶ್ನಿಸಿದ್ದಾರೆ. ದರ ಏರಿಸಿ ಇಷ್ಟು ದಿನವಾದ ನಂತರ ಯಾಕೆ ಪಿ.ಸಿ.ಮೋಹನ್ ಪ್ರತಿಕ್ರಿಯೆ ನೀಡುತ್ತಿದ್ದಾರೆ.

ಅಂದರೆ, ಅದಕ್ಕೆ ಕಾರಣ ಮಾಹಿತಿ ಹಕ್ಕು ಕಾಯ್ದೆಯಡಿ ಬಂದ ಮಾಹಿತಿ. ಇದರ ಪ್ರಕಾರ, ದರ ಏರಿಕೆಯ ಮೊದಲು ವಿದೇಶ ಪ್ರವಾಸಕ್ಕೆಂದು 26 ಲಕ್ಷ ರೂಪಾಯಿಗಳನ್ನು ನಮ್ಮ ಮೆಟ್ರೋ ಖರ್ಚು ಮಾಡಿತ್ತು. ಹಾಂಗ್ ಕಾಂಗ್ ಮತ್ತು ಸಿಂಗಾಪುರದಲ್ಲಿ ಅಧ್ಯಯನ ನಡೆಸುವ ಕಾರಣವನ್ನು ಇಟ್ಟುಕೊಂಡು ವಿದೇಶ ಪ್ರವಾಸಕ್ಕೆ ಹೋಗಲಾಗಿತ್ತು ಮತ್ತು ಇದಕ್ಕೆ ಭಾರೀ ಪ್ರಮಾಣದಲ್ಲಿ ಹಣವನ್ನು ವ್ಯಯಿಸಲಾಗಿತ್ತು. ಇದನ್ನು ಸಂಸದರು ಖಾರವಾಗಿ ಪ್ರಶ್ನಿಸಿದ್ದಾರೆ.

## 1996ರ ವಿಶ್ವಕಪ್ ಹೀರೋಗಳ ಜೊತೆ ಮೋದಿ ಸಂವಾದ

• ಉದಯವಾಹಿನಿ, ಬೆಂಗಳೂರು



ಭಾರತದ ಪ್ರಧಾನಿ ನರೇಂದ್ರ ಮೋದಿ ಶ್ರೀಲಂಕಾಕ್ಕೆ ಭೇಟಿ ನೀಡಿದ್ದಾರೆ. ಈ ಸಂದರ್ಭದಲ್ಲಿ ಅವರು 1996ರ ವಿಶ್ವಕಪ್ ವಿಜೇತ ಕ್ರಿಕೆಟ್ ತಂಡದ ಕೆಲವು ಸದಸ್ಯರೊಂದಿಗೆ ಸಂವಾದ ನಡೆಸಿದರು. ಭಾರತದ ಪ್ರಧಾನಿ ಮೋದಿ ಎಕ್ಸ್‌ನಲ್ಲಿ ಶ್ರೀಲಂಕಾದ ಕ್ರಿಕೆಟ್ ತಾರೆಗಳೊಂದಿಗಿನ ಫೋಟೋಗಳನ್ನು ಹಂಚಿಕೊಂಡಿದ್ದಾರೆ. ''1996ನೇ ವರ್ಷ ವಿಶ್ವಕಪ್ ಗೆದ್ದ ಶ್ರೀಲಂಕಾ ಕ್ರಿಕೆಟ್ ತಂಡದ ಸದಸ್ಯರೊಂದಿಗೆ ಸಂವಹನ ನಡೆಸಲು ಸಂತೋಷವಾಯಿತು. ಈ ತಂಡವು ಅಸಂಖ್ಯಾತ ಕ್ರೀಡಾ ಪ್ರೇಮಿಗಳ ಕಲ್ಪನೆಯನ್ನು ಸೆರೆಹಿಡಿದಿದೆ!'' ಎಂದು ಮೋದಿ ಪೋಸ್ಟ್ ಮಾಡಿದ್ದಾರೆ. ಮಾರ್ಚ್ 17ರಂದು ಲಾಹೋರ್‌ನಲ್ಲಿ ನಡೆದ ಅಂತಿಮ ಹಣಾಹಣಿಯಲ್ಲಿ ಅರ್ಜುನ ರಣತುಂಗ ನೇತೃತ್ವದ ತಂಡ ಆಸ್ಟ್ರೇಲಿಯಾವನ್ನು 7 ವಿಕೆಟ್‌ಗಳು ಮತ್ತು ಇನ್ನೂ 22 ಎಸೆತಗಳು ಬಾಕಿ ಇರುವಂತೆ ಸೋಲಿಸುವಲ್ಲಿ ಯಶಸ್ವಿಯಾಯಿತು. ಅರವಿಂದ ಡಿ ಸಿಲ್ವಾ ಅವರ ಅಜೇಯ 107 ರನ್‌ಗಳು, ಅಸಂಕ ಗುರುಸಿನ್ಹ ಅವರ 99 ಎಸೆತಗಳಲ್ಲಿ 65 ರನ್‌ಗಳು ಮತ್ತು ಅರ್ಜುನ ರಣತುಂಗ ಅವರ 37 ಎಸೆತಗಳಲ್ಲಿ 47 ರನ್‌ಗಳ ವೇಗದ ಬ್ಯಾಟಿಂಗ್ ನೆರವಿನಿಂದ ಶ್ರೀಲಂಕಾ ತಂಡವು ತಮ್ಮ ಮೊದಲ ಮತ್ತು ಏಕೈಕ ವಿಶ್ವಕಪ್ ಪ್ರಶಸ್ತಿಯನ್ನು ಗೆಲ್ಲಲು ಸಾಧ್ಯವಾಯಿತು. ''ಇದು ಒಂದು ಉತ್ತಮ ಸಂವಾದವಾಗಿತ್ತು. ಈ ವೇಳೆ ನಾವು ಹಲವು ವಿಷಯಗಳನ್ನು ಚರ್ಚಿಸಿದ್ದೇವೆ ಮತ್ತು ಕ್ರಿಕೆಟ್ ಬಗ್ಗೆ ಮಾತನಾಡಿದ್ದೇವೆ. ಮೋದಿ ಅವರು ಹೇಗೆ ಅಧಿಕಾರ ವಹಿಸಿಕೊಂಡರು ಮತ್ತು ಅವರು ದೇಶವನ್ನು ಹೇಗೆ ಅಭಿವೃದ್ಧಿಪಡಿಸಿದರು ಎಂಬುದರ ಬಗ್ಗೆ ಮಾತನಾಡಿದ್ದು ನಮಗೂ ಒಂದು ಉತ್ತಮ ಅನುಭವವಾಗಿತ್ತು. ಪ್ರಧಾನಿ ಮೋದಿ ಅವರು ಭಾರತಕ್ಕಾಗಿ ಏನೆಲ್ಲ ಮಾಡಿದ್ದಾರೆಂಬುದನ್ನು ಅವರೇ ವಿವರಿಸಿದರು'' ಎಂದು ಶ್ರೀಲಂಕಾದ ಮಾಜಿ ಕ್ರಿಕೆಟಿಗ ಸನತ್ ಜಯಸೂರ್ಯ ಹೇಳಿದ್ದಾರೆ.



## ರಾಜ್ಯದಲ್ಲಿ ತುಘಲಕ್ ದರ್ಬಾರ್

# ಕಮಲ ಟೀಕಾಪ್ರಹಾರ

## ಆತ್ಮಹತ್ಯೆ ಕಿಚ್ಚು ಭುಗಿಲೆದ್ದ ಆಕ್ರೋಶ

- ವಿನಯ್ ಆತ್ಮಹತ್ಯೆ ಕೇಸ್:
- ಸಿದ್ದರಾಮಯ್ಯ ಸರ್ಕಾರಕ್ಕೆ ಡೆಡ್‌ಲೈನ್ ಕೊಟ್ಟ ವಿಜಯೇಂದ್ರ
- ಸ್ಥಳೀಯ ಶಾಸಕರ ವಿರುದ್ಧ FIR ದಾಖಲಿಸುವಂತೆ ಆಗ್ರಹಿಸಿ ಬಿಜೆಪಿ ಪ್ರತಿಭಟನೆ
- ಬಿಜೆಪಿಯವರು ದಾರಿ ತಪ್ಪಿಸುತ್ತಿದ್ದಾರೆ: ಶಿವರಾಜ್ ತಂಗಡಗಿ
- ಪ್ರತಾಪ್ ಸಿಂಹ ನೇತೃತ್ವದಲ್ಲಿ ಕುಶಾಲನಗರದಲ್ಲಿ ಬಿಜೆಪಿ ಪ್ರತಿಭಟನೆ

### ವಿನಯ್ ಸೋಮಯ್ಯ ಆತ್ಮಹತ್ಯೆಗೂ, ಶಾಸಕ ಪೊನ್ನಣ್ಣನಿಗೂ ಏನ್ರಿ ಸಂಬಂಧ?

• ಉದಯವಾಹಿನಿ, ಬೆಂಗಳೂರು

ಕೊಡಗಿನ ಕುಶಾಲನಗರದ ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಆತ್ಮಹತ್ಯೆ ಪ್ರಕರಣ ಸಂಬಂಧ ಸ್ಥಳೀಯ ಶಾಸಕರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಆಗ್ರಹಿಸಿ, ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ನೇತೃತ್ವದಲ್ಲಿ ಕುಶಾಲನಗರದ ಡಿವೈಎಸ್‌ಪಿ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿರುವ ಘಟನೆ ನಡೆಯಿತು. ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎಫ್‌ಐಆರ್‌ನಲ್ಲಿ ಸ್ಥಳೀಯ ಶಾಸಕರನ್ನು ಕೈಬಿಟ್ಟಿದ್ದು ಸರಿಯಲ್ಲ, ಅವರ ಹೆಸರನ್ನು ಎಫ್‌ಐಆರ್‌ನಲ್ಲಿ ಸೇರಿಸಬೇಕೆಂದು ಆಗ್ರಹಿಸಿ ಕುಶಾಲನಗರದ ಡಿವೈಎಸ್‌ಪಿ ಕಚೇರಿಯ ಬಳಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ಸಂಸದ ಯದುವೀರ್ ಸೇರಿದಂತೆ ಹಲವು ಬಿಜೆಪಿ ಮುಖಂಡರು ಪ್ರತಿಭಟನೆ ನಡೆಸಿ, ನಂತರ ಒಂದು ಗಂಟೆ ಸಮಾಯಾವಕಾಶ ನೀಡಿದ ನಂತರ ಡಿವೈಎಸ್‌ಪಿ ಕಚೇರಿಗೆ



ಮುತ್ತಿಗೆ ಹಾಕಲು ಯತ್ನಿಸಿದಾಗ ಪೊಲೀಸರು ಅವರನ್ನು ವಶಕ್ಕೆ ಪಡೆದರು. ಬಿಜೆಪಿ ಕಾರ್ಯಕರ್ತರು ಕುಶಾಲನಗರದ ಸರ್ಕಾರಿ ಆಸ್ಪತ್ರೆ ಹಾಗೂ ಪಕ್ಕದಲ್ಲೇ ಇರುವ ಡಿವೈಎಸ್‌ಪಿ ಕಚೇರಿಯ ಬಳಿ ಪ್ರತಿಭಟನೆ ನಡೆಸಿದ್ದು, ಬಿಜೆಪಿ ನಾಯಕರನ್ನು ವಶಕ್ಕೆ ಪಡೆದ ನಂತರ ಸರ್ಕಾರಿ ಆಸ್ಪತ್ರೆಯಲ್ಲಿ ವಿನಯ್ ಸೋಮಯ್ಯ ಪಾರ್ಥಿವ ಶರೀರವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಯಿತು. ಸಂಜೆ ಕೊಡವ ಸಂಪ್ರದಾಯದಂತೆ ಅಂತ್ಯಕ್ರಿಯೆ ನಡೆಸಲು ಕುಟುಂಬಸ್ಥರು ಸಿದ್ಧತೆ ಮಾಡಿಕೊಂಡಿದ್ದಾರೆ. ಮುಂಜಾಗ್ರತಾ ಕ್ರಮವಾಗಿ ಕೊಡಗಿನ ಕುಶಾಲನಗರದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ. ಭದ್ರತೆಗಾಗಿ ಹೆಚ್ಚುವರಿಯಾಗಿ ಹಾಸನ ಮತ್ತು ಮೈಸೂರು ಎಸ್‌ಪಿ, ಎಎಸ್‌ಪಿ ಸೇರಿದಂತೆ ಹೆಚ್ಚುವರಿಯಾಗಿ ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗಿದೆ.

**ರಾಜ್ಯದಲ್ಲಿ ತುಘಲಕ್ ದರ್ಬಾರ್:** ಸ್ಥಳೀಯ ಶಾಸಕ ವೈಫಲ್ಯಗಳನ್ನು ಎತ್ತಿ ತೋರಿಸಿದ ಕಾರಣಕ್ಕೆ ಹಿಂಸೆ ನೀಡಲಾಗಿದ್ದು, ಆತ್ಮಹತ್ಯೆ ಮಾಡಿಕೊಂಡ ವಿನಯ್ ಸೋಮಯ್ಯ ತಮ್ಮ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ಅನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿ ಬೇಲ್ ತಂದಿದ್ದರು. ಅವರ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ಪ್ರತಿಯನ್ನು ಎಲ್ಲಾ ಕಡೆ ಹಂಚಲಾಗಿದ್ದು, ಇದರಿಂದ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದಕ್ಕೆ ಸ್ಥಳೀಯ ಶಾಸಕರು ಕಾರಣವಾಗಿದ್ದಾರೆ. ರಾಜ್ಯದಲ್ಲಿ ತುಘಲಕ್ ದರ್ಬಾರ್ ನಡೆಯುತ್ತಿದ್ದು, ಕೂಡಲೇ ಇಬ್ಬರು ಶಾಸಕರ ಹೆಸರನ್ನು ಎಫ್‌ಐಆರ್‌ನಲ್ಲಿ ಸೇರಿಸಬೇಕೆಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆಗ್ರಹಿಸಿದರು. ಕೊಡಗಿನ ಬಿಜೆಪಿ ಕಾರ್ಯಕರ್ತ ವಿನಯ್ ಎಂಬುವವರು ಕಾಂಗ್ರೆಸ್ಸಿನ ಕೆಲ ರಾಜಕಾರಣಿಗಳು ತಮ್ಮ ಅಧಿಕಾರವನ್ನು ಉಪಯೋಗಿಸಿ ಬೆದರಿಕೆಯೊಡ್ಡಿದ್ದ ಕಾರಣದಿಂದ ಆತ್ಮಹತ್ಯೆಗೆ ಶರಣಾಗಿರುವುದು ಅತ್ಯಂತ ದುರದೃಷ್ಟಕರ ಎಂದು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಕಿಡಿಕಾರಿದ್ದಾರೆ. ಬಿಜೆಪಿ ಕರ್ನಾಟಕ ಘಟಕವು ವಿನಯ್ ಅವರಿಗೆ ಯಾವುದೇ ಕಾನೂನು ನೆರವು ನೀಡದೆ, ಈಗ ಟ್ವಿಟರ್ ದಲ್ಲಿ ಅರ್ಭಟಿಸುತ್ತಿರುವುದು ಇವರ ಆದ್ಯತೆಗಳನ್ನು ತೋರಿಸುತ್ತದೆ. ಆಡಳಿತಾರೂಢ ಪಕ್ಷದ ಇಬ್ಬರು ಹಾಲಿ ಶಾಸಕರ ಪಾತ್ರವಿದೇ ಎಂದು ಮೇಲ್ನೋಟಕ್ಕೆ ಗೊತ್ತಾಗಿದೆ ಎಂದು ಅವರು ಹೇಳಿದ್ದಾರೆ.

### ಸಿಬಿಐ ತನಿಖೆಗೆ ವಿಜಯೇಂದ್ರ ಒತ್ತಾಯ

ಈ ಹೃದಯ ವಿದ್ರಾವಕ ಘಟನೆಯ ಬಗ್ಗೆ ಸಿಬಿಐ ತನಿಖೆಗೆ ನಾವು ಒತ್ತಾಯಿಸುತ್ತೇವೆ. ಅಪರಾಧಿಗಳು ಅವರ ರಾಜಕೀಯ ಸ್ಥಾನಮಾನವನ್ನು ಲೆಕ್ಕಿಸದೆ, ಕಾನೂನಿನಡಿಯಲ್ಲಿ ಹೊಣೆಗಾರರಾಗಬೇಕು. ಈ ಸರ್ವಾಧಿಕಾರಿ ಮತ್ತು ದಮನಕಾರಿ ಸಿದ್ದರಾಮಯ್ಯ ಸರ್ಕಾರದ ಮೇಲೆ ಆಕ್ರೋಶ ಎದುರಿಸುತ್ತಿರುವ ನಮ್ಮ ಧೈರ್ಯಶಾಲಿ ಕಾರ್ಯಕರ್ತರೊಂದಿಗೆ ನಾವು ಅಚಲವಾಗಿ ಒಗ್ಗಟ್ಟಿನಿಂದ ನಿಲ್ಲುತ್ತೇವೆ. ನಮ್ಮ ಪ್ರತಿಯೊಬ್ಬ ನೆಲದ ಕಾರ್ಯಕರ್ತರಿಗೆ ಸಂಪೂರ್ಣ ಕಾನೂನಿನ ಬೆಂಬಲದ ಭರವಸೆ ನೀಡುತ್ತೇವೆ. ಯಾವುದೇ ಬೆದರಿಕೆ ಅಥವಾ ಒತ್ತಡಕ್ಕೆ ಮಣಿಯಬೇಡಿ, ನಮ್ಮನ್ನು ಸಂಪರ್ಕಿಸಿ, ನಿಮ್ಮ ಧ್ವನಿ ಮುಖ್ಯ, ನಿಮ್ಮ ಜೀವನ ಮುಖ್ಯ ಎಂದು ವಿಜಯೇಂದ್ರ ಅವರು ಕಾರ್ಯಕರ್ತರಿಗೆ ಕರೆ ನೀಡಿದ್ದಾರೆ.

### ತಪ್ಪಿತಸ್ಥರ ವಿರುದ್ಧ ಕ್ರಮ

ಕೊಡಗು ಬಿಜೆಪಿ ಕಾರ್ಯಕರ್ತನ ಆತ್ಮಹತ್ಯೆ ಪ್ರಕರಣದಲ್ಲಿ ಎಫ್‌ಐಆರ್ ಆಗಿದ್ದು ತನಿಖೆ ನಡೆಯುತ್ತಿದೆ. ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು. ಸಮಾಜ ಕಲ್ಯಾಣ ಇಲಾಖೆ ವತಿಯಿಂದ ವಿಧಾನಸೌಧದ ಪಶ್ಚಿಮ ದ್ವಾರದ ಬಳಿ ಆಯೋಜಿಸಲಾಗಿದ್ದ ಹಸಿರು ಕ್ರಾಂತಿಯ ಹರಿಕಾರ, ಭಾರತದ ಮಾಜಿ ಉಪಪ್ರಧಾನಿ ಡಾ. ಬಾಬು ಜಗಜೀವನ ರಾಮ್ ಅವರ 118ನೇ ಜನ್ಮ ದಿನಾಚರಣೆಯ ಅಂಗವಾಗಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಬಳಿಕ ಅವರು ಮಾತನಾಡಿದರು. ಬಿಜೆಪಿ ಕಾರ್ಯಕರ್ತನ ಆತ್ಮಹತ್ಯೆಯ ಬಗ್ಗೆ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಬಿಜೆಪಿಯ ಬೇಡಿಕೆಗೆಲ್ಲಾ ಉತ್ತರಿಸಲು ಸಾಧ್ಯವಿಲ್ಲ. ಬಿಜೆಪಿಯವರು ಹತಾಶರಾಗಿದ್ದು, ಈ ರೀತಿಯ ಹೇಳಿಕೆ ನೀಡಿದ್ದಾರೆ. ಸಾವಿನಲ್ಲೂ ರಾಜಕೀಯ ಮಾಡುವುದು ಬಿಜೆಪಿಗೆ ಅಭ್ಯಾಸ. ಅವರು ಹೇಳಿದ್ದಕ್ಕೆಲ್ಲಾ ಪ್ರತಿಕ್ರಿಯೆ ನೀಡಲಾಗದು ಎಂದರು.

### ಪತ್ರದಲ್ಲಿ ಏನಿತ್ತು..

ರಾಜಕೀಯ ದ್ವೇಷಕ್ಕೆ ನಮ್ಮ ಜೀವನದ ಜೊತೆ ಆಟವಾಡಿದ ತನ್ನೀರಾ ಮೈನಾ ಅವರು ನನ್ನ ಸಾವಿಗೆ ನೇರ ಹೊಣೆ. ನಮ್ಮ ಮೇಲೆ ಎಫ್‌ಐಆರ್ ಹಾಕಿಸಿ, 'ಕಿಡಿಗೇಡಿಗಳು' ಅಂತ ಇಡೀ ಕೊಡಗಿಗೆ ವೈರಲ್ ಮಾಡಿರುವವನೂ ಕೂಡಾ ಇವನೆ. ಎಫ್‌ಐಆರ್ ಆದ ದಿನದಿಂದ ಜಾಮೀನು ಸಿಗುವ ತನಕ ನಾನು, ನನ್ನ ಅಮ್ಮನ ಜತೆಗೂ ಮಾತನಾಡಿಲ್ಲ. ತನ್ನೀರಾ ಮೈನಾನ ಕಾರಣಕ್ಕಾಗಿ ಜೀವ ಕಳೆದುಕೊಳ್ಳುತ್ತಿರುವ ವ್ಯಕ್ತಿ ನಾನು ಮೊದಲಿಗನಲ್ಲ. ಹಾಗಾಗಿ ಸಂಬಂಧಪಟ್ಟ ಅಧಿಕಾರಿಗಳು ಆತ್ಮಹತ್ಯೆಯ ತನಿಖೆ ನಡೆಸಿ ಅಪರಾಧಿಗಳಿಗೆ ಶಿಕ್ಷೆ ಕೊಡಿಸಬೇಕು ಎಂದು ಬರೆಯಲಾಗಿದೆ.ಜಾಮೀನು ಸಿಕ್ಕಿದರೂ ವಿರಾಜಪೇಟೆಯ ಶಾಸಕ ಪೊನ್ನಣ್ಣನ ಆದೇಶದಂತೆ ಮಡಿಕೇರಿಯ ಪೊಲೀಸರು ನನ್ನನ್ನು ಹುಡುಕಾಟ ನಡೆಸುತ್ತಿದ್ದರು. ಕುಶಾಲನಗರದ ಸರ್ಕಾರಿ ಆಸ್ಪತ್ರೆಯ ವ್ಯವಸ್ಥೆಯ ಬಗ್ಗೆ ವಾಟ್ಸ್‌ಆಪ್ ಗ್ರೂಪ್‌ನಲ್ಲಿ ಪ್ರಶ್ನಿಸಿದ್ದಕ್ಕೆ ಮಡಿಕೇರಿ ಶಾಸಕ ಮಂಥರ್‌ಗೌಡ ಗದರಿದ್ದರು. ಗ್ರೂಪ್‌ನಲ್ಲಿ ಹಾಕಿದರೆ ಸರಿ ಇರಲ್ಲ ಎಂದೂ ಕೂಡ ಹೇಳಿದ್ದರು ಎಂದು ಉಲ್ಲೇಖವಿದೆ.

### ಆತ್ಮಹತ್ಯೆಯ ತನಿಖೆ ನಡೆಸಿ ಅಪರಾಧಿಗಳಿಗೆ ಶಿಕ್ಷೆ ಕೊಡಿಸಬೇಕು



### ಬಿಜೆಪಿ ಸುಳ್ಳು ಹೇಳೋದರಲ್ಲಿ ನಿಸ್ಸೀಮರು

ಬಿಜೆಪಿಯವರು ಹಾದಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಈ ಹಿಂದೆ ಗಣಪತಿ ಪ್ರಕರಣದಲ್ಲಿ ಜಾರ್ಜ್ ಹೆಸರು ಬರೆದಿಟ್ಟದ್ದಾರೆ. ಸಿಬಿಐಗೆ ವಹಿಸಿ ಎಂದು ಕೇಳಿದರು. ಸಿಬಿಐಗೆ ನೀಡಲಾಯಿತು ವರದಿ ಏನು ಬಂತು. ಅವರು ಹಾದಿ ತಪ್ಪಿಸುವ ಕೆಲಸಕ್ಕೆ ಜನ ಉತ್ತರಿಸುತ್ತಾರೆ ಎಂದರು. ತಮಿಳುನಾಡು ಬಿಜೆಪಿ ಅಧ್ಯಕ್ಷ ಅಣ್ಣಾಮಲೈ ರಾಜೀನಾಮೆ ನೀಡಿದ್ದಾರೆ. ಬಿಜೆಪಿವರು ಸುಳ್ಳು ಹೇಳೋದರಲ್ಲಿ ನಿಸ್ಸೀಮರು. ಕಪ್ಪು ಹಣ ತರುವುದಾಗಿ ಹೇಳಿದ್ರ, ತಂದ್ರಾ, 15 ಲಕ್ಷ ಕೊಡುವುದಾಗಿ ಹೇಳಿದ್ರ, ಕೊಟ್ರಾ. ಜನರಿಗೆ ಎಷ್ಟು ಮೋಸ ಮಾಡಬೇಕು ಅಷ್ಟು ಬಿಜೆಪಿಯವರು ಮಾಡುತ್ತಾರೆ. ಅಣ್ಣಾಮಲೈರನ್ನು ಬಿಜೆಪಿ ಕರ್ಕೊಂಡು ಹೋಗಿ ಮೋಸ ಮಾಡಿದ್ರು. ಬಾರಕೋಲ ತಗೊಂಡು ಬಡ್ಕೊಂಡ್ರು. ಅವರನ್ನು ಉಪಯೋಗ ಮಾಡಿಕೊಂಡು ಬಿಸಾಡಿದ್ರು. ನಮಗೇನು ಕೊಟ್ರು, ಗೊತ್ತಿದೆ ಎಂದರು.

## ಕರ್ನಾಟಕದಲ್ಲಿ ಬಾಲಕಾರ್ಮಿಕರ ಪದ್ಧತಿಗೆ ಬಿದ್ದಿಲ್ಲ ಕಡಿವಾಣ

### । ಅನೇಕ ಹೋಟೆಲ್‌ಗಳು, ಸಣ್ಣ ಕಾರ್ಖಾನೆಗಳಲ್ಲಿ ಇಂದಿಗೂ ಬಾಲ ಕಾರ್ಮಿಕರನ್ನು ಬಳಕೆ ಮಾಡಲಾಗುತ್ತಿದೆ

• ಉದಯವಾಹಿನಿ, ಬೆಂಗಳೂರು

ಬಾಲ ಕಾರ್ಮಿಕ ಪದ್ಧತಿ ಒಂದು ಸಾಮಾಜಿಕ ಪಿಡುಗಾಗಿದೆ. ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗಾಗಿ ಸರ್ಕಾರ ಹಾಗೂ ಸ್ವಯಂ ಸೇವಾ ಸಂಸ್ಥೆಗಳು ಸಾಕಷ್ಟು ಪ್ರಯತ್ನ ನಡೆಸುತ್ತಿವೆ. ಹೀಗಿದ್ದರೂ ಇದಕ್ಕೆ ಕಡಿವಾಣ ಸಾಧ್ಯವಾಗುತ್ತಿಲ್ಲ. ಬಡತನ ಹಾಗೂ ಮತ್ತಿತರರ ಕಾರಣಗಳಿಂದಾಗಿ ರಾಜ್ಯದಲ್ಲಿ ಬಾಲ ಕಾರ್ಮಿಕರರು ಕಾಣಿಸಿಕೊಳ್ಳುತ್ತಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕದಲ್ಲಿ 2069 ಬಾಲ ಕಾರ್ಮಿಕರನ್ನು ರಕ್ಷಣೆ ಮಾಡಲಾಗಿದೆ.

ರಾಜ್ಯದಲ್ಲಿ ಬಾಲ ಹಾಗೂ ಕಿಶೋರ ಕಾರ್ಮಿಕ ( ನಿಷೇಧ ಮತ್ತು ನಿಯಂತ್ರಣ) ತಿದ್ದುಪಡಿ ನಿಯಮ 2017 ಅರ ಅನ್ವಯ ಬಾಲ ಕಾರ್ಮಿಕ ಪದ್ಧತಿ ನಿಷೇಧವಾಗಿದೆ. ಆದರೂ ಅನೇಕ ಹೋಟೆಲ್‌ಗಳು, ಸಣ್ಣ ಕಾರ್ಖಾನೆಗಳಲ್ಲಿ ಇಂದಿಗೂ ಬಾಲ ಕಾರ್ಮಿಕರನ್ನು ಬಳಕೆ ಮಾಡಲಾಗುತ್ತಿದೆ.

**ನಿಯಂತ್ರಣಕ್ಕೆ ಕ್ರಮ ಏನು?**

ಬಾಲ ಹಾಗೂ ಕಿಶೋರ ಕಾರ್ಮಿಕ ( ನಿಷೇಧ ಮತ್ತು ನಿಯಂತ್ರಣ) ತಿದ್ದುಪಡಿ ನಿಯಮ 2017 ಕಾಯ್ದೆ ಅಡಿಯಲ್ಲಿ ಸರ್ಕಾರದ 11 ಇಲಾಖೆಗಳ ಅಧಿಕಾರಿಗಳನ್ನು ನಿರೀಕ್ಷಕರನ್ನಾಗಿ ನೇಮಕ ಮಾಡಲಾಗಿದೆ. ಅಧಿಕಾರಿಗಳ ತಂಡಗಳನ್ನು ರಚನೆ ಮಾಡಿ ತಿಂಗಳಿಗೆ ಕನಿಷ್ಠ 15 ತಪಾಸಣೆಗಳನ್ನು ಕೈಗೊಳ್ಳಲಾಗುತ್ತಿದೆ. ಅಲ್ಲದೆ ಜಿಲ್ಲಾ ಮಟ್ಟದ ಕಾರ್ಯಪಡೆ ರಚನೆ ಮಾಡಲಾಗಿದೆ. ದೂರುಗಳ ಆಧಾರದಲ್ಲಿ ಈ ಕಾರ್ಯಪಡೆ ದಾಳಿ ಹಾಗೂ ತಪಾಸಣೆಗಳನ್ನು ನಿರಂತರವಾಗಿ ನಡೆಸುತ್ತದೆ ಎಂದು ಕಾರ್ಮಿಕ ಇಲಾಖೆ ಮಾಹಿತಿ ನೀಡುತ್ತದೆ.



**3 ವರ್ಷಗಳಲ್ಲಿ 2069 ಬಾಲಕಾರ್ಮಿಕರ ರಕ್ಷಣೆ!**

| ಯಾವ ವರ್ಷದಲ್ಲಿ ಎಷ್ಟು? / ಪತ್ತೆಯಾದ ಪ್ರಕರಣ | | | |
|---|---|---|---|
| 2022 | 581 | 2022 | 200 |
| 2023 | 707 | 2023 | 414 |
| 2024 | 781 | 2024 | 556 |

| ದಾಖಲಾದ ಮೊಕದ್ದಮೆ / ಶಿಕ್ಷೆ ಪ್ರಮಾಣ | | | |
|---|---|---|---|
| 2022 | 155 | 2022 | 24 |
| 2023 | 260 | 2022 | 24 |
| 2024 | 287 | 2024 | 19 |
| ಒಟ್ಟು | 702 | ಒಟ್ಟು | 58 |

ಜೂನ್ 12 ರಂದು ವಿಶ್ವ ಬಾಲಕಾರ್ಮಿಕ ವಿರೋಧಿ ದಿನ

ಓದುವ ವಯಸ್ಸಿನಲ್ಲಿ ದುಡಿಯಲು ಹೋಗಿ ಸುಂದರವಾದ ಬಾಲ್ಯವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಬಾಲ್ಯ ಕಾರ್ಮಿಕತನವನ್ನು ನಿರ್ಮೂಲನೆ ಮಾಡುವ ಗುರಿಯೊಂದಿಗೆ 'ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ' 2002ರಿಂದ ಪ್ರತಿವರ್ಷ ಜೂನ್ 12ನ್ನು 'ಬಾಲಕಾರ್ಮಿಕ ವಿರೋಧಿ ದಿನ'ವನ್ನಾಗಿ ಆಚರಿಸಿತು. ಅಂದಿನಿಂದ ಪ್ರತಿ ವರ್ಷ ಜೂನ್ 12 ರಂದು ವಿಶ್ವ ಬಾಲಕಾರ್ಮಿಕ ವಿರೋಧಿ ದಿನವನ್ನು ಆಚರಿಸಿಕೊಂಡು ಬರಲಾಗುತ್ತಿದೆ.

| ವಸೂಲಿ ಮಾಡಲಾದ ದಂಡ | |
|---|---|
| 2022 | 6.32 ಕೋಟಿ |
| 2023 | 7.20 ಕೋಟಿ |
| 2024 | 18.58 ಕೋಟಿ |
| ಒಟ್ಟು | 32.10 ಕೋಟಿ |

ಹದಿನಾಲ್ಕು ವರ್ಷದೊಳಗಿನ ವಯಸ್ಸಿನ ಮಕ್ಕಳನ್ನು ದುಡಿಸಿಕೊಳ್ಳುವುದರಿಂದ ಈ ಬಾಲ ಕಾರ್ಮಿಕರು ಪೌಷ್ಟಿಕ ಆಹಾರ ಕೊರತೆಯಿಂದ ಬಳಲುತ್ತಾರೆ.

ಆರೋಗ್ಯ ಸಮಸ್ಯೆಯೂ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ. ಹೀಗಾಗಿ,



ಸರ್ಕಾರ ಜನರಿಗೆ ಬಾಲಕಾರ್ಮಿಕತನದ ದುಷ್ಪರಿಣಾಮದ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶವನ್ನು ಹೊಂದಿದೆ. ಮಕ್ಕಳಿಂದ ದುಡಿಸಿಕೊಳ್ಳುವುದರಿಂದ ಆಗುವ ದುಷ್ಪರಿಣಾಮದ ಬಗ್ಗೆ ಸರ್ಕಾರಿ ಸಂಸ್ಥೆ, ಶಾಲಾ ಕಾಲೇಜುಗಳಲ್ಲಿ ಜಾಗೃತಿ ಕಾರ್ಯಕ್ರಮಗಳು, ಅಭಿಯಾನಗಳು ಹಾಗೂ ಜಾಥಗಳನ್ನು ಹಮ್ಮಿಕೊಳ್ಳಲಾಗುತ್ತದೆ.

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.99 ₹/L | ಬಂಗಾರ: ₹9,066/Gram24ct ₹8,310/Gram22ct | ಬೆಳ್ಳಿ: ₹94.00/Gram

## ಇವತ್ತಿನಿಂದ ಸರ್ಕಾರದ ವಿರುದ್ಧ ನನ್ನ ಯುದ್ಧ ಶುರು; ಎಚ್‌ಡಿ ಕುಮಾರಸ್ವಾಮಿ ಶಪಥ

• ಉದಯವಾಹಿನಿ, ಬೆಂಗಳೂರು

ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಸುದ್ದಿಗೋಷ್ಠಿ ನಡೆಸಿ ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಕುಮಾರಸ್ವಾಮಿಯನ್ನು ನೀವು ಹೆದರಿಸಬಹುದು ಎಂದು ನೀವು ಅಂದು ಕೊಂಡಿರಬಹುದು, ಒಂದು ನೋವಿನಿಂದ ನಾನು ಹೇಳುತ್ತೇನೆ, ಯಾವ ವಿಷ್ಯ ಹೇಳಬೇಕು ಅಂತಾನೆ ಗೊತ್ತಾಗ್ತಿಲ್ಲ, ಹನಿಟ್ರ್ಯಾಪ್ ಪ್ರಕರಣ ನೋಡಿದ್ರೆ ನಾಚಿಕೆ ಆಗುತ್ತೆ ಎಂದು ಕಿಡಿಕಾರಿದರು. ರಾಜ್ಯದಲ್ಲಿ ಘಜ್ನಿ ಮಹಮದ್ ಅಂತವರು ಆಡಳಿತ ನಡೆಸುತ್ತಿದ್ದಾರೆ. ನಾನು ಸಿನಿಮಾ ರಂಗದಲ್ಲಿ ಇರುವಾಗ 46 ಎಕರೆ ಜಾಗವನ್ನು ತೆಗೆದುಕೊಂಡಿದ್ದೆ, ನನ್ನ ಮನೆ ಹಾಳು ಮಾಡಬೇಕು ಅಂದು ಕೊಂಡ್ರೆ ಮಾಡಿ ಎಂದು ಬೇಸರ ವ್ಯಕ್ತಪಡಿಸಿದರು. ನನ್ನ ರಾಜಕೀಯ ಜೀವನದಲ್ಲಿ ಇಷ್ಟೊಂದು ದ್ವೇಷದ ರಾಜಕಾರಣ ಮಾಡಿಲ್ಲ ಎಂದು ಹೇಳಿದರು.

## ಸಿಸಿಬಿ ಕಾರ್ಯಾಚರಣೆ: ಎಂಟು ಮಂದಿ ಬಂಧನ

• ಉದಯವಾಹಿನಿ, ಬೆಂಗಳೂರು

ಉದ್ಯೋಗ ಅರಸಿ ನಗರಕ್ಕೆ ಬರುತ್ತಿದ್ದ ಹೆಣ್ಣು ಮಕ್ಕಳಿಗೆ ಉದ್ಯೋಗದ ಆಮಿಷವೊಡ್ಡಿ ವೇಶ್ಯಾವಾಟಿಕೆಗೆ ದೂಡುತ್ತಿದ್ದ ಆರೋಪದ ಮೇರೆಗೆ ಸಿಸಿಬಿ ಪೊಲೀಸರು ಎಂಟು ಮಂದಿಯನ್ನು ಬಂಧಿಸಿದ್ದಾರೆ.ಮಧ್ಯವರ್ತಿಗಳಾದ ವಸೀಮ್, ಮನೋಹರ್, ಸೀನಾ, ಲೋಕೇಶ್ ಗೌಡ, ಲೋಕೇಶ್, ವಿಜಯ್, ಪ್ರಸಾದ್, ಸುರೇಶ್ ಅವರನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಿದ್ದಾರೆ. ಮಂಡ್ಯ, ಮೈಸೂರು ಭಾಗದ ಇಬ್ಬರು ಯುವತಿಯರು ಹಾಗೂ ಪಂಜಾಬ್, ದೆಹಲಿ, ಕೋಲ್ಕತ್ತಾದ ಹೆಣ್ಣು ಮಕ್ಕಳನ್ನು ರಕ್ಷಿಸಲಾಗಿದೆ. ಆರೋಪಿಗಳು ನಾಗರಬಾವಿ. ಮಡಿವಾಳ, ಬೊಮ್ಮನಹಳ್ಳಿ ಸೇರಿದಂತೆ ನಗರದ ಹಲವು ಪ್ರದೇಶಗಳಲ್ಲಿ ವೇಶ್ಯಾವಾಟಿಕೆ ನಡೆಸುತ್ತಿದ್ದರು. ಬಾಲಕಿ ಮತ್ತು ಏಳು ಯುವತಿಯರನ್ನು ರಕ್ಷಣೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. 'ದೂರದ ಊರುಗಳಿಂದ ಉದ್ಯೋಗ ಅರಸಿ ನಗರಕ್ಕೆ ಬರುತ್ತಿದ್ದ ಹೆಣ್ಣುಮಕ್ಕಳನ್ನು ಗುರಿಯಾಗಿಸಿಕೊಂಡು ಕಾರ್ಯಾಚರಣೆ ನಡೆಸುತ್ತಿದ್ದ ಆರೋಪಿಗಳು, ಒಳ್ಳೆಯ ಉದ್ಯೋಗ ಕೊಡಿಸುವುದಾಗಿ ನಂಬಿಸುತ್ತಿದ್ದರು. ಧಾರಾವಾಹಿಗಳಲ್ಲಿ ಅವಕಾಶ ಕೊಡಿಸುವುದಾಗಿ, ಮಾಡೆಲ್ ಮಾಡುವುದಾಗಿ, ತಾರಾ ಹೋಟೆಲ್‌ಗಳಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸುತ್ತಿದ್ದರು. ಬಳಿಕ ಡ್ಯಾನ್ಸ್ ಬಾರ್ ಹಾಗೂ ವೇಶ್ಯಾವಾಟಿಕೆಗೆ ದೂಡುತ್ತಿದ್ದರು' ಎಂದು ಪೊಲೀಸರು ಹೇಳಿದ್ದಾರೆ.


## 2025ರ ಸಿಇಟಿ ಪರೀಕ್ಷೆಯ ದಿನಾಂಕ ಪ್ರಕಟ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) 2025ರ ಸಾಮಾನ್ಯ ಪ್ರವೇಶ ಪರೀಕ್ಷೆಯ ದಿನಾಂಕಗಳನ್ನು ಪ್ರಕಟಿಸಿದೆ. ಏಪ್ರಿಲ್ 15ರಿಂದ 17ವರೆಗೆ ಸಿಇಟಿ ಪರೀಕ್ಷೆ ನಡೆಯಲಿದೆ. ಸಿಇಟಿ ಕನ್ನಡ ಭಾಷೆ ಪರೀಕ್ಷೆ ಏಪ್ರಿಲ್ 15ಕ್ಕೆ ಹಿಂದೂಡಿಕೆಯಾಗಿದೆ. ಈ ಹಿಂದೆ ಏಪ್ರಿಲ್ 18ಕ್ಕೆ ಪರೀಕ್ಷೆಯನ್ನು ನಿಗದಿಪಡಿಸಲಾಗಿತ್ತು. ಆದರೆ ಏಪ್ರಿಲ್ 18ರಂದು ಗುಡ್ ಫ್ರೈಡೇ ಇರುವುದರಿಂದ ಸರ್ಕಾರ ಪರೀಕ್ಷೆ ದಿನಾಂಕವನ್ನು ಬದಲಾಯಿಸಿದೆ.

ಏಪ್ರಿಲ್ 15ರಂದು ಕನ್ನಡ ಪರೀಕ್ಷೆ ಬೆಂಗಳೂರು, ಮಂಗಳೂರು, ವಿಜಯಪುರ, ಬೆಳಗಾವಿ ಕೇಂದ್ರಗಳಲ್ಲಿ ಮಾತ್ರ ಕನ್ನಡ ಭಾಷಾ ಪರೀಕ್ಷೆ ನಡೆಯಲಿದೆ. 10ನೇ ತರಗತಿಯಲ್ಲಿ ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಕಲಿತವರು, ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ಮತ್ತು ಕೆಇಎ ನಡೆಸಿದ ಕನ್ನಡ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೂ ವಿನಾಯಿತಿ ಇರುತ್ತದೆ. ಏಪ್ರಿಲ್ 16 ರಂದು 10:30ರಿಂದ ಭೌತಶಾಸ್ತ್ರ ಹಾಗೂ ಮಧ್ಯಾಹ್ನ 2:30 ರಿಂದ ರಾಸಾಯನಶಾಸ್ತ್ರ ಪರೀಕ್ಷೆಗಳು ನಡೆಯಲಿದ್ದು, ಮರುದಿನ ಅಂದರೆ ಏಪ್ರಿಲ್ 17ರಂದು ಬೆಳಗ್ಗೆ ಗಣಿತ ಮತ್ತು ಮಧ್ಯಾಹ್ನ ಜೀವಶಾಸ್ತ್ರ ಪರೀಕ್ಷೆ ನಡೆಯಲಿದೆ. ಜ.23ರಿಂದಲೇ ಸಿಇಟಿ ಅರ್ಜಿ ಸಲ್ಲಿಕೆ ಪ್ರಾರಂಭವಾಗಿದ್ದು, ಈ ವರ್ಷ 3.30 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆ ಬರೆಯುವ ನೀರಿಕ್ಷೆಯಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಮಾಹಿತಿ ನೀಡಿದ್ದಾರೆ.

## ರಾಜ್ಯ ಸರ್ಕಾರದ ನಡೆ ಖಂಡಿಸಿ ಏ. 14ರಂದು ಲಾರಿ ಮಾಲೀಕರ ಮುಷ್ಕರ



ಉದಯವಾಹಿನಿ ಚಿತ್ರ

• ಉದಯವಾಹಿನಿ ಬೆಂಗಳೂರು

ಅಗತ್ಯ ವಸ್ತುಗಳ ದರ ಏರಿಕೆ ಬೆನ್ನಲ್ಲೇ ರಾಜ್ಯ ಸರ್ಕಾರ ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ಹೆಚ್ಚಿಸಿದ್ದು ಇದು ಲಾರಿ ಮಾಲೀಕರ ಆಕ್ರೋಶಕ್ಕೆ ಕಾರಣವಾಗಿದೆ. ಡೀಸೆಲ್ ದರ ಏರಿಕೆ ಖಂಡಿಸಿ ಏಪ್ರಿಲ್ 14ರ ಮಧ್ಯರಾತ್ರಿಯಿಂದ ಲಾರಿ ಮಾಲೀಕರ ಸಂಘ ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಲು ನಿರ್ಧರಿಸಿದೆ.

ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ಎರಡು ರೂಪಾಯಿ ಹೆಚ್ಚಳ ಮಾಡಿ ರಾಜ್ಯ ಸರ್ಕಾರ ಈಗಾಗಲೇ ಆದೇಶ ಹೊರಡಿಸಿದೆ.

ಇದು ಲಾರಿ ಮಾಲೀಕರ ಆಕ್ರೋಶಕ್ಕೆ ಕಾರಣವಾಗಿದೆ. ಹೀಗಾಗಿ ಮುಷ್ಕರಕ್ಕೆ ಕರೆ ನೀಡಿದ್ದು 5 ಲಕ್ಷ ಲಾರಿಗಳು ಸಂಚಾರ ನಿಲ್ಲಿಸಲಿವೆ.

**ಮುಷ್ಕರಕ್ಕೆ ಯಾರ್ಯಾರ ಬೆಂಬಲ**

- 5 ಲಕ್ಷ ಲಾರಿ ಬಂದ್
- ಏರ್ ಪೋರ್ಟ್ ಟ್ಯಾಕ್ಸಿ ಬಂದ್
- ಗೂಡ್ಸ್ ವಾಹನಗಳು, ಪೆಟ್ರೋಲ್ ಡಿಸೇಲ್ ಲಾರಿ ಬಂದ್
- ಜಲ್ಲಿಕಲ್ಲು, ಮರಳು ಲಾರಿ ಬಂದ್
- ಚಾಲಕರ ಸಂಘದಿಂದ ಬಂದ್

# ಹೆಚ್ಚಾದ ಕಟೌಟ್, ಬ್ಯಾನರ್ ಹಾವಳಿ

### ಅರಮನೆ ಮೈದಾನದಲ್ಲಿ ಕಾಂಗ್ರೇಸ್ ಸಮಿತಿ ಪದಾಧಿಕಾರಿಗಳ ಪದಗ್ರಹಣ ಸಮಾರಂಭ

• ಉದಯವಾಹಿನಿ, ಬೆಂಗಳೂರು

ನಗರದ ಹಲವೆಡೆ ಶುಭಕೋರುವ ಫ್ಲೆಕ್ಸ್‌ಗಳು ರಾರಾಜಿಸುತ್ತಿವೆ. ಸಚಿವರು, ಶಾಸಕರು, ಸ್ಥಳೀಯ ಮುಖಂಡರ ಹೆಸರಿನಲ್ಲಿ ಎಲ್ಲಾ ಪಕ್ಷಗಳ ನಾಯಕರಿರುವ ಫ್ಲೆಕ್ಸ್‌ಗಳನ್ನು ತೆರವುಗೊಳಿಸಲು ಬಿಬಿಎಂಪಿ ಅಧಿಕಾರಿಗಳು ಹಿಂಜರಿಯುತ್ತಿದ್ದಾರೆ.
ಮೈಸೂರು ರಸ್ತೆಯಲ್ಲಿರುವ ಗಾಳಿ ಆಂಜನೇಯ ದೇವಸ್ಥಾನದ ಸುತ್ತಮುತ್ತ ಕಾಂಗ್ರೆಸ್, ಬಿಜೆಪಿ ನಾಯಕರ ಕಟೌಟ್, ಬ್ಯಾನರ್‌ಗಳ ಹಾವಳಿ ಹೆಚ್ಚಾಗಿದ್ದು, ಹಲವೆಡೆ ರಸ್ತೆಯಲ್ಲೇ ಅಳವಡಿಸಿರುವುದರಿಂದ ಸಂಚಾರ ದಟ್ಟಣೆಗೂ ಕಾರಣವಾಗಿದೆ.

ಅರಮನೆ ಮೈದಾನದಲ್ಲಿ ಯುವ ಕಾಂಗ್ರೆಸ್ ಸಮಿತಿ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ನಡೆದ ಸಂದರ್ಭದಲ್ಲಿ ಬಳ್ಳಾರಿ ರಸ್ತೆಯುದ್ದಕ್ಕೂ ಫ್ಲೆಕ್ಸ್ ಬ್ಯಾನರ್‌ಗಳನ್ನು ಅಳವಡಿಸಲಾಗಿತ್ತು. ಅದನ್ನು ಕಂಡಿದ್ದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಎಲ್ಲವನ್ನೂ ತೆರವುಗೊಳಿಸಿ, ದಂಡ ಹಾಕಿ, ಎಫ್‌ಐಆರ್ ದಾಖಲಿಸಲು ಸೂಚಿಸಿದ್ದರು. ಅದರಂತೆ 12 ಎಫ್‌ಐಆರ್ ದಾಖಲಿಸುವುದರ ಜೊತೆಗೆ ರೂ.12 ಲಕ್ಷ ದಂಡವನ್ನೂ ಬಿಬಿಎಂಪಿ ಅಧಿಕಾರಿಗಳು ವಿಧಿಸಿದ್ದರು. ಗೋವಿಂದರಾಜನಗರ, ವಿಜಯನಗರ, ಮೈಸೂರು ರಸ್ತೆ, ಜಂಕ್ಷನ್, ಪ್ರದೇಶಗಳಲ್ಲಿ ಶುಭ ಕೋರಿ ಫ್ಲೆಕ್ಸ್‌ಗಳನ್ನು ಹಾಕಲಾಗಿದೆ. ನಾಗರಿಕರು ಈ ಬಗ್ಗೆ ದೂರು ನೀಡಿದ್ದರೂ, ಬಿಬಿಎಂಪಿ ಅಧಿಕಾರಿಗಳು ತೆರವುಗೊಳಿಸಲು ಮುಂದಾಗುತ್ತಿಲ್ಲ. ಸಚಿವರು ಹೇಳಿದಾಗ ಮಾತ್ರ ಒಂದೆರಡು ದಿನ ಫ್ಲೆಕ್ಸ್ ತೆರವು ಕಾರ್ಯಾಚರಣೆ ನಡೆಸುತ್ತಾರೆ. ಬಿಬಿಎಂಪಿ ಅಧಿಕಾರಿಗಳು ಈ ವಿಷಯದಲ್ಲಿ ಜನರ ಕಣ್ಮರೆಸುವ ತಂತ್ರ ಮಾಡುತ್ತಿದ್ದಾರೆ. ನಂತರ ಫ್ಲೆಕ್ಸ್‌ಗಳು ರಾರಾಜಿಸುತ್ತಲೇ ಇರುತ್ತವೆ ಎಂದು ವಿಜಯನಗರ ನಿವಾಸಿ ವಿಶ್ವನಾಥ ದೂರಿದರು.



ಉದಯವಾಹಿನಿ ಚಿತ್ರ

ಸಚಿವರು, ಶಾಸಕರ ಹೆಸರಿನಲ್ಲೇ ಹಲವು ಫ್ಲೆಕ್ಸ್‌ಗಳಿವೆ. ಅವುಗಳನ್ನು ತೆರವುಗೊಳಿಸಲು ಮುಂದಾದರೆ ಹಿರಿಯ ಅಧಿಕಾರಿಗಳಿಂದ ನಮಗೆ ಒತ್ತಡಹಾಕಿ, ತೆರವುಗೊಳಿಸದಂತೆ ತಡೆಯಲಾಗುತ್ತದೆ.

ಕೆಲವು ಬಾರಿ ಅವರೇ ಕರೆ ಮಾಡಿ ಬೈಯ್ಯುತ್ತಾರೆ.

> **ಮೈಸೂರು ರಸ್ತೆ-ಬಿಎಚ್‌ಇಎಲ್ ಜಂಕ್ಷನ್‌ನಲ್ಲಿ ಶಾಸಕ ಎಂ. ಕೃಷ್ಣಪ್ಪ ಹಾಗೂ ಅವರ ಮಕ್ಕಳಿಬ್ಬರ ಬೃಹತ್ ಕಟೌಟ್‌ಗಳನ್ನು ಸಂಚಾರ ದಟ್ಟಣೆ ನಿರ್ವಹಣೆಗೆ ಅಳವಡಿಸಲಾಗಿರುವ ಅತ್ಯಾಧುನಿಕ ತಂತ್ರಜ್ಞಾನದ ಕ್ಯಾಮೆರಾಗಳಿಗೆ ಅಡ್ಡಲಾಗಿ ಹಾಕಲಾಗಿದೆ. ಈ ಜಂಕ್ಷನ್ ಅನ್ನು ಸುಮಾರು ರೂ.20 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದ್ದು. ಚನ್ನಪಟ್ಟಣ ಗೊಂಬೆಗಳ ಪ್ರತಿಕೃತಿಗಳನ್ನೂ ಅಳವಡಿಸಲಾಗುತ್ತಿದೆ. ಆದರೆ, ಇಲ್ಲಿ ಜಂಕ್ಷನ್‌ನಲ್ಲಿ ಕಟೌಟ್ ಹಾಗೂ ಬ್ಯಾನರ್‌ಗಳೂ ಯಾವಾಗಲೂ ರಾರಾಜಿಸುತ್ತಿರುತ್ತವೆ. ಬಿಬಿಎಂಪಿಯವರು ತೆರವು ಮಾಡುವುದಿಲ್ಲ ಎಂಬುದು ಸ್ಥಳೀಯರ ಆರೋಪ.**

ಇನ್ನು ಅವರಿಗೆ ದಂಡ ವಿಧಿಸುವುದು. ಕ್ರಮ ತೆಗೆಕೊಳ್ಳುವುದು ಕಷ್ಟಸಾಧ್ಯ.

ಅವರ ಆಪ್ತರಿಗೆ ನೋಟಿಸ್ ಕೊಟ್ಟರೂ ಅದು ಪ್ರಯೋಜನಕ್ಕೆ ಬರುವುದಿಲ್ಲ ಎಂದು ಹೆಸರು ಹೇಳಲು ಇಚ್ಛಿಸದ ಬಿಬಿಎಂಪಿಯ ಅಧಿಕಾರಿಗಳು ಅಳಲು ತೋಡಿಕೊಂಡರು.

## ಕಾಫಿ, ಚಹಾದ ಜತೆಗೆ ತಿಂಡಿ ದರ ಏರಿಕೆ

• ಉದಯವಾಹಿನಿ, ಬೆಂಗಳೂರು



ಡೀಸೆಲ್, ಹಾಲು, ವಿದ್ಯುತ್ ಹಾಗೂ ಅಗತ್ಯ ವಸ್ತುಗಳ ದರ ಹೆಚ್ಚಳದ ಕಾರಣ ಕಾಫಿ, ಚಹಾ ಜತೆಗೆ ತಿಂಡಿಗಳ ದರವನ್ನು ಗರಿಷ್ಠ ರೂ.5ರಷ್ಟು ಹೆಚ್ಚಿಸಲು ಹೋಟೆಲ್ ಮಾಲೀಕರು ನಿರ್ಧರಿಸಿದ್ದಾರೆ. ಗ್ರಾಹಕರಿಗೆ ಹೊರೆಯಾಗದಂತೆ ದರ ಹೆಚ್ಚಿಸಲು ಬೃಹತ್ ಬೆಂಗಳೂರು ಹೋಟೆಲುಗಳ ಸಂಘ, ಹೋಟೆಲ್ ಮಾಲೀಕರಿಗೆ ನಿರ್ದೇಶನ ನೀಡಿದೆ. ಕಾಫಿ ಪುಡಿಯ ದರ ಹೆಚ್ಚಳವಾದ ಕಾರಣ ಎಲ್ಲಾ ಹೋಟೆಲ್‌ಗಳಲ್ಲಿ ಕಾಫಿ ದರವನ್ನು ಶೇ 10ರಿಂದ ಶೇ 15ರಷ್ಟು ಅಥವಾ ರೂ.2ರಿಂದ ರೂ.3 ಹೆಚ್ಚಳ ಮಾಡುವಂತೆ ಸಂಘವು ಸೂಚಿಸಿತ್ತು. ಇದರ ಬೆನ್ನಲ್ಲಿಯೇ ಹಲವು ಹೋಟೆಲ್‌ಗಳು ಕಾಫಿ ದರವನ್ನು ಹೆಚ್ಚಳ ಮಾಡಿದ್ದವು. ಈಗ ಹಾಲಿನ ದರವೂ ಏರಿದ ಕಾರಣ ಉಳಿದ ಹೋಟೆಲ್‌ಗಳು ಸಹ ಕಾಫಿ ಜತೆಗೆ ಚಹಾದ ದರವನ್ನೂ ರೂ.2ರಿಂದ ರೂ.3ರವರೆಗೆ ಹೆಚ್ಚಿಸಿವೆ. ತಿಂಡಿ ದರಗಳನ್ನು ರೂ.3ರಿಂದ ರೂ.5ರವರೆಗೆ ಹೆಚ್ಚಳ ಮಾಡುವಂತೆ ಸಂಘವು ಹೋಟೆಲ್‌ಗಳಿಗೆ ತಿಳಿಸಿದೆ. ಇದರಿಂದಾಗಿ ಹೋಟೆಲ್‌ಗಳು ಶೀಘ್ರದಲ್ಲಿಯೇ ಗರಿಷ್ಠ 5ರವರೆಗೂ ದರ ಹೆಚ್ಚಿಸಲಿವೆ. 'ಕಾಫಿ ಪುಡಿ ದರವು ದುಪ್ಪಟ್ಟಾದ ಪರಿಣಾಮ ಕಾಫಿ ಬೆಲೆ ಏರಿಕೆ ಬಗ್ಗೆ ಫೆಬ್ರುವರಿಯಲ್ಲಿ ನಿರ್ಧಾರ ಕೈಗೊಳ್ಳಲಾಗಿತ್ತು. ಈಗ ಹಾಲಿನ ದರವೂ ಏರಿಕೆಯಾಗಿರುವುದರಿಂದ ಚಹಾದ ದರವನ್ನೂ ಹೋಟೆಲ್‌ಗಳಲ್ಲಿ ರೂ.2ರಿಂದ 3ರವರೆಗೆ ಹೆಚ್ಚಿಸಲಾಗಿದೆ' ಎಂದು ಬೃಹತ್ ಬೆಂಗಳೂರು ಹೋಟೆಲುಗಳ ಸಂಘದ ಗೌರವಾಧ್ಯಕ್ಷ ಪಿ.ಸಿ.ರಾವ್ ತಿಳಿಸಿದರು.

> **ಹಾಲಿನ ಜತೆಗೆ ಅದರ ಉಪ ಉತ್ಪನ್ನಗಳು ಹಾಗೂ ಅಗತ್ಯ ವಸ್ತುಗಳ ದರ ಹೆಚ್ಚಾಗಿದೆ. ಆದ್ದರಿಂದ ತಿಂಡಿಗಳ ದರ ಏರಿಕೆ ಅನಿವಾರ್ಯ. ಆದರೆ, ಅದರಿಂದ ಗ್ರಾಹಕರಿಗೆ ಹೊರೆಯಾಗಬಾರದು ಎಂದು ಸೂಚಿಸಲಾಗಿದೆ. ಹೋಟೆಲ್‌ಗಳ ಮಾಲೀಕರು ವೆಚ್ಚವನ್ನು ಆಧರಿಸಿ ದರ ಹೆಚ್ಚಳ ಮಾಡುತ್ತಾರೆ' ಎಂದು ಸಂಘದ ಗೌರವ ಕಾರ್ಯದರ್ಶಿ ವೀರೇಂದ್ರ ಎನ್. ಕಾಮತ್ ಹೇಳಿದರು.**

## ಸರ್ಕಾರಕ್ಕೆ ಗವರ್ನರ್ ತರಾಟೆ; ಪತ್ರ ಬರೆದು ಗೆಹ್ಲೋಟ್ ಆಕ್ರೋಶ

• ಉದಯವಾಹಿನಿ, ಬೆಂಗಳೂರು

ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯಕ್ಕೆ ಕುಲಪತಿ ನೇಮಕ ವಿಚಾರದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಸರಕಾರದ ವಿರುದ್ಧ ಸಿಡಿಮಿಡಿಗೊಂಡಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನೇರವಾಗಿ ಪತ್ರ ಬರೆದು ಆಕ್ರೋಶ ಹೊರಹಾಕಿದ್ದಾರೆ.

ಗದಗದ ಗ್ರಾಮೀಣಾಭಿವೃದ್ಧಿ ವಿವಿ ಕುಲಪತಿ ನೇಮಕ ಅಧಿಕಾರವನ್ನು ರಾಜ್ಯಪಾಲರ ಬದಲಿಗೆ ಸಿಎಂಗೆ ನೀಡುವ ಸಂಬಂಧ ತಿದ್ದುಪಡಿ ವಿಧೇಯಕ ರೂಪಿಸಲಾಗಿದೆ. ಆದರೆ, ಈ ಕಾನೂನು ತಿದ್ದುಪಡಿ ಬಗ್ಗೆ ಆಕ್ಷೇಪ ಎತ್ತಿರುವ ರಾಜ್ಯಪಾಲರು ಸ್ಪಷ್ಟನೆ ಬಯಸಿ ವಾಪಸ್ ಕಳಿಸಿದ್ದು, ಇನ್ನೂ ಒಪ್ಪಿಗೆ ನೀಡಿಲ್ಲ.

ಹಾಗಾಗಿ, 2024ರ ಮೇ 25ರಿಂದ ಖಾಲಿ ಇರುವ ವಿವಿ ಕುಲಪತಿ ಹುದ್ದೆ ನೇಮಕಕ್ಕೆ ಸರಕಾರ ಆಸಕ್ತಿ ತೋರಿಲ್ಲ. ಇದು ರಾಜ್ಯಪಾಲರನ್ನು ಕೆರಳುವಂತೆ ಮಾಡಿದೆ. ಗದಗದ ಆರ್‌ಡಿಪಿಆರ್ ವಿವಿ ಕುಲಪತಿ ನೇಮಕ ಸಂಬಂಧ ಅರ್ಜಿ ಆಹ್ವಾನಿಸಲು ಸಚಿವ ಪ್ರಿಯಾಂಕ ಖರ್ಗೆ ಅವರಿಗೆ ಸೂಚಿಸಿ ತಾವು ಹಲವು ಬಾರಿ ಪತ್ರ ಬರೆದಿರುವುದನ್ನು ಉಲ್ಲೇಖಿಸಿದ್ದಾರೆ. ಈ ನೇಮಕ ಕುರಿತಂತೆ ಹಿಂದೆಯೇ ಶೋಧನಾ ಸಮಿತಿ ರಚನೆಯಾಗಿತ್ತು. ಆದರೆ, ಇದುವರೆಗೂ ಅರ್ಜಿಯನ್ನೇ ಆಹ್ವಾನಿಸಿಲ್ಲ ಎಂದು ಪ್ರಸ್ತಾಪಿಸಿದ್ದಾರೆ. ಶೋಧನಾ ಸಮಿತಿಯನ್ನು ರಚಿಸಲಾಗಿದೆ. ಹಿಂದಿನ ಕುಲಪತಿಯ ಅವಧಿ ಪೂರ್ಣಗೊಳ್ಳುವ ಮೊದಲೇ ಅಧಿಸೂಚನೆಯನ್ನು ಹೊರಡಿಸಲಾಗಿದೆ, ಆದರೆ ರಾಜ್ಯ ಸರ್ಕಾರ ಅರ್ಜಿಗಳನ್ನು ಕರೆಯದ ಕಾರಣ ಶೋಧನಾ ಸಮಿತಿಯು ಇನ್ನೂ ತನ್ನ ಕೆಲಸವನ್ನು ಪ್ರಾರಂಭಿಸಲು ಕಾಯುತ್ತಿದೆ ಎಂದು ಅವರು ಹೇಳಿದರು.

> **ವಿದ್ಯಾರ್ಥಿಗಳು, ಸಂಶೋಧಕರು ಹಾಗೂ ವಿಶ್ವವಿದ್ಯಾಲಯದ ಹಿತದೃಷ್ಟಿಯಿಂದ ಕೂಡಲೇ ಕುಲಪತಿ ನೇಮಕ ಪ್ರಕ್ರಿಯೆ ಆರಂಭಿಸಲು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು. ತಪ್ಪಿದರೆ, ನಾನೇ ಅಂತಹ ಕ್ರಮ ತೆಗೆದುಕೊಳ್ಳುವುದು ಅನಿವಾರ್ಯವಾಗಬಹುದು. ರಾಜ್ಯ ಸರಕಾರ ಅಂತಹ ಸಂದರ್ಭ ಎದುರಾಗಲು ಅವಕಾಶ ಕೊಡಬಾರದು. ವಿಶ್ವವಿದ್ಯಾಲಯಗಳ ಏಳಿಗೆಗೆ ಅನಗತ್ಯ ತೊಡಕು ಸೃಷ್ಟಿಯಾಗದಂತೆ ಎಚ್ಚರ ವಹಿಸಬೇಕು'' ಎಂದು ಕಿವಿಮಾತು ಹೇಳಿದ್ದಾರೆ.**



ಈಗಿರುವ ಕಾಯಿದೆಯಂತೆ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾನಿಲಯದ ಉಪಕುಲಪತಿ ಹುದ್ದೆಗೆ ಅರ್ಜಿಗಳನ್ನು ಕರೆಯಲು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿ, ವಿದ್ಯಾರ್ಥಿಗಳ ಮೇಲೆ ಪರಿಣಾಮ ಬೀರುವ ಹುದ್ದೆಯನ್ನು ದೀರ್ಘಕಾಲದವರೆಗೆ ಖಾಲಿ ಬಿಡಬೇಡಿ. ಈ ನಿಟ್ಟಿನಲ್ಲಿ 1 ತಿಂಗಳೊಳಗೆ ನಿರ್ಣಾಯಕ ಕ್ರಮ ತೆಗೆದುಕೊಳ್ಳಬೇಕು. ಇಲ್ಲದೇ ಹೋದರೆ ತಾವೇ ಅರ್ಜಿ ಕರೆಯಬೇಕಾಗುತ್ತದೆ ಎಂದು ರಾಜ್ಯಪಾಲರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬರೆದಿರುವ ಸುದೀರ್ಘ ಪತ್ರದಲ್ಲಿ ಎಚ್ಚರಿಸಿದ್ದಾರೆ.

## ಬಾಣಂತಿಯರ ಡೆತ್ ಆಡಿಟ್ ವರದಿಯಲ್ಲಿ ಉಲ್ಲೇಖ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

**ದಿನೇಶ್ ಗುಂಡೂರಾವ್ ಹೇಳಿಕೆ**

ಕಳೆದ ಏಪ್ರಿಲ್ ಮತ್ತು ಡಿಸೆಂಬರ್ ನಡುವೆ ಕರ್ನಾಟಕದಲ್ಲಿ ವರದಿಯಾದ 464 ತಾಯಂದಿರ ಸಾವುಗಳಲ್ಲಿ 70% ಕ್ಕಿಂತ ಹೆಚ್ಚು ತಾಯಂದಿರ ಸಾವನ್ನು ತಡೆಯಬಹುದಿತ್ತು ಎಂದು ರಾಜ್ಯ ಸರ್ಕಾರದ ತಾಯಂದಿರ ಮರಣ ಲೆಕ್ಕ ಪರಿಶೋಧನಾ ವರದಿಯ ತಿಳಿಸಿದೆ.

ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿನ ಲೋಪಗಳನ್ನು ವರದಿಯು ಎತ್ತಿ ತೋರಿಸಿದೆ. ಕನಿಷ್ಠ 10 ಸಾವುಗಳು ವೈದ್ಯರ ನಿರ್ಲಕ್ಷ್ಯಕ್ಕೆ ಸಂಬಂಧಿಸಿವೆ, ಆದರೆ 18 ಸಾವುಗಳು ರಿಂಗರ್‌ನ ಲ್ಯಾಕ್ಟೇಟ್ ದ್ರವದ ಬಳಕೆಗೆ ಸಂಬಂಧಿಸಿವೆ ಎಂದು ವರದಿಯನ್ನು ಬಿಡುಗಡೆ ಮಾಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. 70% ತಾಯಂದಿರ ಸಾವುಗಳನ್ನು ಸಕಾಲಿಕ ಆರೈಕೆ ಮತ್ತು ವೈದ್ಯಕೀಯ ಪ್ರೋಟೋಕಾಲ್‌ಗಳ ಅನುಸರಣೆಯಿಂದ ತಡೆಯಬಹುದಿತ್ತು ಎಂದು ಹೇಳಿದರು. ಶೇ 68.05 ರಷ್ಟು ಸಾವಿಗೆ ಅಧಿಕ ರಕ್ತದೊತ್ತಡ, ಹೃದ್ರೋಗ, ಡಯಾಬಿಟಿಸ್, ಸೋಂಕು ಮುಂತಾದವುಗಳು ಕಾರಣವಾಗಿದೆ. ಹೆರಿಗೆಯನ್ನು ಹೆಚ್ಚಾಗಿ ಕೇಂದ್ರ ಸರ್ಕಾರದ ಮಾರ್ಗಸೂಚಿಗಳು ಮತ್ತು ಉಲ್ಲೇಖಿತ ಪ್ರೋಟೋಕಾಲ್‌ಗಳಿಗೆ ವಿರುದ್ಧವಾಗಿ ಮಾಡಲಾಗುತ್ತಿತ್ತು.

ಡಿಸೆಂಬರ್‌ನಿಂದ ಇದನ್ನು ಸರಿಪಡಿಸಲು ತಯಾರಿ ಮಾಡಿದ್ದೇವೆ. ಫ್ರೆಷ್ ಫ್ರೋಜನ್ ಪ್ಲಾಸ್ಮಾ ಇದ್ದಿದ್ದರೆ ಸಾವಿನ ಸಂಖ್ಯೆ ತಡೆಯಬಹುದಿತ್ತು. ಹೀಗಾಗಿ ಈ ನಿಟ್ಟಿನಲ್ಲಿ ಸಾಕಷ್ಟು ಸುಧಾರಣಾ ಕ್ರಮಗಳನ್ನು ಕೈಗೊಳ್ಳುವ ಅವಶ್ಯಕತೆ ಇದೆ ಎಂದು ದಿನೇಶ್ ಗುಂಡೂರಾವ್ ಹೇಳಿದರು.

ಶೇ.63ರಷ್ಟು ತಾಯಂದಿರು ಸಿಸೇರಿಯನ್ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರೆ, ಶೇ.37ರಷ್ಟು ಮಂದಿ ಬಾಣಂತಿಯರಿಗೆ ಸಾಮಾನ್ಯ ಹೆರಿಗೆಗಳಾಗಿವೆ. ಭವಿಷ್ಯದಲ್ಲಿ ತಾಯಂದಿರ ಸಾವನ್ನು ತಪ್ಪಿಸಲು 27 ಶಿಫಾರಸುಗಳನ್ನು ಮಾಡಲಾಗಿದೆ. ಪ್ರಸವ ಪೂರ್ವ ಮತ್ತು ಪ್ರಸವಾನಂತರದ ಸೇವೆಗಳನ್ನು ಉತ್ತಮಪಡಿಸುವುದರ ಜತೆಗೆ ಸೌಲಭ್ಯಗಳ ಸುಧಾರಣೆ ಬಗ್ಗೆಯೂ ಒತ್ತು ನೀಡಲು ಸೂಚಿಸಲಾಗಿದೆ. ಮುಖ್ಯವಾಗಿ, ಉತ್ತಮ ಕಟ್ಟಡ ಸೌಲಭ್ಯ, ಉಪಕರಣಗಳು, ಔಷಧಗಳು, ರಕ್ತನಿಧಿ, ಸಾಮಾನ್ಯ ಹೆರಿಗೆ ಆದವರು 3 ದಿನಗಳು ಮತ್ತು ಸಿಸೇರಿಯನ್ ಆದವರು 7 ದಿನಗಳು ಕಡ್ಡಾಯವಾಗಿ ಆಸ್ಪತ್ರೆಯಲ್ಲಿ ಉಳಿದುಕೊಳ್ಳಲು ವ್ಯವಸ್ಥೆ ಮಾಡಬೇಕು. ಪ್ರಸ್ತುತ ಶೇ. 57 ರಲ್ಲಿರುವ ತಾಯಂದಿರ ಮರಣ ಅನುಪಾತ (ಎಂಎಂಆರ್) ವನ್ನು ಶೇ. 20 ಕ್ಕಿಂತ ಕಡಿಮೆ ಮಾಡಲು ಸರ್ಕಾರ ಕೆಲಸ ಮಾಡುತ್ತಿದೆ ಎಂದು ಹೇಳಿದರು. ತಮಿಳುನಾಡು ಶೇ 54 ಎಂಎಂಆರ್ ಹೊಂದಿದ್ದರೆ, ಕೇರಳದಲ್ಲಿ ಕೇವಲ18 ಇದೆ ಎಂದು ವಿವರಿಸಿದ್ದಾರೆ.

ಸುಮಾರು 10% ಸಾವುಗಳು ಸಾಗಣೆ ವೇಳೆ ಸಂಭವಿಸಿವೆ ಎಂದು ಸಂಶೋಧನೆಗಳು ಬಹಿರಂಗಪಡಿಸಿವೆ. ಸಾವನ್ನಪ್ಪಿದ ಹೆಚ್ಚಿನ ಮಹಿಳೆಯರು 19 ರಿಂದ 25 ವರ್ಷ ವಯಸ್ಸಿನವರಾಗಿದ್ದರು, ಮತ್ತು ಅನೇಕರು ಮೊದಲ ಅಥವಾ ಎರಡನೇ ಬಾರಿಗೆ ತಾಯಂದಿರಾಗಿದ್ದರು, ಅವರು ಅಧಿಕ ರಕ್ತದೊತ್ತಡ, ಮಧುಮೇಹ ಅಥವಾ ಅಪಾಯಕಾರಿ ಹೃದಯ ಸಮಸ್ಯೆಗಳನ್ನು ಹೊಂದಿದ್ದರು ಎಂದು ಅವರು ಹೇಳಿದರು. ರಿಂಗರ್ ಲ್ಯಾಕ್ಟೇಟ್ ಸಮಸ್ಯೆಗೆ ಸಂಬಂಧಿಸಿದ 18 ಬಾಣಂತಿಯರ ಸಾವುಗಳಾಗಿವೆ. ಅದರಲ್ಲಿ 5 ಬಳ್ಳಾರಿ, 4 ರಾಯಚೂರು, 4 ಬೆಂಗಳೂರು ನಗರ, 3 ಉತ್ತರ ಕನ್ನಡ ಮತ್ತು ಯಾದಗಿರಿ ಮತ್ತು ಬೆಳಗಾವಿಯಲ್ಲಿ ತಲಾ ಒಂದು ಪ್ರಕರಣ ದಾಖಲಾಗಿತ್ತು ಹೀಗಾಗಿ ಸರ್ಕಾರವು ವಿವರವಾದ ತಾಯಂದಿರ ಮರಣ ಲೆಕ್ಕಪರಿಶೋಧನೆ ನಡೆಸಿತ್ತು.

## ಮೇ ಮೊದಲ ವಾರ ಎಸ್‌ಎಸ್‌ಎಲ್‌ಸಿ ಫಲಿತಾಂಶ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳ ಮುಕ್ತಾಯಗೊಂಡಿದ್ದು, ಏಪ್ರಿಲ್ 15ರಿಂದ ರಾಜ್ಯಾದ್ಯಂತ ಸುಮಾರು 240ಕ್ಕೂ ಹೆಚ್ಚು ಕೇಂದ್ರಗಳಲ್ಲಿ ಮೌಲ್ಯಮಾಪನ ನಡೆಯಲಿದೆ. ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಮಾ.21ರಿಂದ ಆರಂಭಿಸಿದ ಎಸ್ಸೆಸ್ಸೆಲ್ಸಿ ಪರೀಕ್ಷೆ ಏ.4ಕ್ಕೆ ಮುಕ್ತಾಯಗೊಂಡಿವೆ. ಏ.11ರಿಂದ ಕೋಡಿಂಗ್ ಹಾಗೂ ಡಿಕೋಡಿಂಗ್ ಪ್ರಕ್ರಿಯೆ ನಡೆದ ನಂತರ ಏ.15ರಿಂದ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯ ಆರಂಭವಾಗಲಿದೆ. ಒಟ್ಟು 2818 ಕೇಂದ್ರಗಳಲ್ಲಿ 8.96 ಲಕ್ಷ ವಿದ್ಯಾರ್ಥಿಗಳು ಈ ಬಾರಿ ಪರೀಕ್ಷೆ ಬರೆದಿದ್ದಾರೆ. 6 ವಿಷಯಗಳಿಂದ ವಿದ್ಯಾರ್ಥಿಗಳ 55 ಲಕ್ಷಕ್ಕೂ ಹೆಚ್ಚು ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯ ನಡೆಯಲಿದೆ. ಮೌಲ್ಯಮಾಪನ ಕಾರ್ಯಕ್ಕೆ ಈ ಬಾರಿ 75 ಸಾವಿರಕ್ಕೂ ಹೆಚ್ಚು ಶಿಕ್ಷಕರನ್ನು ನಿಯೋಜಿಸಲಾಗಿದೆ. ಮೌಲ್ಯಮಾಪನ ಕಾರ್ಯಕ್ಕೆ ನಿಯೋಜಿಸಿರುವ ಎಲ್ಲಾ ಶಿಕ್ಷಕರೂ ಕಡ್ಡಾಯವಾಗಿ ಹಾಜರಾಗಬೇಕು ಎಂದು ಸೂಚಿಸಲಾಗಿದೆ. ಇನ್ನೂ ಮೌಲ್ಯಮಾಪನ ಮುಕ್ತಾಯವಾದ ನಂತರ 10ನೇ ತರಗತಿ ಫಲಿತಾಂಶ ಮಂಡಳಿಯಿಂದ ಅಧಿಕೃತವಾಗಿ ಪ್ರಕಟಣೆ ಆಗಲಿದೆ ಇದಕ್ಕೆ ದಿನಾಂಕವನ್ನು ಕೂಡ ಮಂಡಳಿಯು ಅಧಿಕೃತವಾಗಿ ಪ್ರಕಟಿಸುತ್ತದೆ ಸಾಮಾನ್ಯವಾಗಿ ಮೌಲ್ಯಮಾಪನ ಪ್ರಕ್ರಿಯೆಯು ಸಂಪೂರ್ಣಗೊಂಡ ಬಳಿಕ ಎರಡು ವಾರದ ಒಳಗಾಗಿ ಫಲಿತಾಂಶ ಪ್ರಕಟಣೆಯಾಗುವ ಸಾಧ್ಯತೆ ಇದೆ ಎನ್ನಲಾಗಿದೆ. ಕಳೆದ ಬಾರಿ 10ನೇ ತರಗತಿ ಪರೀಕ್ಷಾ ಫಲಿತಾಂಶ ಮೇ ತಿಂಗಳಿನಲ್ಲಿ ಪ್ರಕಟಣೆಯಾಗಿತ್ತು. ಈ ವರ್ಷವೂ ಕೂಡ 2025 ನೇ ಮೇ ಮೊದಲ ವಾರದಲ್ಲಿ ಪ್ರಕಟಣೆ ಮಾಡುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ.



ಉದಯವಾಹಿನಿ ಚಿತ್ರ

## ಪತ್ನಿಯ ಕುತ್ತಿಗೆ ಕೊಯ್ದು ಹತ್ಯೆ : ಪತಿ ಸೆರೆ

• ಉದಯವಾಹಿನಿ ಬೆಂಗಳೂರು,

ನಡು ರಸ್ತೆಯಲ್ಲೇ ತನ್ನ ಪತ್ನಿಯ ಕುತ್ತಿಗೆ ಕೊಯ್ದು ಹತ್ಯೆಗೈದ ಪತಿಯನ್ನು ನಗರದ ಎಲೆಕ್ಟ್ರಾನಿಕ್ ಸಿಟಿ ಠಾಣಾ ಪೊಲೀಸರು ಬಂಧಿಸಿರುವುದಾಗಿ ತಿಳಿಸಿದ್ದಾರೆ. ಬಾಗೇಪಲ್ಲಿ ಮೂಲದ ಶಾರದ35) ಹತ್ಯೆಯಾದ ಮಹಿಳೆ ಎಂದು ಗುರುತಿಸಲಾಗಿದೆ. ಕೃಷ್ಣ ಎಂಬಾತ ಪತ್ನಿಯನ್ನು ಕೊಂದ ಪತಿ. ಅಕ್ರಮ ಸಂಬಂಧದ ಆರೋಪದಡಿ ಪತಿ ತನ್ನ ಪತ್ನಿಯನ್ನು ಕೊಲೆ ಮಾಡಿದ್ದಾನೆ ಎಂಬ ಶಂಕೆ ಇದೆ ಎಂದು ಪೊಲೀಸರು ತಿಳಿಸಿದ್ದಾರೆ.ಎ.4ರ ರಾತ್ರಿ 8 ಗಂಟೆ ಸುಮಾರಿಗೆ ನಗರದ ದೊಡ್ಡ ತೋಗೂರು ಬಳಿಯ ಪ್ರಗತಿ ನಗರದಲ್ಲಿ ಈ ಘಟನೆ ನಡೆದಿದೆ. ಪತ್ನಿ ಕೆಲಸ ಮುಗಿಸಿ ನಿರ್ಜನ ರಸ್ತೆಯಲ್ಲಿ ಮನೆಗೆ ತೆರಳುತ್ತಿದ್ದ ವೇಳೆ ಪತಿ ದಾಳಿ ನಡೆಸಿದ್ದಾನೆ. ಪತ್ನಿಯನ್ನು ಕೊಲ್ಲಲು ಎರಡು ಚಾಕು ತಂದಿದ್ದ ಪತಿ ಆಕೆಯ ಕುತ್ತಿಗೆ ಸೀಳಿ ಕೊಲೆ ಮಾಡಿದ್ದಾನೆ. ಕೊಲೆ ಮಾಡಿದ ಬಳಿಕ ಪರಾರಿಯಾಗುತ್ತಿದ್ದ ಆರೋಪಿ ಪತಿಯನ್ನು ಸ್ಥಳೀಯರು ಹಿಡಿದು ತಮಗೆ ಒಪ್ಪಿಸಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.ಎ.4ರ ರಾತ್ರಿ 8 ಗಂಟೆ ಸುಮಾರಿಗೆ ನಗರದ ದೊಡ್ಡ ತೋಗೂರು ಬಳಿಯ ಪ್ರಗತಿ ನಗರದಲ್ಲಿ ಈ ಘಟನೆ ನಡೆದಿದೆ.

ಪತ್ನಿ ಕೆಲಸ ಮುಗಿಸಿ ನಿರ್ಜನ ರಸ್ತೆಯಲ್ಲಿ ಮನೆಗೆ ತೆರಳುತ್ತಿದ್ದ ವೇಳೆ ಪತಿ ದಾಳಿ ನಡೆಸಿದ್ದಾನೆ. ಪತ್ನಿಯನ್ನು ಕೊಲ್ಲಲು ಎರಡು ಚಾಕು ತಂದಿದ್ದ ಪತಿ ಆಕೆಯ ಕುತ್ತಿಗೆ ಸೀಳಿ ಕೊಲೆ ಮಾಡಿದ್ದಾನೆ. ಕೊಲೆ ಮಾಡಿದ ಬಳಿಕ ಪರಾರಿಯಾಗುತ್ತಿದ್ದ ಆರೋಪಿ ಪತಿಯನ್ನು ಸ್ಥಳೀಯರು ಹಿಡಿದು ತಮಗೆ ಒಪ್ಪಿಸಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.ಈ ಘಟನೆ ಮಾಹಿತಿ ನೀಡಿರುವ ಆಗ್ನೆಯ ವಿಭಾಗದ ಡಿಸಿಪಿ ಸಾರ ಫಾತಿಮಾ, ಎ.4ರಂದು ಸುಮಾರು 8:00 ಗಂಟೆ ಸಮಯದಲ್ಲಿ ನಮ್ಮ ಕಂಟ್ರೋಲ್ ರೂಮ್‌ಗೆ ಮಾಹಿತಿ ಬಂದಿತ್ತು. ಎಲೆಕ್ಟ್ರಾನಿಕ್ ಸಿಟಿ ಪಿಎಸ್‌ಐ ಮತ್ತು ಸಿಬ್ಬಂದಿ ಸ್ಥಳಕ್ಕೆ ಹೋಗಿದ್ದಾರೆ. ಕೂಡಲೇ ನಮ್ಮ ಪೊಲೀಸರು ಆರೋಪಿಯನ್ನು ಬಂಧಿಸಿದ್ದು ಯಾವ ವಿಚಾರಕ್ಕೆ ಕೊಲೆಯಾಗಿದೆ ಎಂಬ ಬಗ್ಗೆ ತನಿಖೆ ನಡೆಯುತ್ತಿದೆ. ಮರಣೋತ್ತರ ಪರೀಕ್ಷೆ ಬಂದ ನಂತರ ಸಂಪೂರ್ಣ ವಿಚಾರ ಗೊತ್ತಾಗುತ್ತದೆ. ಈ ಸಂಬಂಧ ಎಲೆಕ್ಟ್ರಾನ್ ಸಿಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದರು.

# ತೇಜೋವಧೆಗೆ ಕೀಳುಮಟ್ಟದ ರಾಜಕಾರಣ: ಎಚ್‌ಡಿಕೆ ಕಿಡಿ

### 40 ವರ್ಷಗಳ ಹಿಂದೆ 47 ಎಕರೆ ಭೂಮಿಯನ್ನು ಸಿನಿಮಾ ನಿರ್ಮಾಪಕನಾಗಿದ್ದಾಗ ಖರೀದಿ ಮಾಡಿದ್ದೆ

• ಉದಯವಾಹಿನಿ ಬೆಂಗಳೂರು



ಉದಯವಾಹಿನಿ ಚಿತ್ರ

**ಸಚಿವ ಎಚ್.ಡಿ ಕುಮಾರಸ್ವಾಮಿ ಆರೋಪ**

ರಾಜ್ಯಸರ್ಕಾರ ತಮ ತೇಜೋವಧೆಗೆ ಕೀಳುಮಟ್ಟದ ರಾಜಕಾರಣ ಮಾಡುತ್ತಿದ್ದು, ಸುಳ್ಳು, ಭೂ ಒತ್ತುವರಿ ಹಗರಣವನ್ನು ಮುಂದಿಟ್ಟು ಬಾಯಿ ಮುಚ್ಚಿಸುವ ಪ್ರಯತ್ನ ನಡೆಸಿದೆ ಎಂದು ಸಚಿವ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದ್ದಾರೆ. ಪಕ್ಷದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೂರ್ನಾಲ್ಕು ತಿಂಗಳಿನಿಂದಲೂ ತಾವು ಮಾಧ್ಯಮಗಳ ಜೊತೆ ಮಾತನಾಡಿಲ್ಲ. ಇನ್ನೂ ಮೂರು ತಿಂಗಳು ಸುಮನಿರಬೇಕೆಂದು ಕೊಂಡಿದ್ದೆ.
ಆದರೆ ಇವರ ಆರೋಪಗಳನ್ನು ನೋಡಿ ಮನಸ್ಸು ತಡೆಯುತ್ತಿಲ್ಲ ಎಂದು ಹೇಳಿದರು.

ಅಮೆರಿಕದ ಟ್ರಂಪ್ ಬಗ್ಗೆ ಸಂಸದರೊಬ್ಬರು ನಿರಂತರವಾಗಿ 25 ಗಂಟೆ ಕಾಲ ಮಾತನಾಡಿದ್ದರು ಎಂಬ ದಾಖಲೆ ಇದೆ. ನಾನು ದಿನದ 24 ಗಂಟೆ ಕಾಲ ಬೆಳಿಗ್ಗೆಯವರೆಗೂ ಮಾತನಾಡುವ ಅವಕಾಶ ಇದೆ ಎಂದರು.
40 ವರ್ಷಗಳ ಹಿಂದೆ 47 ಎಕರೆ ಭೂಮಿಯನ್ನು ಸಿನಿಮಾ ನಿರ್ಮಾಪಕನಾಗಿದ್ದಾಗ ಖರೀದಿ ಮಾಡಿದ್ದೆ. ಅದರಲ್ಲಿ ಒತ್ತುವರಿ ಯಾಗಿದ್ದರೆ ದಾಖಲೆಗಳಲ್ಲಿ ಸರಿಪಡಿಸಿಕೊಳ್ಳಿ ಎಂದು ನಾನೇ ಹೇಳಿದ್ದೇನೆ. ಆದರೂ ದುರುದ್ದೇಶಪೂರ್ವಕವಾಗಿ ನನ್ನ ವರ್ಚಸ್ಸಿಗೆ ಧಕ್ಕೆ ಉಂಟುಮಾಡಲು ನಾನಾ ರೀತಿಯ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಪೊಲೀಸರ ಬಿಗಿ ಭದ್ರತೆಯಲ್ಲಿ ಸರ್ವೆ ಮಾಡುವ ಪ್ರಯತ್ನ ಮಾಡಿದ್ದಾರೆ. ದೇವೇಗೌಡರ ಕುಟುಂಬಕ್ಕೆ ನಾನಾ ರೀತಿಯ ಹಿಂಸೆ ನೀಡಿರುವುದು ಹೊಸತಲ್ಲ ಎಂದರು.

71 ಎಕರೆ ಗೋಮಾಳ ಒತ್ತುವರಿಯಾಗಿದೆ ಎಂದು ಸಾಮಾಜಿಕ ಪರಿವರ್ತನಾ ಸಂಸ್ಥೆ ಆರೋಪ ಮಾಡಿದೆ. ನನ್ನ ಸುಪರ್ದಿಯಲ್ಲಿರುವುದೇ 47 ಎಕರೆ. ಇನ್ನು 71 ಎಕರೆ ಎಲ್ಲಿಂದ ಬರುತ್ತದೆ ಎಂದು ಪ್ರಶ್ನಿಸಿದರು. ರಾಜಕಾರಣದಲ್ಲಿ ನಾನು ಮಾಜಿ ಪ್ರಧಾನಿಯ ಮಗ. ಎರಡು ಬಾರಿ ಮುಖ್ಯಮಂತ್ರಿಯಾಗಿದ್ದವನು. ಕೇವಲ 4 ಎಕರೆ ಒತ್ತುವರಿ ಮಾಡಿಕೊಳ್ಳಬೇಕೆ ಎಂದು ಕಿಡಿಕಾರಿದರು.

ಕುಮಾರಸ್ವಾಮಿ ಮಹಾ ಅಪರಾಧ ಮಾಡಿದ್ದಾರೆ ಎಂದು ನಾಡಿನ ಜನರ ಮುಂದೆ ಬಿಂಬಿಸಲು ಸಾಕಷ್ಟು ಪ್ರಯತ್ನ ಮಾಡುತ್ತಿದ್ದಾರೆ. ಅಧಿಕಾರ ಯಾರಿಗೂ ಶಾಶ್ವತವಲ್ಲ. ಈ ಸರ್ಕಾರದ ಪ್ರಯತ್ನಗಳು ನನಗೆ ಜ್ಞಾನೋದಯ ಮಾಡಿವೆ. ನನ್ನ ವಿರುದ್ಧ ಯಾವ ಮಟ್ಟಿನ ದ್ವೇಷ ಸಾಧಿಸುತ್ತಿದ್ದಾರೆ ಎಂದರೆ ನಾನು ಖರೀದಿಸಿದ ಜಮೀನಿನ ಮೂಲ ಮಾಲಿಕರಿಗೆ ನೋಟೀಸ್ ನೀಡಿ ಪೊಲೀಸರ ಮೂಲಕ ವಿಚಾರಣೆಗೊಳಪಡಿಸುತ್ತಿದ್ದಾರೆ. ಪೊಲೀಸರಿಗೂ, ಕಂದಾಯ ಇಲಾಖೆಗೂ ಏನು ಸಂಬಂಧ ಎಂದು ಕುಮಾರಸ್ವಾಮಿ ಪ್ರಶ್ನಿಸಿದರು. ಜಂತಕಲ್ ಮೈನಿ, ಸಾಯಿ ಟ್ರೇಡರ್‌ರಸ ಸೇರಿದಂತೆ ಹಲವಾರು ಕಂಪನಿಗಳ ಹೆಸರಿನಲ್ಲಿ ನನ್ನ ಹೆಸರು ಕೆಡಿಸುವ ಪ್ರಯತ್ನ ನಡೆದಿತ್ತು ಎಂದು ತಿಳಿಸಿದರು. ನಾನು ಬಿಬಿಎಂಪಿಯಲ್ಲಿ ಕಸ ತೆಗೆಯುತ್ತಿದ್ದೆ ಎಂದು ಉಪಮುಖ್ಯಮಂತ್ರಿ ಹೇಳಿದ್ದಾರೆ. ಹೌದು, ಬಿಎಸ್ಸಿ ಓದುವಾಗ ನಾಗರಿಕನಾಗಿ ಸುಧಾಮ್‌ನಗರ, ಹೊಂಬೆನಗರ, ಕೆಂಪೇಗೌಡ ನಗರ ಸೇರಿದಂತೆ 3 ವಾರ್ಡ್‌ಗಳಲ್ಲಿ ಕಸ ತೆಗೆಯುವ ಟೆಂಡರ್ ಪಡೆದಿದ್ದೆ. ಹೊಟ್ಟೆಪಾಡಿಗೆ ನನ್ನ ಕೆಲಸ ನಾನು ಮಾಡುತ್ತಿದ್ದೆ. ಆಗ ವಿಧಾನಪರಿಷತ್‌ನಲ್ಲಿ ನಾಗೇಗೌಡರು ವಿಷಯ ಪ್ರಸ್ತಾಪಿಸಿ ದೇವೇಗೌಡರನ್ನು ಟೀಕಿಸಿದರು. ನನ್ನ ತಂದೆ ದೇವೇಗೌಡರು ಇನ್ನು ಮುಂದೆ ಸರ್ಕಾರದ ಗುತ್ತಿಗೆ ಪಡೆದು ಕಾಮಗಾರಿ ಮಾಡಬೇಡ ಎಂದು ಸೂಚನೆ ಮಾಡಿದರು. ಅದರಿಂದೀಚೆಗೆ ನಾನು ಗುತ್ತಿಗೆ ಕಾಮಗಾರಿಗಳನ್ನು ನಿಲ್ಲಿಸಿದೆ ಎಂದರು.

> **ಸಿವಿಲ್ ವಿಚಾರಗಳಿಗೆ ಪ್ರತ್ಯೇಕ ಕಾನೂನುಗಳಿವೆ. ಹೆಚ್ಚುವರಿ ಪೊಲೀಸ್ ಮುಖ್ಯಾಧಿಕಾರಿ ಮೂಲಕ ನೋಟೀಸ್ ಕೊಡಿಸಿ ವಿಚಾರಣೆ ನಡೆಸುವುದು ದೇಶದಲ್ಲಿ ಎಲ್ಲೂ ನೋಡಿಲ್ಲ. ಯಾವ ಎಸ್‌ಐಟಿ ತನಿಖೆ ಮಾಡುತ್ತಿದೆ ಎಂದು ಏಕವಚನದಲ್ಲಿ ಖಾರವಾಗಿ ಪ್ರತಿಕ್ರಿಯಿಸಿದರು. ನನ್ನನ್ನು ಹೆದರಿಸುವ ಯಾವ ಪ್ರಯತ್ನಗಳೂ ಯಶಸ್ವಿಯಾಗಿಲ್ಲ. ಈ ಪ್ರಕರಣದಲ್ಲಿ ನಾನು ಕಾನೂನು ಹೋರಾಟವನ್ನು ಮುಂದುವರೆಸುತ್ತೇನೆ ಎಂದರು.**

> **ಜಮೀನು ಒತ್ತುವರಿಯನ್ನು ನೆಪಮಾಡಿ ನನ್ನ ಬಾಯಿ ಮುಚ್ಚಿಸುವ ಪ್ರಯತ್ನ ಮಾಡಿದರೆ ಅದು ನಡೆಯುವುದಿಲ್ಲ. ನನಗೆ ಅಕ್ರಮ ಮಾಡಿದರೆ ಅದನ್ನು ಸರಿಪಡಿಸಿಕೊಳ್ಳಲು ಕೆಲ ನಿಮಿಷಗಳು ಸಾಕಿತ್ತು. ಮುಡಾ ಹಗರಣದಲ್ಲಿ ಈಗ ಅಧಿಕಾರ ದುರುಪಯೋಗಪಡಿಸಿಕೊಂಡು ಪ್ರಕರಣ ಮುಚ್ಚಿಹಾಕಲು ಏನೆಲ್ಲಾ ಪ್ರಯತ್ನ ಮಾಡುತ್ತಿದ್ದಾರೆ. ನಾನು ಎಂದೂ ಕೂಡ ಅಧಿಕಾರಿಗಳಿಗೆ ಈ ವಿಚಾರವಾಗಿ ಸೂಚನೆ ನೀಡಿಲ್ಲ ಎಂದರು**

ಅಂತರಾಳದಿಂದ.. EDITORIAL

# ವಕ್ಫ್ ಮಸೂದೆ: ಸಲಹೆ, ಸೂಚನೆ ಗಣನೆಗೆ ತೆಗೆದುಕೊಳ್ಳದಿರುವುದು ಸರಿಯಲ್ಲ




ಆದರೆ, ವಿರೋಧ ಪಕ್ಷಗಳೆಲ್ಲವೂ ಮಸೂದೆಯನ್ನು ಒಮ್ಮತದಿಂದ ವಿರೋಧಿಸಿವೆ. ಇದು, ಅಲ್ಪಸಂಖ್ಯಾತರ ಹಕ್ಕುಗಳ ಉಲ್ಲಂಘನೆ ಮತ್ತು ಧಾರ್ಮಿಕ ಸ್ವಾತಂತ್ರ್ಯದ ದಮನ ಎಂದು ವಾದಿಸಿವೆ. 1995ರ ವಕ್ಫ್ ಕಾಯ್ದೆಗೆ ತಿದ್ದುಪಡಿ ತರುವುದು ಈ ಮಸೂದೆಯ ಉದ್ದೇಶ. ವಕ್ಫ್ ಮಂಡಳಿಯಲ್ಲಿ ಸದಸ್ಯರು ಯಾರಾಗಿರಬೇಕು, ವಕ್ಫ್ ಆಸ್ತಿ ಎಂದು ಬದಲಾವಣೆಗೆ ಇರುವ ಮಾನದಂಡ ಮತ್ತು ವಕ್ಫ್ ಅಸ್ತಿ ಎಂದು ಘೋಷಿಸುವ ಮಂಡಳಿಯ ಅಧಿಕಾರಕ್ಕೆ ಸಂಬಂಧಿಸಿದ ವಿಚಾರಗಳು ಮುಖ್ಯ ತಿದ್ದುಪಡಿಗಳಾಗಿವೆ. ಮಸೂದೆಯಲ್ಲಿ ಇರುವ ಕೆಲವು ಅಂಶಗಳು ವಿವಾದಾತ್ಮಕವಾಗಿವೆ. ವಕ್ಫ್‌ನ ಹಲವು ಅಸ್ತಿಗಳು ಒತ್ತುವರಿಯಾಗಿವೆ. ಹಲವು ಆಸ್ತಿಗಳು ವ್ಯಾಜ್ಯದಲ್ಲಿವೆ. ಹೀಗಾಗಿ, ವಕ್ಫ್ ವ್ಯವಸ್ಥೆಯ ಸುಧಾರಣೆಯ ಅಗತ್ಯ ಇದೆ. ಹಲವು ಆಸ್ತಿಗಳ ಸ್ಥಿತಿಯ ಕುರಿತು ಗೊಂದಲ ಇದೆ. ಒಂಬತ್ತು ಲಕ್ಷ ಎಕರೆಗೂ ಹೆಚ್ಚಿನ ಆಸ್ತಿ ಇದ್ದು ಅವುಗಳ ಉತ್ತಮ ನಿರ್ವಹಣೆ ಅಗತ್ಯವಾಗಿದೆ. ಆದರೆ, ಸುಧಾರಣೆ ಅಂದರೆ ನಿಯಂತ್ರಣಕ್ಕೆ ತೆಗೆದುಕೊಳ್ಳುವುದು ಎಂದಲ್ಲ.

**ಎರಡು ದಿನಗಳ ಚರ್ಚೆಯ ಬಳಿಕ ವಕ್ಫ್ ತಿದ್ದುಪಡಿ ಮಸೂದೆಯನ್ನು ಸಂಸತ್ತು ಅಂಗೀಕರಿಸಿದೆ. ಸಾಮಾನ್ಯವಾಗಿ ಅಧಿವೇಶನವು ಗದ್ದಲ, ಕೋಲಾಹಲದಲ್ಲಿಯೇ ಮುಗಿದುಹೋಗುತ್ತದೆ. ಆದರೆ, ಈ ಬಾರಿ ಅವು ಯಾವುವೂ ಇಲ್ಲದೆ ಚರ್ಚೆ ನಡೆದಿದೆ. ವಾಕ್ಸಮರ, ಆರೋಪ-ಪ್ರತ್ಯಾರೋಪಗಳು ಇದ್ದವು. ಆದರೆ, ಮಾಹಿತಿಪೂರ್ಣ ಚರ್ಚೆಯು ಸಂಸದೀಯ ಸಂವಾದದ ಮಾನದಂಡಕ್ಕೆ ಅನುಗುಣವಾಗಿಯೇ ನಡೆದಿದೆ. ಈ ಮಸೂದೆಗೆ ರಾಷ್ಟ್ರಪತಿಯವರು ಸಹಿ ಮಾಡಿ ಕಾಯ್ದೆಯಾದ ಬಳಿಕವೂ ಈ ಕುರಿತು ಚರ್ಚೆ ಮುಂದುವರಿಯಲಿದೆ. ಮಸೂದೆ ಮಂಡಿಸಿದ ಸರ್ಕಾರವು ಈಗ ಇರುವ ವಕ್ಫ್ ಕಾಯ್ದೆಯ ಸುಧಾರಣೆಗೆ ಇಂತಹ ಮಸೂದೆ ಅತ್ಯಗತ್ಯ ಎಂದು ಪ್ರತಿಪಾದಿಸಿದೆ. ಪಾರದರ್ಶಕತೆ, ವಕ್ಫ್ ಅಸ್ತಿಗಳ ಉತ್ತಮ ನಿರ್ವಹಣೆಗೆ ಕಾಯ್ದೆ ಬೇಕಾಗಿದೆ ಎಂದು ಹೇಳಿದೆ.**

ಮುಸ್ಲಿಂ ಸಮುದಾಯದಲ್ಲಿ ಶಂಕೆ ಇದೆ ಮತ್ತು ವಕ್ಫ್ ಆಸ್ತಿಗಳನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳುವುದೇ ಮಸೂದೆಯ ಉದ್ದೇಶ ಎಂದು ವಿರೋಧ ಪಕ್ಷಗಳು ಆರೋಪ ಮಾಡಿವೆ. ಇಸ್ಲಾಂ ಧರ್ಮವನ್ನು ಕನಿಷ್ಠ ಐದು ವರ್ಷ ಅನುಸರಿಸಿದ ವ್ಯಕ್ತಿ ಮಾತ್ರ ವಕ್‌ಗೆ ದಾನ ನೀಡಬಹುದು ಮತ್ತು ವಕ್ಫ್ ಮಂಡಳಿಯಲ್ಲಿ ಮುಸ್ಲಿಮೇತರರ ಸೇರ್ಪಡೆ ಅವಕಾಶದ ಕುರಿತು ಗಂಭೀರ ಕಳವಳ ವ್ಯಕ್ತವಾಗಿದೆ. ವಕ್ಫ್ ಗೆ ಮುಸ್ಲಿಮೇತರರೂ ಹಿಂದೆ ದಾನ ಮಾಡಿದ್ದಾರೆ. ವ್ಯಕ್ತಿಯೊಬ್ಬರು ಇಸ್ಲಾಂ ಧರ್ಮವನ್ನು ಅನುಸರಿಸುತ್ತಿದ್ದಾರೆ ಎಂಬ ಪ್ರಮಾಣಪತ್ರ ನೀಡುವುದಕ್ಕೆ ಹೇಗೆ ಸಾಧ್ಯ ಅಂತಹ ಪ್ರಮಾಣಪತ್ರ ನೀಡುವ ಪ್ರಾಧಿಕಾರ ಯಾವುದು? ಇತರ ಸಮುದಾಯಗಳಿಗೆ ಸೇರಿದ ಸಂಸ್ಥೆಗಳ ಸದಸ್ಯತ್ವವನ್ನು ಆ ಸಮುದಾಯಗಳಿಗೇ ಮೀಸಲಿಡಲಾಗಿದೆ. ವಕ್ಫ್ ಆಸ್ತಿಯ ಮೇಲೆ ಸರ್ಕಾರವು ನಿಯಂತ್ರಣ ಹೇರುವುದಕ್ಕೆ ಮಸೂದೆಯಲ್ಲಿ ಇರುವ ಕೆಲವು ಅಂಶಗಳು ಅವಕಾಶ ಕೊಡುತ್ತವೆ. ಮಸೂದೆಯು ಈಗಿನ ಸ್ವರೂಪದಲ್ಲಿ ಧಾರ್ಮಿಕ ಸ್ವಾತಂತ್ರ್ಯವನ್ನು ಉಲ್ಲಂಘಿಸುತ್ತದೆ. ಏಕೆಂದರೆ, ವಕ್ಫ್ ವ್ಯವಸ್ಥೆಯು ಧಾರ್ಮಿಕ ನಂಬಿಕೆ ಮತ್ತು ಅಲ್ಪಸಂಖ್ಯಾತ ಸಮುದಾಯದ ಆಚರಣೆಗಳಿಗೆ ಸಂಬಂಧಿಸಿದ್ದಾಗಿದೆ. ಈ ಮಸೂದೆ ಮತ್ತು ಅದರಲ್ಲಿ ಪ್ರಸ್ತಾಪಿಸಿರುವ ತಿದ್ದುಪಡಿಗಳು ಮುಸ್ಲಿಂ ಸಮುದಾಯದ ಹಿತಾಸಕ್ತಿಯನ್ನು ಕಾಪಾಡುವ ಉದ್ದೇಶ ಹೊಂದಿವೆ ಎಂದು ಸರ್ಕಾರ ಹೇಳಿದೆ. ಆದರೆ, ಮಸೂದೆ ರೂಪಿಸುವಾಗ ಸಮುದಾಯದ ಜೊತೆಗೆ ಸಮಾಲೋಚನೆ ನಡೆಸಿಲ್ಲ. ಜಂಟಿ ಸಂಸದೀಯ ಸಮಿತಿಯು ನಡೆಸಿದ ಸಮಾಲೋಚನೆ ಮತ್ತು ಪರಿಶೀಲನೆ ಕೂಡ ವಿವಾದಕ್ಕೆ ಒಳಗಾಗಿತ್ತು. ವಿರೋಧ ಪಕ್ಷಗಳ ಸದಸ್ಯರು ನೀಡಿದ ಯಾವುದೇ ಶಿಫಾರಸು ಸೇರ್ಪಡೆ ಆಗಿಲ್ಲ. ಅಲ್ಪಸಂಖ್ಯಾತ ಸಮುದಾಯವನ್ನು ಪ್ರತಿನಿಧಿಸುವ ಸಂಘಟನೆಗಳು ಮತ್ತು ಪಕ್ಷಗಳು ಮಸೂದೆಯಲ್ಲಿ ಇರುವ ಹಲವು ಅಂಶಗಳನ್ನು ವಿರೋಧಿಸಿವೆ. ಅಲ್ಪಸಂಖ್ಯಾತ ಸಮುದಾಯಕ್ಕೆ ಕಿರುಕುಳ ನೀಡಿ ದುರ್ಬಲಗೊಳಿಸುವ ರಾಜಕೀಯ ಕ್ರಮ ಎಂಬ ಟೀಕೆಯೂ ಇದೆ. ಮಸೂದೆಯ ಸಾಂವಿಧಾನಿಕ ಸಿಂಧುತ್ವವು ನ್ಯಾಯಾಲಯದಲ್ಲಿ ಪರಿಶೀಲನೆಗೆ ಒಳಪಡುವ ಸಾಧ್ಯತೆ ಇದೆ.

# ರಾಮಾಯಣ



## ಸೀತಾ ರಾಮ ಲಕ್ಷ್ಮಣರು ದಾನ ಮಾಡಿದ್ದು

• ಹಿಂದಿನ ಸಂಚಿಕೆಯಿಂದ 78 ನೆಯ ಅಧ್ಯಾಯ

ಅವರು ರಾಜಬೀದಿಯಲ್ಲಿ ಬರುತ್ತಿರಲು ಆ ಬೀದಿಯು ನೋಟಕ ಜನರಿಂದ ಎಡೆಬಿಡದೆ ಇಟ್ಟಣಿಸಿತ್ತು. ಪುರಜನಗಳು ಮೇಲುಮಚ್ಚುಗಳನ್ನು ಹತ್ತಿಕೊಂಡು ಅವರನ್ನು ನೋಡುತ್ತಿದ್ದರು. ಸಮಸ್ತ ಜನಗಳೂ ರಾಜಚಿಹ್ನೆಗಳಾದ ಬಿಳಿಯ ಕೊಡೆಗಳು ಮೊದಲಾದವಿಲ್ಲದೆ ಕಾಲುನಡೆಯಿಂದ ಬರುತ್ತಿದ್ದ ಶ್ರೀರಾಮನನ್ನು ಕಂಡು ಅತ್ಯಂತ ದುಃಖಾತಿಶಯದಿಂದ ಒಬ್ಬರಿಗೊಬ್ಬರು ಹೀಗೆ ಮಾತನಾಡತೊಡಗಿದರು: ಅಕಟಕಟಾ! ಶ್ರೀರಾಮನು ಹೊರಟರೆ ಆತನ ಹಿಂದೆ ಚತುರಂಗ ಬಲಗಳು ಬರುತ್ತಿದ್ದುವು. ಈಗ ಆ ರಾಜಚಿಹ್ನೆಗಳಾದ ಛತ್ರಚಾಮರ ಮೊದಲಾದವು ಯಾವುದೂ ಇಲ್ಲದೆ ಸೀತಾಸಮೇತನಾಗಿ ನಡೆದುಹೋಗುತ್ತಿದ್ದಾನೆ. ಆತನ ಹಿಂದೆ ಲಕ್ಷ್ಮಣನೂ ಹೋಗುತ್ತಿದ್ದಾನೆ. ಅಯ್ಯೋ! ಶ್ರೀರಾಮನು ಸಮಸ್ತೈಶ್ವರ ಸಂಪನ್ನನಾಗಿ ತನ್ನ ಭಕ್ತರಿಗೆ ಬೇಕಾದ ಇಷ್ಟಾರ್ಥವನ್ನು ಕೊಡುವಂಥವನು, ಧರ್ಮವನ್ನು ಪರಿಪಾಲಿಸುವವನು. ಹುಸಿಮಾತನ್ನು ಒಂದು ಸಾರಿಯಾದರೂ ನುಡಿದವನಲ್ಲ. ಮೊದಲು ಅಂತರಿಕ್ಷಮಾರ್ಗದಲ್ಲಿದ್ದವರಿಗೂ ಸೀತಾದೇವಿ ಯನ್ನು ಕಾಣಲು ಶಕ್ಯವಾಗಿರಲಿಲ್ಲ. ಈಗ ಹತ್ತರೊಳಗೆ ಹನ್ನೊಂದಾಗಿ ಹೋಗುತ್ತಿದ್ದಾಳೆ.

ಆ ದೇವಿಯನ್ನು ಎಲ್ಲರೂ ನೋಡುವಂತಾಯಿತು! ಕಸ್ತೂರಿ ಕುಂಕುಮ ಶ್ರೀಗಂಧ ಮೊದಲಾದ ಅನುಲೇಪನಗಳಿಂದ ಅಲಂಕರಿಸಲ್ಪಟ್ಟಿದ್ದ ಸೀತಾದೇವಿಯು ಮಳೆ ಬಿಸಿಲು ಶೈತ್ಯಗಳ ಬಾಧೆಗೊಳಗಾದರು. ದಶರಥರಾಯನು ಈ ದೇವಿಯ ಅವಸ್ಥೆಯನ್ನು ಕಂಡರೆ ಶ್ರೀರಾಮನನ್ನು ವನಕ್ಕೆ ಕಳುಹಿಸನು. ಲೋಕದಲ್ಲಿ ತಂದೆಯಾದವನು ಮಗನು ದುರ್ಗುಣವುಳ್ಳವನಾದರೂ ಅವನನ್ನು ಮನೆಯಿಂದ ಹೊರಡಿಸುವುದಿಲ್ಲ. ಹಾಗಿರುವಲ್ಲಿ ಉತ್ತಮನಾಗಿ ಸದ್ಗುಣಸಂಪನ್ನನಾದ ಮಗನನ್ನು ಹೊರಡಿಸುವನೆ! ಶ್ರೀರಾಮನು ತನ್ನ ಸದ್ವರ್ತನದಿಂದ ಸಮಸ್ತ ಲೋಕದವರನ್ನೂ ತನ್ನ ವಶವತಿಗಳನ್ನಾಗಿ ಮಾಡಿಕೊಂಡಿದ್ದನು. ನಿಂದೆ ಕ್ರೋಧ ದುರ್ವರ್ತನೆ ದ್ರೋಹಗಳನ್ನು ಮನಸ್ಸಿನಲ್ಲಿ ನೆನೆಯದೆ ಧರ್ಮಗುಣವುಳ್ಳವನಾಗಿ ಪರರ ಅವಗುಣಗಳನ್ನು ಕಂಡು ತಾಳಿಕೊಂಡಿರುವ ಶಮಗುಣ ವುಳ್ಳವನಾಗಿ ವಿದ್ಯಾಪ್ರವೀಣನಾದ ಪುರುಷೋತ್ತಮನನ್ನು ದಶರಥರಾಯನು ವನವಾಸಕ್ಕೆ ಕಳುಹಿಸಲಾರನು. ಸಮಸ್ತ ಪ್ರಾಣಿಗಳಿಗೂ ರಕ್ಷಕನಾದ ಶ್ರೀರಾಮನಿಗೆ ಮನೋವ್ಯಥೆಯಾದ ಪಕ್ಷದಲ್ಲಿ ಸಮಸ್ತ ಪ್ರಾಣಿಗಳಿಗೂ ವ್ಯಥೆಯಾಗುವುದು. ಜಲಚರಪ್ರಾಣಿಗಳು ಬೇಸಿಗೆಯಕಾಲದಲ್ಲಿ ಉದಕಕ್ಷಯವಾದರೆ ತಾವೂ ಕ್ಷಯವಾಗುವಂತೆ ಶ್ರೀರಾಮನಿಗೆ ಮನೋವ್ಯಥೆಯಾದರೆ ಸಕಲ ಪ್ರಾಣಿಗಳಿಗೂ ಮನೋವ್ಯಥೆಯಾಗುವುದು. ಫಲಪುಷ್ಪಗಳಿಂದ ಮನೋಹರವಾದ ವೃಕ್ಷವನ್ನು ಬೇರುಸಹಿತ ಕಿತ್ತುಹಾಕಿದರೆ ಆ ಮರದ ಫಲವುಪ್ಪ ಗಳೆಲ್ಲವೂ ಕಂದುವಂತೆ ಈತನಿಗೆ ವ್ಯಥೆಯುಂಟಾದರೆ ಸಮಸ್ತ ಪ್ರಾಣಿಗಳೂ ವ್ಯಥೆಪಡುವುವು. ಈತನು ಧರ್ಮವೆಂಬ ವೃಕ್ಷಕ್ಕೆ ಬೇರಾಗಿರುವನು. ಉಳಿದ ಪ್ರಾಣಿಗಳು ಆ ಧರ್ಮವೃಕ್ಷದಲ್ಲಿ ಫಲಪುಷ್ಪಗಳಾಗಿರುವರು. ಈತನ ಸಂಗಡ ಲಕ್ಷ್ಮಣನು ಹೋಗುವಂತೆ ನಾವೂ ನಮ್ಮ ಬಂಧುಗಳನ್ನು ಕೂಡಿಕೊಂಡು ಈತನ ಹಿಂದೆ ಹೋಗೋಣ! ನಾವೂ ನಮ್ಮ ಕ್ಷೇತ್ರ ಮನೆ ಉದ್ಯಾನವನಗಳನ್ನು ಬಿಟ್ಟು ಆತನ ಸುಖದುಃಖಗಳೇ ನಮ್ಮ ಸುಖದುಃಖಗಳೆಂದು ತಿಳಿದು ಆತನು ಹೋಗುವ ದಾರಿಗೊಂಡು ಹೋಗೋಣ! ಧನಧಾನ್ಯಾದಿಗಳು ಮೊದಲಾದ ವಸ್ತುಶೂನ್ಯವಾಗಿ, ಅಲಂಕಾರರಹಿತವಾಗಿ

ಮುಂದುವರಿಯುವುದು...

# ಶ್ರೀರಾಮ ಜನ್ಮ ತಾಳುವ ಹಿಂದೆ ಇರುವ ಹಲವು ಉದ್ದೇಶಗಳು

■ ಶ್ರೀ. ವಿನೋದ್ ಕಾಮತ್

ಶ್ರೀರಾಮಚರಿತಮಾನಸದಲ್ಲಿ ಹರಿಯ ಅವತಾರಕ್ಕೆ ಯಾವ ಕಾರಣವಿರುತ್ತದೆಯೋ, ಆ ಕಾರಣವೇ ಮೂಲ ಎಂದು ಹೇಳಲಾಗುವುದಿಲ್ಲ.

ಶ್ರೀಹರಿಯ ಶ್ರೀರಾಮಾವತಾರದ ವಿಷಯದಲ್ಲಿಯೂ ಇಂತಹ ಅನೇಕ ತಿಳಿದಿರುವ ಮತ್ತು ಅಜ್ಞಾತ ಕಾರಣಗಳಿವೆ. ಅವು ಪ್ರತಿ ಕಲ್ಪ-ಯುಗದಲ್ಲಿ ಪ್ರಭು ಶ್ರೀರಾಮನ ಜನ್ಮ ಧರಿಸುವುದನ್ನು ನಿಶ್ಚಯಿಸುತ್ತವೆ.

1. ಜಯ-ವಿಜಯರಿಗೆ ತಗುಲಿದ ಶಾಪ, ಅವರನ್ನು ಮುಕ್ತಗೊಳಿಸಲು ಜನ್ಮತಾಳಿದ ಶ್ರೀ ರಾಮಚಂದ್ರ

ಶ್ರೀಹರಿಯ ಇಬ್ಬರು ಪ್ರೀತಿಯ ದ್ವಾರಪಾಲಕರಾದ ಜಯ ಮತ್ತು ವಿಜಯ ಎಂದು ನಮಗೆಲ್ಲರಿಗೂ ತಿಳಿದಿದೆ. ಸನಕಾದಿಯ ಶಾಪದಿಂದಾಗಿ ಇಬ್ಬರೂ ಸಹೋದರರು ರಾಕ್ಷಸರ ತಾಮಸಿಕ ದೇಹಗಳನ್ನು ಪಡೆದರು. ಒಂದು ಜನ್ಮದಲ್ಲಿ, ಅವರು ಭೂಮಿಗೆ ಬಂದು ರಾವಣ ಮತ್ತು ಕುಂಭಕರ್ಣ ಎಂಬ ಹೆಸರಿನ, ದೇವತೆಗಳ ಮೇಲೆಯೇ ಜಯ ಸಾಧಿಸಿದ, ಅತ್ಯಂತ ಶಕ್ತಿಶಾಲಿ ಮತ್ತು ಮಹಾವೀರ ರಾಕ್ಷಸರಾದರು. ಅವರ ಸಂಹಾರಕ್ಕಾಗಿ ಶ್ರೀ ರಾಮಚಂದ್ರನ ಜನ್ಮವಾಯಿತು.

2. ಜಾಲಂಧರನೆಂಬ ದೈತ್ಯನನ್ನು ಯುದ್ಧದಲ್ಲಿ ವಧಿಸಿ ಅವನಿಗೆ ಪರಮಪದವನ್ನು ನೀಡಿದ ಶ್ರೀರಾಮ

ಒಂದು ಕಲ್ಪದಲ್ಲಿ, ಜಾಲಂಧರನೆಂಬ ಪ್ರಬಲ ರಾಕ್ಷಸನು ಯುದ್ಧದಲ್ಲಿ ಎಲ್ಲಾ ದೇವತೆಗಳನ್ನು ಸೋಲಿಸಿದನು. ದೇವತೆಗಳು ದುಃಖಿತರಾದುದನ್ನು ನೋಡಿದ ಶಿವನು ಜಾಲಂಧರನೊಡನೆ ಘೋರ ಯುದ್ಧವನ್ನು ಮಾಡಿದನು; ಆದರೆ ಆ ಮಹಾಬಲಿ ರಾಕ್ಷಸನ ಹತ್ತಿ ಸಾವು ಸಳಿಯುತ್ತಿರಲಿಲ್ಲ. ಆ ದೈತ್ಯ ರಾಜನ ಪತ್ನಿ ವೃಂದಾ ಮಹಾ ಪತಿವ್ರತೆ, ಇದರಿಂದಾಗಿ ತ್ರಿಪುರಾಸುರನಂತಹ ಅಜೇಯ ಶತ್ರುವನ್ನು ನಾಶಪಡಿಸಿದ ಶಿವನೂ ಆ ಜಾಲಂಧರ ದೈತ್ಯನನ್ನು ಜಯಿಸಲು ಸಾಧ್ಯವಾಗಲಿಲ್ಲ. ಆಗ ಭಗವಾನ ಶ್ರೀಹರಿ ವಿಷ್ಣುವು ಮೋಸದಿಂದ ಆ ಪತಿವ್ರತೆ ವೃಂದಾಳ ವ್ರತವನ್ನು ಭಗ್ನಗೊಳಿಸಿ ದೇವತೆಗಳ ಕಾರ್ಯ ನೆರವೇರಿಸಿದನು. ವೃಂದಾಳಿಗೆ ರಹಸ್ಯ ತಿಳಿದಾಗ, ಅವಳು ಕೋಪಗೊಂಡು ಭಗವಾನ ಶ್ರೀಹರಿಯನ್ನು ಶಪಿಸಿದಳು. ಆಗ ಲೀಲಾಸಾಗರ ಕೃಪಾಳು ಹರಿಯು ಆ ಸ್ತ್ರೀಯ ಶಾಪವನ್ನು ಪ್ರಮಾಣವಾಗಿ ಸ್ವೀಕರಿಸಿದನು.

ಅದೇ ಜಾಲಂಧರನು ಆ ಕಲ್ಪದಲ್ಲಿ ರಾವಣನಾದನು, ಅವನು ಶ್ರೀರಾಮನಿಂದ ಯುದ್ಧದಲ್ಲಿ ವಧಿಸಲ್ಪಟ್ಟನು ಮತ್ತು ಉನ್ನತ ಸ್ಥಾನವನ್ನು ಪಡೆದನು.

ದೇವರ್ಷಿ ನಾರದರ ಶಾಪವನ್ನು ಶಿರೋಧಾರ್ಯವೆಂದು ಪರಿಗಣಿಸಿ ಮನುಜಾವತಾರವನ್ನು ತಾಳಿದ ಶ್ರೀಹರಿ

ಈ ಪ್ರಸಂಗವು ನಾರದರ ಅಭಿಮಾನ ಮತ್ತು ಮೋಹದೊಂದಿಗೆ ಸಂಬಂಧ ಹೊಂದಿರುವುದರಿಂದ ಬಹಳ ಸ್ವಾರಸ್ಯಕರವಾಗಿದೆ. ಈ ಘಟನೆಗೆ ಸಾಕ್ಷಿಯಾಗಿರುವ ಎರಡು ಗಣಗಳೂ ಶಾಪಗ್ರಸ್ತರಾಗಿದ್ದು, ಶ್ರೀಹರಿ ವಿಷ್ಣುವೂ ಬ್ರಹ್ಮರ್ಷಿ ನಾರದರಿಂದ ಶಾಪಗ್ರಸ್ತರಾಗಿದ್ದಾರೆ. ರಾಜಕುಮಾರಿ ಶ್ರೀಮತಿಯ ವ್ಯಾಮೋಹದಲ್ಲಿ ಸಿಕ್ಕಿದ ನಾರದಮುನಿಗಳು, ಸ್ವಯಂವರದಲ್ಲಿ ರಾಜಕುಮಾರಿ



**ನಾರದಮುನಿಯು ಶ್ರೀಹರಿಯನ್ನುದ್ದೇಶಿಸಿ ಹೇಳುತ್ತಾರೆ, ಯಾವ ಶರೀರವನ್ನು ಧರಿಸಿ ನನ್ನನ್ನು ವಂಚಿಸಿದ್ದೀರೋ, ಅದೇ ಶರೀರವನ್ನು ನೀವೂ ಧರಿಸುತ್ತೀರಿ ಎಂದು ನಾನು ನಿಮಗೆ ಶಾಪ ನೀಡುತ್ತೇನೆ. ನೀವು ನನಗೆ ವಾನರನ ದೇಹ ಕೊಟ್ಟಿದ್ದಕ್ಕೆ, ನಿಮಗೆ ವಾನರರೇ ಸಹಾಯ ಮಾಡುತ್ತವೆ. ನಾನು ಹಂಬಲಿಸುತ್ತಿದ್ದ ಸ್ತ್ರೀಯನ್ನು ನನ್ನಿಂದ ಬೇರ್ಪಡಿಸಿ ನನಗೆ ಅಹಿತವನ್ನುಂಟು ಮಾಡಿದ್ದೀರಿ. ಆದುದರಿಂದ ನೀವು ಕೂಡ ನಿಮ್ಮ ಹೆಂಡತಿಯನ್ನು ಕಳೆದುಕೊಂಡು ದುಃಖಪಡಬೇಕಾಗುವುದು. ಆ ಕಲ್ಪದಲ್ಲಿ ದೇವರ್ಷಿ ನಾರದರ ಶಾಪವು ಶ್ರೀರಾಮನ ಜನನಕ್ಕೆ ಕಾರಣವಾಯಿತು.**

ತನ್ನನ್ನೇ ಪತಿಯಾಗಿ ಸ್ವೀಕರಿಸುವಂತಾಗಲು ಶ್ರೀವಿಷ್ಣುವಿಗೆ ತನ್ನ ಮೋಹಕ ಹರಿ ರೂಪವನ್ನು ಪ್ರದಾನಿಸುವಂತೆ ಬೇಡಿದರು.

ಶ್ರೀವಿಷ್ಣು ಆಗಲಿ ಎಂದು ಹೇಳಲು, ನಾರದಮುನಿಗಳು ಸ್ವಯಂವರದಲ್ಲಿ ತಾನೇ ವರಮಾಲೆಯನ್ನು ಪಡೆಯುವೆನು ಎಂಬಂತೆ ಉಪಸ್ಥಿತರಾದರು. ಆದರೆ ರಾಜಕುಮಾರಿಯು, ಅವರನ್ನು ದುರ್ಲಕ್ಷಿಸಿ ಶ್ರೀಹರಿ ಅಂದರೆ ಶ್ರೀ ವಿಷ್ಣುವಿಗೆ ವಿವಾಹವಾದರು ಮತ್ತು ವಧುವನ್ನು ಕರೆದುಕೊಂಡು ಹೋದರು. ವಿಫಲರಾದ ಇತರ ರಾಜರು ನಿರಾಶೆಯಿಂದ ಮರಳಿದರು. ಪ್ರಲೋಭನೆಗೆ ಒಳಗಾಗಿ ನಾರದಮುನಿಯ ಬುದ್ಧಿಯು ಭ್ರಷ್ಟವಾಯಿತು, ರಾಜಕುಮಾರಿಯು ತನಗೆ ಸಿಗದ ಕಾರಣ ಅವನು ಬಹಳ ಚಿಂತಾಕ್ರಾಂತನಾದರು. ಆಗ ಶಿವನ ಗಣಗಳು ಮುಗುಳ್ನಕ್ಕು, ಹೇ ಮುನಿ! ಒಮ್ಮೆ ಹೋಗಿ ನಿಮ್ಮ ಮುಖವನ್ನು ಕನ್ನಡಿಯಲ್ಲಿ ನೋಡಿ' ಎಂದು ಹೇಳಿ, ಇಬ್ಬರೂ ಓಡಿಹೋದರು. ನಾರದಮುನಿಯು ನೀರಿನಲ್ಲಿ ಸ್ವಂತ ಮುಖವನ್ನು ನೋಡಿದರು. ತನ್ನ ರೂಪವನ್ನು ನೋಡಿ ಅವರು ತುಂಬಾ ಕೋಪಗೊಂಡರು.


ಅವರು ಶಿವನ ಆ ಗಣಗಳನ್ನು ಕಠೋರವಾಗಿ ಶಾಪ ನೀಡುತ್ತ, ನೀವಿಬ್ಬರೂ ಮೋಸಗೊಳಿಸುವ-ಪಾಪಿ ರಾಕ್ಷಸರಾಗುವಿರಿ, ನೀವು ನನ್ನನ್ನು ಗೇಲಿ ಮಾಡಿದ್ದೀರಿ, ಈಗ ಅದರ ಫಲವನ್ನು ಅನುಭವಿಸಿ. ನಂತರ ಯಾರಾದರೂ ಋಷಿಗಳನ್ನು ಗೇಲಿ ಮಾಡಿ. ನಂತರ, ಆ ಶಿವಗಣಗಳು ನಾರದರ ಶಾಪದಿಂದ ಮುಕ್ತಿಗಾಗಿ ಪ್ರಾರ್ಥಿಸಿದಾಗ, ನಾರದರಿಗೆ ಅವರ ಮೇಲೆ ಕರುಣೆ ಬಂದು, ನೀವಿಬ್ಬರೂ ರಾಕ್ಷಸರಾಗುವಿರಿ (ರಾವಣ ಮತ್ತು ಕುಂಭಕರ್ಣ). ನೀವು ಉತ್ತಮ ಸಮೃದ್ಧಿ, ತೇಜಸ್ಸು ಮತ್ತು ಶಕ್ತಿಯನ್ನು ಪಡೆಯುತ್ತೀರಿ. ನೀವು ಶಸ್ತ್ರಾಸ್ತ್ರಗಳ ಬಲದಿಂದ ಇಡೀ ಜಗತ್ತನ್ನು ಗೆದ್ದಾಗ, ಭಗವಾನ್ ವಿಷ್ಣುವು ಮನುಷ್ಯನ ದೇಹವನ್ನು (ಶ್ರೀ ರಾಮಾವತಾರ) ಧರಿಸಿಕೊಳ್ಳುತ್ತಾನೆ ಮತ್ತು ನೀವು ಶ್ರೀ ಹರಿಯ ಕೈಯಲ್ಲಿ ವಧಿಸಲ್ಪಡುವಿರಿ. ಆದ್ದರಿಂದ ನೀವು ಮಕ್ತರಾಗಿ ಮತ್ತೆ ಭೂಮಿಯ ಮೇಲೆ ಎಂದಿಗೂ ಜನ್ಮ ಪಡೆಯುವುದಿಲ್ಲ.

# ನೀವು ಮಾಡುವ ಈ ತಪ್ಪಿನಿಂದಲೇ ನಿಮ್ಮ ಶುಗರ್ ಲೆವೆಲ್ ಕಂಟ್ರೋಲ್‌ಗೆ ಬರೋದಿಲ್ಲ!

ಮಧುಮೇಹವನ್ನು ಕಂಟ್ರೋಲ್‌ನಲ್ಲಿಡುವುದು ಬಹಳ ಮುಖ್ಯ. ಅದರಲ್ಲೂ ಸಕ್ಕರೆಕಾಯಿಲೆ ಇರುವ ರೋಗಿಗಳು ತಮ್ಮ ದಿನಚರಿಯಲ್ಲಿ ಮಾಡುವ ಈ ಕೆಲವೊಂದು ತಪ್ಪುಗಳು ರಕ್ತದಲ್ಲಿನ ಸಕ್ಕರೆಯ ಮಟ್ಟವನ್ನು ಕಂಟ್ರೋಲ್‌ನಲ್ಲಿಡಲು ಬಿಡೋದಿಲ್ಲ ಎನ್ನುತ್ತಾರೆ ಡಾಕ್ಟರ್. ಮಧುಮೇಹವು ವೇಗವಾಗಿ ಬೆಳೆಯುತ್ತಿರುವ ಗಂಭೀರ ಸಮಸ್ಯೆಯಾಗಿದೆ. ಭಾರತವು ವಿಶ್ವದಲ್ಲೇ ಅತಿ ಹೆಚ್ಚು ಮಧುಮೇಹ ರೋಗಿಗಳನ್ನು ಹೊಂದಿದೆ. ಮಧು ಮೇಹಕ್ಕೆ ಖಚಿತವಾದ ಚಿಕಿತ್ಸೆ ಇಲ್ಲ ಮತ್ತು ಉತ್ತಮ ಆಹಾರ ಪದ್ಧತಿ ಮತ್ತು ಆರೋಗ್ಯಕರ ಜೀವನಶೈಲಿಯಿಂದ ಮಾತ್ರ ಇದನ್ನು ನಿಯಂತ್ರಿಸಬಹುದು. ಹೀಗಿರುವಾಗ ನೀವು ಪ್ರತಿನಿತ್ಯ ಮಾಡುವ ಈ ತಪ್ಪುಗಳು ನಿಮ್ಮ ಮಧುಮೇಹವನ್ನು ಕಂಟ್ರೋಲ್‌ನಲ್ಲಿಡಲು ಬಿಡೋದಿಲ್ಲ.

**ಮಧುಮೇಹವನ್ನು ಹೇಗೆ ನಿಯಂತ್ರಿಸುವುದು:** ರಕ್ತದಲ್ಲಿನ ಸಕ್ಕರೆ ಮಟ್ಟವು ದೀರ್ಘಕಾಲದವರೆಗೆ ಹೆಚ್ಚಿದ್ದರೆ ಅದು ದೇಹಕ್ಕೆ ಹಲವು ವಿಧಗಳಲ್ಲಿ ಹಾನಿಯನ್ನುಂಟು ಮಾಡುತ್ತದೆ. ಇದು ಪದೇ ಪದೇ ಮೂತ್ರ ವಿಸರ್ಜನೆ, ಅತಿಯಾದ ಬಾಯಾರಿಕೆ, ಪದೇ ಪದೇ ಹಸಿವು, ತ್ವರಿತ ತೂಕ ನಷ್ಟ ಅಥವಾ ಹೆಚ್ಚಳ, ಆಯಾಸ ಮತ್ತು ದೌರ್ಬಲ್ಯದಂತಹ ಲಕ್ಷಣಗಳಿಗೆ ಕಾರಣವಾಗಬಹುದು. ಮಧುಮೇಹದಿಂದಾಗುವ ದೊಡ್ಡ ಹಾನಿಯನ್ನು ತಪ್ಪಿಸಲು ಈ ರೋಗಲಕ್ಷಣಗಳನ್ನು ನಿಯಂತ್ರಿಸುವುದು ಮುಖ್ಯ.

**ಮಾಡುವ ತಪ್ಪುಗಳು:** ರಕ್ತದಲ್ಲಿನ ಸಕ್ಕರೆಯನ್ನು ನಿಯಂತ್ರಣದಲ್ಲಿಡಲು ಆರೋಗ್ಯಕರ ಆಹಾರ ಮತ್ತು ಜೀವನಶೈಲಿಯನ್ನು ನೋಡಿಕೊಳ್ಳುವುದು ಮುಖ್ಯ. ಆದರೆ ಹೆಚ್ಚಿನ ಮಧುಮೇಹ ರೋಗಿಗಳು ತಿಳಿದೋ ತಿಳಿಯದೆಯೋ ಅನೇಕ ತಪ್ಪುಗಳನ್ನು ಮಾಡುತ್ತಿದ್ದಾರೆ. ಇದರಿಂದಾಗಿ ಅವರು ಮಧುಮೇಹವನ್ನು ನಿಯಂತ್ರಿಸಲು ಸಾಧ್ಯವಾಗುವುದಿಲ್ಲ. ಅಪೋಲೋ ಆಸ್ಪತ್ರೆಯ ಡಾ. ಸೋನಿಯಾ ಭಟ್ ಅವರು ಅಂತಹ ಕೆಲವು ತಪ್ಪುಗಳು ಮತ್ತು ಅವುಗಳ ಪರಿಹಾರಗಳ ಬಗ್ಗೆ ನಿಮಗೆ ತಿಳಿಸಿದ್ದಾರೆ.



**ವೈದ್ಯರ ಸಲಹೆ**

**ದಿನವನ್ನು ಕೇವಲ ಹಣ್ಣುಗಳೊಂದಿಗೆ ಪ್ರಾರಂಭಿಸುವುದು ತಪ್ಪು:** ಅನೇಕ ಮಧುಮೇಹಿಗಳು ಹಣ್ಣುಗಳನ್ನು ತಿನ್ನುವು ದರೊಂದಿಗೆ ತಮ್ಮ ದಿನವನ್ನು ಪ್ರಾರಂಭಿಸುತ್ತಾರೆ. ಹಣ್ಣುಗಳು ಆರೋಗ್ಯಕರವೆಂಬುದು ನಿಜ, ಆದರೆ ಬೆಳಗ್ಗೆಯೇ ಖಾಲಿ ಹೊಟ್ಟೆಗೆ ಸಿಹಿ ಹಣ್ಣುಗಳನ್ನು ತಿನ್ನುವುದು ಒಳ್ಳೆಯದಲ್ಲ. ಇದು ರಕ್ತದಲ್ಲಿನ ಸಕ್ಕರೆ ಪ್ರಮಾಣ ಹೆಚ್ಚಾಗಿಸುತ್ತದೆ.

**ಚಿಪ್ಸ್ ತಿನ್ನಬೇಡಿ:** ಮಾರುಕಟ್ಟೆಯಲ್ಲಿ ಎಲ್ಲಾ ರೀತಿಯ ಪ್ಯಾಕ್ ಮಾಡಿದ ಚಿಪ್ಸ್ ಮತ್ತು ಫ್ರೈಗಳನ್ನು ಮಾರಾಟ ಮಾಡಲಾಗುತ್ತಿದ್ದು, ಅವುಗಳನ್ನು ಸಕ್ಕರೆ ರಹಿತವಾಗಿ ಮಾರಾಟ ಮಾಡಲಾಗುತ್ತಿದೆ. ನೆನಪಿಡಿ, ಅವು ರುಚಿಕರವಾಗಿ ಕಾಣಿಸಬಹುದು ಆದರೆ ಅವು ಕೇವಲ ಕ್ಯಾಲೋರಿಗಳಿಂದ ತುಂಬಿರುತ್ತವೆ ಮತ್ತು ಕಡಿಮೆ ಪೌಷ್ಟಿಕಾಂಶವನ್ನು ಹೊಂದಿರುತ್ತವೆ.


**ಹಾಗಾದರೆ ಉಪಾಹಾರಕ್ಕೆ ಏನು ತಿನ್ನಬೇಕು?:** ನಿಮ್ಮ ಉಪಾಹಾರವು ಸಮತೋಲಿತವಾಗಿ ಮತ್ತು ನಿಧಾನವಾಗಿ ಜೀರ್ಣವಾಗುವಂತೆ ಮಾಡಲು, ಆರೋಗ್ಯಕರ ಸಲಾಡ್, ಪ್ರೋಟೀನ್ (ಮೊಸರು, ಕಡಲೆ ಕಾಯಿ ಬೆಣ್ಣೆ ಅಥವಾ ಮೆಣಸಿನಕಾಯಿಯಂತಹ) ಮತ್ತು ಫೈಬರ್ ಭರಿತ ಹಣ್ಣುಗಳನ್ನು ತಿನ್ನಲು ವೈದ್ಯರು ಸೂಚಿಸುತ್ತಾರೆ.

ಫೈಬರ್ ಮತ್ತು ತೂಕ ನಿಯಂತ್ರಣ ಮತ್ತು ಮಧುಮೇಹ ನಿರ್ವಹಣೆಗೆ ಸಹಾಯ ಮಾಡುವ ಅಗತ್ಯ ಪೋಷಕಾಂಶಗಳಿವೆ.

**ಡಯಟ್ ಪಾನೀಯಗಳನ್ನು ಸೇವಿಸಬೇಡಿ:** ಡಯೆಟ್‌ಗೆ ಒಳ್ಳೆಯದು ಎಂದ ಮಾತ್ರಕ್ಕೆ ಅವು ಆರೋಗ್ಯಕರ ಎಂದು ಅರ್ಥವಲ್ಲ. ಆಹಾರ ತಂಪು ಪಾನೀಯಗಳು ಸಹ ಗುಪ್ತ ಸಕ್ಕರೆಯನ್ನು ಒಳಗೊಂಡಿರಬಹುದು ಮತ್ತು ದೇಹದ ನೈಸರ್ಗಿಕ ಸಮತೋಲನವನ್ನು ತೊಂದರೆಗೊಳಿಸಬಹುದು. ಆದ್ದರಿಂದ ಇದನ್ನು ತಪ್ಪಿಸುವುದು ಬಹಳ ಮುಖ್ಯ.

**ಹಾಗಾದರೆ ಏನು ಕುಡಿಯಬೇಕು:** ವೈದ್ಯರು ಮನೆಯಲ್ಲಿ ತಯಾರಿಸಿದ ಮಜ್ಜಿಗೆಯನ್ನು ಕುಡಿಯಲು ಸೂಚಿಸುತ್ತಾರೆ. ಇದು ಸಕ್ಕರೆ ಇಲ್ಲದೆ, ಜೀರ್ಣಕ್ರಿಯೆಗೆ ಒಳ್ಳೆಯದು, ದೀರ್ಘಕಾಲದವರೆಗೆ ಹೊಟ್ಟೆ ತುಂಬಿದ ಭಾವನೆಯನ್ನು ನೀಡುತ್ತದೆ.


# ಭರತ ಭೂಮಿಯ ಉಸಿರು



ಜನಿಸಿದನು  
ರಾಮ  
ನೇಮಿ ಕೌಶಲ್ಯರ  
ಪ್ರಥಮನಾಗಿ  
ಶುಕ್ಲ ಪಕ್ಷದ  
ಚೈತ್ರದಂದು.  
ಸದ್ದಿಲ್ಲದೆ ಹರಿಯುತ್ತಿತ್ತು  
ಸರಯೂ ನದಿ  
ರಾಮ ನಾಮ ಜಪಿಸುತ  
ಸಂಭ್ರಮ ಸಡಗರವ  
ಮನೆ ಮಾಡಿತ್ತು  
ದಶದಿಕ್ಕುಗಳ ಸರದಾರ ದಶರಥನಿಗೆ  
ಜನಿಸಿದ್ದು  
ಅಯೋಧ್ಯೆಯ ಉತ್ತರಾಧಿಕಾರಿಯೇ  
ಎಂಬಂತೆ ನಗರ ನಿವಾಸಿಗಳು  
ಪುಳಃಕಿತಗೊಂಡರು  
ಪಟ್ಟದ ರಾಣಿ  
ಕೋಸಲ ದೇಶದ  
ರಾಜಕುಮಾರಿ  
ಕೌಶಲ್ಯಳ ಗರ್ಭದಲಿ  
ಜನಿಸಿದ ರಾಮನ ಸಂಭ್ರಮಾಚರಣೆ  
ಕೇವಲ ಅಯೋಧೆಯೊಂದೇಯಲ್ಲ  
ಕೋಸಲ ದೇಶವು  
ಸಂಭ್ರಮಿಸಿತು  
ತಳಮಳಿಸಿದಳು  
ಕೈಕೆ, ಅಲವತ್ತುಕೊಂಡಳು  
ಅಂದೇ ಮಂಥರೆಯೊಳು  
ನಡೆದಿತ್ತು ಒಳಸಂಚು  
ಜನಿಸಿದ ರಾಮನ  
ಪಟ್ಟ ಬದಲಿಸುವ ತಂತ್ರ  
ಬಾಲ್ಯದಲ್ಲೇ ರಾಮನಿಗೆ  
ತೋರಿದಳು ಮಂಥರೆ  
ರಾಮ ಬಯಸಿದ ಚಂದಿರನ  
ಭೂಮಿಯೊಳು  
ಮಂಥರೆ ರಾಮಗೆ ಮಧುರಳಾದಳು  
ಕಾದಳು ಮಂಥರೆ  
ಕೈಕೆಯೊಳು ರೂಪಿಸುವ  
ಸಂಚೋಳು  
ಶತಮಾನಗಳೇ ಉರುಳಿದವು  
ಸಂವತರಗಳೇ ಕಳೆದವು  
ರಾಮ ಜನಿಸಿದ್ದು ನೆನಪು  
ಹಸಿರಸಿರು  
ರಾಮ...ರಘುರಾಮ..  
ಕೌಶಲ್ಯ ರಾಮ  
ದಶರಥ ರಾಮ  
ಮಂಥರೆಯ ಮಧುರ ರಾಮ  
ಭರತ ಭೂಮಿಯ ಉಸಿರು  
ರಾಮ  
ಮಂಥರೆಯ ಮಧುರ ರಾಮ)  
(ಮಂಥರೆ ಸಂಚು ರೂಪಿಸದಿದ್ದರೆ  
ರಾಮನದೆಲ್ಲಿಯ ಖ್ಯಾತಿ

■ ರಚನೆ:ಗುರಾನಿ

# ನಿಮ್ಮ ಹೆಂಡತಿ ಗರ್ಭಿಣೆನಾ? ಹಾಗಾದ್ರೆ ಮೊದಲು ಪತಿ ಈ ಕೆಲಸ ಮಾಡಲೇ ಬೇಕು




ಹೆಂಡತಿ ಗರ್ಭಿಣಿಯಾದಾಗ ಬರೀ ಪತ್ನಿಗಷ್ಟೇ ಅಲ್ಲ ಪತಿಯೂ ಕೆಲವೊಂದು ವಿಷ್ಯಗಳನ್ನು ಗಮನಹರಿಸಬೇಕು. ಪತ್ನಿಯ ಆರೈಕೆಯಿಂದ ಹಿಡಿದು ತನ್ನನ್ನು ತಾನೂ ಕೆಲವೊಂದು ವಿಚಾರಗಳಲ್ಲಿ ಬದಲಾಯಿಸಬೇಕು ಎಂದು ಸದ್ಗುರು ಹೇಳುತ್ತಾರೆ. ಮಗುವನ್ನು ಪಡೆಯುವುದು ಪ್ರತಿಯೊಬ್ಬ ದಂಪತಿಯ ಕನಸಾಗಿರುತ್ತದೆ. ಮಗುವಿಗೆ ಉತ್ತಮ ಜೀವನ ಪಾಲನೆ ನೀಡುವುದು ತಾಯಿಯ ಜವಾಬ್ದಾರಿ ಮಾತ್ರವಲ್ಲ, ಅದರಲ್ಲಿ ತಂದೆಯ ಪಾತ್ರ ಮತ್ತು ಕೊಡುಗೆಯೂ ಮುಖ್ಯವಾಗಿರುತ್ತದೆ. ನಿಮ್ಮ ಹೆಂಡತಿ ಗರ್ಭಿಣಿಯಾಗಿರುವಾಗಲೇ ದಂಪತಿಗಳು ನಿಮ್ಮ ಸಿದ್ಧತೆಗಳನ್ನು ಪ್ರಾರಂಭಿಸಬೇಕು. ನಿಮ್ಮ ಮಗು ಯಾವ ರೀತಿಯ ವ್ಯಕ್ತಿಯಾಗಬೇಕೆಂದು ನೀವು ಬಯಸುತ್ತೀರಿ, ಇದೆಲ್ಲವೂ ಇಲ್ಲಿಂದ ಪ್ರಾರಂಭವಾಗುತ್ತದೆ.

**ಸದ್ಗುರು ಪ್ರವಚನದಲ್ಲಿ ಏನ್ ಹೇಳಿದ್ದಾರೆ?:** ಮಗುವಿಗೆ ಒಳ್ಳೆಯ ಮೌಲ್ಯಗಳನ್ನು ನೀಡಲು ಅಥವಾ ಅವರನ್ನು ಒಳ್ಳೆಯ ವ್ಯಕ್ತಿಯನ್ನಾಗಿ ಮಾಡಲು ಪೋಷಕರು ಅಥವಾ ಪತಿ ಏನು ಮಾಡಬೇಕು ಎಂದು ಸದ್ಗುರುಗಳು ತಮ್ಮ ಒಂದು ಪ್ರವಚನದಲ್ಲಿ ಹೇಳಿದ್ದಾರೆ. ನೀವು ಗರ್ಭಿಣಿಯಾಗಿದ್ದರೆ ಅಥವಾ ನಿಮ್ಮ ಪತ್ನಿ ಗರ್ಭಿಣಿಯಾಗಿದ್ದರೆ, ಸದ್ಗುರುಗಳು ಏನು ಹೇಳುತ್ತಾರೆಂದು ನೀವು ಖಂಡಿತವಾಗಿಯೂ ಗಮನಹರಿಸಲೇಬೇಕು.

## ಯಾರು ತಮ್ಮನ್ನು ಇಷ್ಟಪಡುವುದಿಲ್ಲ

**ಪೋಷಕರಾಗಲು, ನಿಮ್ಮಲ್ಲಿ ನಿಮಗೆ ಇಷ್ಟವಿಲ್ಲದ ವಿಷಯಗಳನ್ನು ಬಿಟ್ಟುಬಿಡಬೇಕು ಎಂದು ಸದ್ಗುರುಗಳು ಹೇಳುತ್ತಾರೆ. ನೀವು ನಿಮ್ಮನ್ನು ಹೇಗೆ ನೋಡಲು ಬಯಸುವುದಿಲ್ಲವೋ ಹಾಗೆಯೇ ನಿಮ್ಮ ಮಗುವೂ ನಿಮ್ಮನ್ನು ಅದೇ ರೀತಿಯಲ್ಲಿ ನೋಡಲು ಬಯಸುವುದಿಲ್ಲ. ನಿಮ್ಮ ಮಗು ಜನಿಸುವ ಮೊದಲೇ ನೀವು ನಿಮ್ಮನ್ನು ಬದಲಾಯಿಸಿಕೊಳ್ಳಲು ಅಥವಾ ನಿಮ್ಮೊಳಗೆ ಸಕಾರಾತ್ಮಕ ಬದಲಾವಣೆಗಳನ್ನು ತರಲು ಪ್ರಾರಂಭಿಸಬೇಕು. ಗರ್ಭದೊಳಗೆ ಬರುವ ಮಗುವಿನಲ್ಲಿ ಉತ್ತಮ ಮೌಲ್ಯಗಳನ್ನು ಹೇಗೆ ಬೆಳೆಸಬಹುದು ಎಂಬುದನ್ನು ತಿಳಿಯಿರಿ.**



**ಪುರುಷರಿಗೆ ಸದ್ಗುರುಗಳ ಸಲಹೆಗಳು:** ನೀವು ಹೇಗಿದ್ದೀರಿ ಎಂಬುದರ ಮೇಲೆ ನಿಮ್ಮ ಮಗು ಹೇಗಿರುತ್ತದೆ ಎಂಬುದು ಅವಲಂಬಿತವಾಗಿರುತ್ತದೆ ಎಂದು ಸದ್ಗುರುಗಳು ಹೇಳುತ್ತಾರೆ. ನಿಮ್ಮ ಅಭ್ಯಾಸಗಳು ಏನೇ ಇರಲಿ, ನಿಮ್ಮನ್ನು ನೋಡಿದ ನಂತರ ನಿಮ್ಮ ಮಗುವೂ ಅದೇ ರೀತಿ ವರ್ತಿಸಲು ಪ್ರಾರಂಭಿಸುತ್ತದೆ. ಆದ್ದರಿಂದ, ನಿಮ್ಮ ಮಗುವು ಏನಾದರೂ ಒಳ್ಳೆಯದನ್ನು ಕಲಿಯಬೇಕೆಂದು ನೀವು ಬಯಸಿದರೆ, ಇದಕ್ಕಾಗಿ ನೀವು ಮೊದಲು ಒಳ್ಳೆಯವರಾಗಬೇಕು.

**ನಿಮ್ಮನ್ನು ಬದಲಾಯಿಸಿಕೊಳ್ಳಿ:** ನಿಮ್ಮ ಹೆಂಡತಿ ಗರ್ಭಿಣಿ ಎಂದು ನಿಮಗೆ ತಿಳಿದಾಗ, ಆ ಕ್ಷಣದಿಂದಲೇ ನೀವು ನಿಮ್ಮನ್ನು ಬದಲಾಯಿಸಿಕೊಳ್ಳಲು ಪ್ರಾರಂಭಿಸಬೇಕು ಎಂದು ಸದ್ಗುರುಗಳು ಹೇಳಿದರು. ಈಗ ಹೊಸ ಜೀವನ ಬರುತ್ತಿದೆ, ಅದರ ಸಂಪೂರ್ಣ ಜವಾಬ್ದಾರಿ ನಿಮ್ಮ ಮೇಲಿರುತ್ತದೆ, ಆದ್ದರಿಂದ ಈಗ ನೀವು ಹೆಚ್ಚು ಬುದ್ಧಿವಂತಿಕೆಯಿಂದ ಕೆಲಸ ಮಾಡಬೇಕಾಗಿದೆ.

**ಗರ್ಭ ಸಂಸ್ಕಾರ:** ಗರ್ಭ ಸಂಸ್ಕಾರ ಮಾಡುವಂತೆಯೂ ಸದ್ಗುರು ಸಲಹೆ ನೀಡುತ್ತಾರೆ. ಇದರಲ್ಲಿ, ಗರ್ಭದಲ್ಲಿ ಬೆಳೆಯುತ್ತಿರುವ ಮಗುವಿಗೆ ಉತ್ತಮ ಮೌಲ್ಯಗಳನ್ನು ನೀಡಲು ತಾಯಿ ಕೆಲವು ವಿಶೇಷ ಕೆಲಸಗಳನ್ನು ಮಾಡಬೇಕು, ಉದಾಹರಣೆಗೆ ಗೀತಾ ಅಥವಾ ಯಾವುದೇ ಧಾರ್ಮಿಕ ಗ್ರಂಥಗಳನ್ನು ಪಠಿಸುವುದು, ಧ್ಯಾನ, ಯೋಗ ಮಾಡುವುದು, ಮಧುರ ಸಂಗೀತವನ್ನು ಕೇಳುವುದು ಮತ್ತು ಮಗುವಿನೊಂದಿಗೆ ಚೆನ್ನಾಗಿ ಮಾತನಾಡುವುದು ಇತ್ಯಾದಿ.

**ತಂದೆಯ ಪಾತ್ರ:** ಗರ್ಭ ಸಂಸ್ಕಾರದ ಕೆಲಸವನ್ನು ತಾಯಿಯಿಂದ ಮಾತ್ರವಲ್ಲ, ತಂದೆಯಿಂದ ಕೂಡ ಮಾಡಬಹುದು. ನಿಮ್ಮ ಮಗುವಿನೊಂದಿಗೆ ಸಿಹಿಯಾಗಿ ಮಾತನಾಡಿ, ಅವನಿಗೆ ಇಂಪಾದ ಸಂಗೀತ ಹಾಕಿ ಮತ್ತು ಅವನಿಗೆ ಓಂ ಎಂದು ಜಪಿಸಿ. ಈ ರೀತಿಯಾಗಿ ಮಗುವು ಗರ್ಭ ಸಂಸ್ಕಾರದ ಪ್ರಯೋಜನ ಗಳನ್ನು ಪಡೆಯುಬಹುದು.

# ತುಳುವಿಗೆ ರಾಜ್ಯದ ಅಧಿಕೃತ ಭಾಷೆ ಸ್ಥಾನಮಾನ

• ಉದಯವಾಹಿನಿ, ಮಂಗಳೂರು


ಉದಯವಾಹಿನಿ ಚಿತ್ರ

ತುಳುವಿಗೆ ರಾಜ್ಯದ ಅಧಿಕೃತ ಭಾಷೆಯಾಗಿ ಮಾನ್ಯತೆ ನೀಡಬೇಕು ಎಂದು ಅಗ್ರಹಿಸಿ ಏಪ್ರಿಲ್ 7ರಂದು ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲು 18 ತುಳು ಸಂಘಟನೆಗಳು ಒಟ್ಟು ಸೇರಿ ಅಖಿಲ ಅಮೇರಿಕ ತುಳುವರ ಅಂಗಣದ ಪ್ರಮುಖರು ನಿರ್ಧರಿಸಿದ್ದಾರೆ. ಇದಕ್ಕೂ ಮೊದಲು ಮುಂಬಯಿಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭಾಸ್ಕರ ಶೇರಿಗಾರ್ ಅವರು ಭೇಟಿ ಮಾಡಲಿದ್ದು, ಸಾಧ್ಯವಾದರೆ ಅಲ್ಲಿಯೇ ಮನವಿ ಸಲ್ಲಿಸಲಾಗುವುದು.

ಬೆಂಗಳೂರಿನಲ್ಲಿ ಭಾಸ್ಕರ್ ಶೇರಿಗಾರ್ ಮತ್ತು ಶಾಂತಾರಾಮ ಅವರ ನೇತೃತ್ವದಲ್ಲಿ ಮನವಿ ಸಲ್ಲಿಸಲು ನಿರ್ಧರಿಸಲಾಗಿದ್ದು, ಬೆಂಗಳೂರಿನಲ್ಲಿರುವ ಪ್ರಮುಖರು ಇವರ ಜತೆ ಸೇರಿಕೊಳ್ಳಬಹುದು ಎಂದು ಸರ್ವೋತ್ತಮ ಶೆಟ್ಟಿ ಅವರು ತಿಳಿಸಿದ್ದಾರೆ. ಮನವಿ ಸಲ್ಲಿಸಿದ ಬಳಿಕ ಯಾವ ರೀತಿ ಹೋರಾಟ ಮಾಡಬೇಕು ಎಂಬ ಬಗ್ಗೆ ಪ್ರಮುಖರು ಚಿಂತಿಸಿ ಮಾಹಿತಿ ಹಂಚಿಕೊಳ್ಳಬೇಕು.

**ಸಿಎಂ ಭೇಟಿಗೆ ನಿರ್ಧಾರ**

ನಾವು ನಮ್ಮ ಗುರಿಯನ್ನು ಮುಟ್ಟುವ ವರೆಗೆ ವಿರಮಿಸಬಾರದು ಎಂದು ಸರ್ವೋತ್ತಮ ಶೆಟ್ಟಿ ಅಬುದಾಬಿ ತಿಳಿಸಿದ್ದಾರೆ.

ತುಳು ಸಂಘಟನೆಗಳ ಪ್ರತಿನಿಧಿಗಳಿಂದ ಸ್ಪೀಕರ್ ಖಾದರ್‌ಗೆ ಮನವಿ ತುಳು ಭಾಷೆಯನ್ನು ಕರ್ನಾಟಕದ ಅಧಿಕೃತ ಭಾಷೆಯಾಗಿ ಘೋಷಿಸಬೇಕು ಎಂದು ಅಗ್ರಹಿಸಿ 27 ದೇಶಗಳ ತುಳು ಸಂಘಟನೆಗಳ ಪ್ರತಿನಿಧಿಗಳು ಅಖಿಲ ಅಮೇರಿಕ ತುಳುವರ ಅಂಗಣ ಇದರ ಅಧ್ಯಕ್ಷೆ ಶ್ರೀವಲ್ಲಿ ರೈ ಮತ್ತು ಭಾಸ್ಕರ ಶೇರಿಗಾರ್, ಸರ್ವೋತ್ತಮ ಶೆಟ್ಟಿ ಅಬುದಾಬಿ ಅವರ ನೇತೃತ್ವದಲ್ಲಿ ಕರ್ನಾಟಕ ವಿಧಾನಸಭೆಯ ಸ್ಪೀಕರ್ ಯು.ಟಿ. ಖಾದರ್ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಲಾಯಿತು. ಮನವಿ ಸ್ವೀಕರಿಸಿದ ಖಾದರ್ ಅವರು ಬೇಡಿಕೆಗೆ ಸ್ಪಂದಿಸುವುದಾಗಿ ತಿಳಿಸಿದರು.

# ಬಗದಲ್ ಗ್ರಾ. ಪಂ. ಅಭಿವೃದ್ಧಿ ಅಧಿಕಾರಿಗಳ ವಿರುದ್ಧ ದೂರು

• ಉದಯವಾಹಿನಿ, ಬೀದರ


ಉದಯವಾಹಿನಿ ಚಿತ್ರ

ಕೇಂದ್ರ ಹಾಗೂ ರಾಜ್ಯ ಸರಕಾರ ಜಾರಿ ಮಾಡಿರುವ ಜನಪರ ಯೋಜನೆಗಳಲ್ಲೊಂದಾದ ಪ್ರಧಾನ ಮಂತ್ರಿ ಆವಾಸ್ ಯೋಜನೆ ಅಡಿಯಲ್ಲಿ ಭಾರಿ ಗಾತ್ರದ ಗೊಂದಲ, ತಾರತಮ್ಯ ಆಗುತ್ತಿದೆ.

ವಿಶೇಷವಾಗಿ ಬೀದರ ದಕ್ಷಿಣ ಕ್ಷೇತ್ರದ ಬಗದಲ್ ಗ್ರಾಮ ಪಂಚಾಯತಿಯಲ್ಲಿ ಪ್ರಧಾನ ಮಂತ್ರಿ ಆವಾಜ ಯೋಜನೆ ಅಡಿಯಲ್ಲಿ ಮನೆಗಳು ಹಂಚಲು ಸರಕಾರದ ಮಾರ್ಗಸೂಚಿ ಉಲ್ಲಂಘಿಸಿದ್ದಾರೆ. ಪಂಚಾಯತ ರಾಜ ಅಧಿನಿಯಮಕ್ಕೆ ವಿರುದ್ಧವಾಗಿ ವರ್ತಿಸುತ್ತಿರುವ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಮನಬಂದಂತೆ ವರ್ತಿಸುತ್ತಿದ್ದಾರೆ. ಬೀದರ ದಕ್ಷಿಣ ಕ್ಷೇತ್ರದ ಶಾಸಕರು ಸರಕಾರದ ಮಾರ್ಗಸೂಚಿಯಂತೆ ಅಂದರೆ 60% ರಷ್ಟು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ, 15% ಅಲ್ಪಸಂಖ್ಯಾತರಿಗೆ ಫಲಾನುಭವಿಗಳಿಗೆ, 25% ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಪ್ರಧಾನ ಮಂತ್ರಿ ಅವಾಜ ಯೋಜನೆ ಅಡಿಯಲ್ಲಿ ಮನೆಗಳು ಇದೆ ಮಾನದಂಡದ ಪ್ರಕಾರ ಹಂಚಬೇಕೆಂದು ಪತ್ರಿಕೆ ಮುಖಾಂತರ ಸಾರ್ವಜನಿಕರಿಗೆ ತಿಳಿಸಿರುತ್ತಾರೆ. ಆದರೆ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ರೋಷ್ಟರ ಪದ್ಧತಿ ಪ್ರಕಾರ ಮನೆಗಳು ಹಂಚಿಕೆ ಮಾಡಿರುವುದಿಲ್ಲ.

ಇದು ಅಲ್ಲದೆ ಈಗಾಗಲೆ ಬಗದಲ್ ಗ್ರಾ.ಪಂ. ಗೆ ಪ್ರಧಾನ ಮಂತ್ರಿ ಆವಾಸ್ ಯೋಜನೆ ಮನೆಗಳು 91 ಬಂದಿದ್ದು ಅದರಲ್ಲಿ ಪ.ಜಾ / ಪ.ಪಂ. ಫಲಾನುಭವಿಗಳಿಗೆ ಒಂದು ಮನೆ ಸಹ ಇರುವುದಿಲ್ಲ.ಮಾನ್ಯ ಶಾಸಕರು ಹೇಳಿರುವ ಪ್ರಕಾರ 60% ಶೇ. ರಷ್ಟು ಪ.ಜಾ / ಪ.ಪಂ. ಫಲಾನುಭವಿಗಳಿಗೆ ಅದ್ಯತೆ ನೀಡಿದ್ದೇವೆ ಎಂದು ಪತ್ರಿಕಾ ಹೇಳಿಕೆ ನೀಡಿರುವರು.

ಆದ್ದರಿಂದ ಬಡ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಅನ್ಯಾಯವಾಗುತ್ತಿದೆ. ಇದನ್ನು ತಕ್ಷಣವೆ ಸರಿಪಡಿಸಿ ಪಂಚಾಯತ ರಾಜ ಅಧಿನಿಯಮದ ಪ್ರಕಾರ ರೋಷ್ಟರ ಪದ್ಧತಿಯನ್ನು ಕಡ್ಡಾಯವಾಗಿ ಅಳವಡಿಸಿ ಇದರ ಪ್ರಕಾರ ಸೂಕ್ತ ಫಲಾನುಭವಿಗಳಿಗೆ ಪ್ರಾತಿನಿಧ್ಯ ನೀಡಬೇಕೆಂದು ಆಗ್ರಹಿಸಲಾಗಿದೆ.

ಒಂದು ವಾರದೊಳಗೆ ಸಮಸ್ಯೆಗೆ ಸ್ಪಂದಿಸದೆ ಹೋದರೆ ಬಗದಲ್ ಗ್ರಾಮದ ಮುಖ್ಯ ರಸ್ತೆಯಲ್ಲಿ ರಾಸ್ತಾ ರೋಕೋ ಅಂತಹ ಉಗ್ರ ಹೋರಾಟ ಮಾಡಲಾಗುವುದೆಂದು ಎಚ್ಚರಿಸಿ ಶನಿವಾರ ಜಿ.ಪಂ. ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.



## ಮಿನಿ ನ್ಯೂಸ್

### ರಸ್ತೆಯುದ್ದಕ್ಕೂ ಆವರಿಸಿದ ಹೊಗೆ ಬಸ್ಸುಗಳೆರಡು ಮುಖಾಮುಖಿ ಡಿಕ್ಕಿ

• ಉದಯವಾಹಿನಿ, ಉಳ್ಳಾಲ

ಗುಡ್ಡ ಪ್ರದೇಶಕ್ಕೆ ಬೆಂಕಿ ಬಿದ್ದ ಪರಿಣಾಮ ರಸ್ತೆಯುದ್ದಕ್ಕೂ ದಟ್ಟವಾದ ಹೊಗೆಯು ಆವರಿಸಿ ಎರಡು ಬಸ್ಸುಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದ ಘಟನೆ ಮಂಗಳೂರು ವಿಶ್ವವಿದ್ಯಾಲಯದ ಮಹಿಳಾ ವಸತಿ ನಿಲಯದ ಬಳಿಯ ರಸ್ತೆಯಲ್ಲಿ ಸಂಭವಿಸಿದೆ.

ಕೊಣಾಜೆಯಿಂದ ಮಂಗಳೂರಿಗೆ ತೆರಳುವ ಖಾಸಗಿ ಬಸ್, ಇನೋಳಿಗೆ ತೆರಳುವ ಬ್ಯಾರೀಸ್ ಕಾಲೇಜಿನ ಬಸ್‌ಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದ್ದು, ಎರಡು ಬಸ್ಸಿನ ಚಾಲಕರು, ಪ್ರಯಾಣಿಕರಿಗೆ ಅಲ್ಪಸ್ವಲ್ಪ ಗಾಯಗಳಾಗಿವೆ. ಕೊಣಾಜೆಯ ವಿಶ್ವವಿದ್ಯಾಲಯದ ಬಳಿ ರಸ್ತೆಯ ಬದಿಯ ಗುಡ್ಡ ಪ್ರದೇಶಕ್ಕೆ ಬೆಂಕಿ ಬಿದ್ದ ಪರಿಣಾಮ ಗಿಡಮರಗಳು, ಗಿಡಗಂಟಿಗಳು ಬೆಂಕಿಗಾಹುತಿಯಾಗಿ ದಟ್ಟವಾದ ಹೊಗೆಯು ಪರಿಸರದಲ್ಲಿ ಆವರಿಸಿತ್ತು. ಅಲ್ಲದೆ ರಸ್ತೆಯ ಉದ್ದಕ್ಕೂ ಬೆಂಕಿಯ ಕೆನ್ನಾಲಿಗೆಯೊಂದಿಗೆ ಹೊಗೆಯು ಆವರಿಸಿದ ಪರಿಣಾಮ ವಾಹನ ಸವಾರರಿಗೂ ತೊಂದರೆಯಾಗಿತ್ತು. ಇದರ ನಡುವೆ ಎರಡು ಕಡೆಯಿಂದ ಬರುವ ಬಸ್ ನ ಚಾಲಕರಿಗೆ ಕಾಣದೆ ಪರಸ್ಪರ ಡಿಕ್ಕಿ ಸಂಭವಿಸಿದೆ.

ಅಪಘಾತದ ಪರಿಣಾಮ ಎರಡು ಬಸ್‌ಗಳ ಮುಂಭಾಗವು ನಜ್ಜುಗುಜ್ಜಾಗಿದೆ. ಮಂಗಳೂರು ವಿವಿ ಪರಿಸರದ ಆವರಣದಲ್ಲಿ ಗುಡ್ಡ ಪ್ರದೇಶದಲ್ಲಿ ಕಳೆದ ಎರಡು ದಿನಗಳಿಂದ ಗುಡ್ಡಕ್ಕೆ ಬೆಂಕಿ ಬಿದ್ದು ನೂರಾರು ಗಿಡಮರಗಳು ನಾಶವಾಗಿವೆ. ಬಳಿಕ ಅಗ್ನಿ ಶಾಮಕ ದಳದ ಸಿಬ್ಬಂದಿಗಳು ಬಂದು ಬೆಂಕಿಯನ್ನು ನಂದಿಸುವ ಪ್ರಯತ್ನವನ್ನು ಮಾಡಿದ್ದಾರೆ.

# ನಡಹಳ್ಳಿ ಪಂಚಮಸಾಲಿ ಸಮಾಜದ ವಿರೋಧಿ ಅಲ್ಲಾ:ಹಿರೇಮಠ

## ರಾಜಕೀಯ ನಾಯಕರುಗಳು ಆರೋಪ, ಪ್ರತ್ಯಾರೋಪ ಮಾಡುವದು ಸಹಜವಾದ ಪ್ರಕ್ರಿಯೆ

• ಉದಯವಾಹಿನಿ, ತಾಳಿಕೋಟೆ

ಬಿಜೆಪಿ ಪಕ್ಷವು ಹಿಂದೂತ್ವದ ಸಿದ್ಧಾಂತದ ಮೇಲೆ ನಡೆದು ಕೊಂಡು ಬಂದಂತಹ ಪಕ್ಷವಾಗಿದೆ ಈ ಪಕ್ಷ ದಲ್ಲಿರುವ ಪ್ರತಿಯೊಬ್ಬ ಕಾರ್ಯಕರ್ತನಿಂದ ಹಿಡಿದು ನಾಯಕರ ವರೆಗೂ ಎಲ್ಲರೂ ಸಂಸ್ಕಾರ ಉಳ್ಳವರಾಗಿದ್ದಾರೆ ಮಾಜಿ ಶಾಸಕ ಎ.ಎಸ್.ಪಾಟೀಲ ಅವರು ಪಂಚಮಸಾಲಿ ಸಮಾಜದ ಜನರಿಂದ ಹಿಡಿದು ಸಣ್ಣ ಪುಟ್ಟ ಎಲ್ಲಾ ಸಮಾಜದ ಬಾಂಧವರನ್ನು ಪ್ರೀತಿ ಸುವಂತಹ ಹೃದಯ ವಂತಿಕೆ ಹೊಂದಿದ್ದಾರೆಂದು ಬಿಜೆಪಿ ಮುಖಂಡ, ನಡಹಳ್ಳಿ ಅಭಿಮಾನಿ ಬಳಗದ ಶಿವಶಂಕರ ಹಿರೇಮಠ ಅವರು ಹೇಳಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರೆಯಲಾದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು ಬಸನಗೌಡ ಪಾಟೀಲ ಅವರು ಹಿಂದೂ ಸಮಾಜದ ನಾಯಕರಾಗಿದ್ದಾರೆ ಅವರನ್ನು ಬಿಜೆಪಿ ಪಕ್ಷದಿಂದ ಉಚ್ಚಾಟಿಸಿರುವದು ನಮ್ಮೆಲ್ಲರಿಗೂ ನೋವು ಇದೆ.

ಆದರೆ ಬಿಜೆಪಿ ಪಕ್ಷದ ವರಿಷ್ಠರು ತೆಗೆದುಕೊಂಡ ತಿರ್ಮಾನಕ್ಕೆ ಬದ್ದರಾಗಬೇಕಾಗುತ್ತದೆ ಯಾಕೆಂದರೆ ಬಿಜೆಪಿ ಪಕ್ಷದಲ್ಲಿ ವ್ಯಕ್ತಿಗಿಂತ ಪಕ್ಷ ದೊಡ್ಡದು ಪಕ್ಷಕ್ಕಿಂತ ದೇಶ ದೊಡ್ಡದು ಎಂಬ ಸಿದ್ಧಾಂತವನ್ನು ಅಳವಡಿಸಿಕೊಂಡು ಬಂದಿದ್ದಾಗಿದೆ ರಾಜಕೀಯ ನಾಯಕರುಗಳು ಆರೋಪ, ಪ್ರತ್ಯಾರೋಪ ಮಾಡುವದು ಸಹಜವಾದ ಪ್ರಕ್ರಿಯೆ ಆಗಿದೆ ಇದನ್ನೇ ಬಂಡವಾಳವನ್ನಾಗಿಟ್ಟುಕೊಂಡು ಕೆಲವು ಕಾಂಗ್ರೇಸ್ ಪ್ರಚೋದಿತರು ಬಿಜೆಪಿ ಪಕ್ಷದ ನಾಯಕರಾದ ಬಿ.ಎಸ್. ಯಡಿಯೂರಪ್ಪ, ಪಕ್ಷದ ರಾಜ್ಯಾಧ್ಯಕ್ಷ ವಿಜೇಂದ್ರ ಮತ್ತು ಮಾಜಿ ಶಾಸಕ ಎ.ಎಸ್ .ಪಾಟೀಲ(ನಡಹಳ್ಳಿ) ಅವರ ಭಾವಚಿತ್ರ ಗಳಿಗೆ ಪ್ರತಿಭಟನೆಯ ಸಮಯದಲ್ಲಿ ಚಪ್ಪಲಿಹಾರ ಹಾಕಿ ಅವಮಾನಿಸಿರುವದು ಅವರ ಸಂಸ್ಕಾರವನ್ನು ಎತ್ತಿ ತೋರಿಸುತ್ತದೆ ಎಂದ ಅವರು ಮಾಜಿ ಶಾಸಕ ಎ.ಎಸ್.ಪಾಟೀಲ(ನಡಹಳ್ಳಿ) ಅವರು ಅಭಿವೃದ್ಧಿ ಪೂರಕ ಕ್ರೀಯಾಶೀಲಹೊಂದಿದಂತಹ ವ್ಯಕ್ತಿಯಾಗಿದ್ದಾರೆ ಬಡವರ ಬಗ್ಗೆ ಕಳಕಳಿ ಹೊಂದಿದಂತಹ ವ್ಯಕ್ತಿಯಾಗಿದ್ದಾರೆ ಅದ ರಲ್ಲಿಯೂ ಪಂಚಮಸಾಲಿ ಸಮಾಜದ ಬಂದು ಗಳೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿದವರಾಗಿದ್ದಾರೆ ಇಂತಹ ವ್ಯಕ್ತಿಯ ಹೆಸ ರನ್ನು ತೇಜೋವಧೆ ಮಾಡುವ ದೃಷ್ಠಿಯಿಂದ ಕೆಲವು ಬಿಜೆಪಿ ಪಕ್ಷದ ವಿರೋಧಿಗಳು ಪ್ರತಿಭಟನಾ ಸಮಯದಲ್ಲಿ ಬಿಜೆಪಿ ನಾಯಕರುಗಳ ಭಾವಚಿತ್ರಕ್ಕೆ ಅವಮಾನಿಸುವಂತಹ ಕಾರ್ಯ ಮಾಡಿದ್ದಾರೆ ಇದನ್ನು ಬಲವಾಗಿ ಖಂಡಿಸುತ್ತೇವೆಂದರು.


ಉದಯವಾಹಿನಿ ಚಿತ್ರ


**ವ್ಯಕ್ತಿಗಿಂತ ಪಕ್ಷ ದೊಡ್ಡದು**

ಈ ಅವಮಾನ ಕೃತ್ಯದಲ್ಲಿ ಭಾಗಿಯಾದವರೂ ಯಾರೂ ಬಿಜೆಪಿ ಕಾರ್ಯಕರ್ತರೇ ಅಲ್ಲಾ ಆದ ಕಾರಣ ಇದೇ ದಿ.7 ರಂದು ಬಿ.ಎಸ್.ಯಡಿಯೂರಪ್ಪನವರ, ವಿಜೇಂದ್ರ ಮತ್ತು ಎ.ಎಸ್.ಪಾಟೀಲ ಅವರ ಭಾವಚಿತ್ರಗಳಿಗೆ ಕ್ಷೀರಾಭಿಷೇಕ ಸಮಾರಂಭವನ್ನು ಆಯೋಜಿಸಲಾಗಿದ್ದು ಅಂದು ಬಿಜೆಪಿ ಪಕ್ಷದ ಕಾರ್ಯಕರ್ತರು ಮತ್ತು ನಡಹಳ್ಳಿ ಅವರ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸ ಬೇಕೆಂದು ಮನವಿ ಮಾಡಿದರು.

**ನಾಯಕರ ಭಾವಚಿತ್ರಕ್ಕೆ ಅವಮಾನಿಸಿರುವದು ಖಂಡನೀಯ**

**ಸ್ವಾತಂತ್ರ್ಯ ಸಿಕ್ಕು 75 ವರ್ಷಗಳಿಂದಲೂ ಅಭಿವೃದ್ಧಿ ಕಾಣದೇ ಹಾಗೆ ಉಳಿದಿದ್ದ ಮುದ್ದೇಬಿಹಾಳ ಮತಕ್ಷೇತ್ರವನ್ನು ಅಂದು ಶಾಸಕರಾಗಿದ್ದ ಎ.ಎಸ್.ಪಾಟೀಲ(ನಡಹಳ್ಳಿ) ಅವರು ಅಭಿವೃದ್ಧಿ ಕಾರ್ಯಗಳಿಗೆ ಒತ್ತು ನೀಡಿದ ಪರಿಣಾಮ ಇಡೀ ಮತಕ್ಷೇತ್ರದಲ್ಲಿ ರಸ್ತೆ, ಗುಡಿ ಗುಂಡಾರಗಳು ಅಲ್ಲದೇ ಮುದ್ದೇಬಿಹಾಳ, ತಾಳಿಕೋಟೆ, ನಾಲತವಾಡ ಪಟ್ಟಣಗಳಲ್ಲಿ ಮಹಾನ್ ನಾಯಕರುಗಳ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಸರ್ವ ಸಮಾಜದ ಬಂದುಗಳ ಹೃದಯದಲ್ಲಿ ನೆಲೆಸುವಂತಹ ಕೆಲಸ ಮಾಡಿದ್ದಾರೆ ಯತ್ನಾಳ ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡಿರುವದಕ್ಕೆ ಪಂಚಮಸಾಲಿ ಸಮಾಜದ ಬಂದುಗಳಿಗೆ ನೋವು ಆಗಿದೆ ಇದನ್ನು ಪ್ರಶ್ನೀಸಿ ಪ್ರತಿಭಟನೆ ಮಾಡುವದು ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಹಕ್ಕು ಇದೆ ಇದನ್ನೇ ಬಂಡವಾಳವನ್ನಾಗಿ ಮಾಡಿಕೊಂಡು ಕಾಂಗ್ರೇಸ್ಸಿನ ಪ್ರಚೋದಿತ ಕೆಲವರು ಬಿಜೆಪಿ ಪಕ್ಷದ ನಾಯಕರ ಭಾವಚಿತ್ರಕ್ಕೆ ಅವಮಾನಿಸಿರುವದು ಖಂಡನೀಯವಾಗಿದೆ**

### ದೇವರ ದಾಸಿಮಯ್ಯನವರ ಜಯಂತಿ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಗುಳೇದಗುಡ್ಡ

ಕನ್ನಡ ನಾಡಿನ ಶಿವ ಶರಣರರಲ್ಲಿ ದೇವರ ದಾಸಿಮಯ್ಯನವರು 11ನೇ ಶತಮಾನದಲ್ಲಿ ಆಗಿ ಹೋದ ಶರಣರು. ಮಹಾಶಿವಶರಣರಲ್ಲಿ ಇವರೊಬ್ಬರು ಮತ್ತು ಶರಣ ಸಂಪ್ರದಾಯದಲ್ಲಿ ಮೊದಲಿಗರು ಹಾಗೂ ಆದ್ಯ ವಚನಕಾರಾಗಿದ್ದಾರೆ ಎಂದು ಪುರಸಭೆ ಸದಸ್ಯ, ನೇಕಾರ ಒಕ್ಕೂಟದ ಅಧ್ಯಕ್ಷ ಉಮೇಶ ಹುನಗುಂದ ಹೇಳಿದರು.

ಅವರು ತಹಸೀಲ್ದಾರ್ ಕಚೇರಿಯಲ್ಲಿ ತಾಲ್ಲೂಕು ಆಡಳಿತದಿಂದ ನಡೆದ ಆದ್ಯವಚನಕಾರ, ನೇಕಾರ ಸಂತ ದೇವರ ದಾಸಿಮಯ್ಯ ಜಯಂತಿ ಆಚರಣೆಯಲ್ಲಿ ದೇವರ ದಾಸಿಮಯ್ಯ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಿ ಮಾತನಾಡಿ, ದೇವರ ದಾಸಿಮಯ್ಯನು ಒಬ್ಬ ಐತಿಹಾಸಿಕ ಪುರುಷನೆಂಬುದಕ್ಕೆ ಶಿಲಾಶಾಸನಗಳು ಬಲವಾದ ಪ್ರಮಾಣಗಳಾಗಿವೆ. ಅವರ ನಂತರ ಸ್ವಲ್ಪ ಕಾಲದಲ್ಲಿಯೇ ಅವತರಿಸಿದ ಬಸವಣ್ಣನವರು ಈ ಶರಣ ದಂಪತಿಗಳ ಮಹಿಮೆಯನ್ನು ಅವರ ಚರಿತ್ರೆ ಯಲ್ಲಿ ಘಟನೆಗಳನ್ನು, ವಚನಗಳನ್ನು ತನ್ನ ವಚನ ವಾಙ್ಮಯದಲ್ಲಿ ನಿರರ್ಗಳವಾಗಿ ಉಲ್ಲೇಖಿಸಿದ್ದಾರೆ ಎಂದರು.

# ನಿಯಮ ಉಲ್ಲಂಘನೆಯಾದರೆ ಕಾನೂನುಕ್ರಮ

• ಉದಯವಾಹಿನಿ, ಪುತ್ತೂರು


ಉದಯವಾಹಿನಿ ಚಿತ್ರ

ಪುತ್ತೂರಿನ ಇತಿಹಾಸ ಪ್ರಸಿದ್ಧ ಮಹಾಲಿಂಗೇಶ್ವರ ದೇವಳದ ವಾರ್ಷಿಕ ಜಾತ್ರಾಮಹೋತ್ಸವದ ಹಿನ್ನಲೆಯಲ್ಲಿ ಜಾತ್ರಾ ಸಂದರ್ಭ ಎಲ್ಲಾ ವ್ಯಾಪಾರಿಗಳಿಗೂ ಅನುಕೂಲವಾಗುವಂತೆ ವ್ಯವಸ್ಥೆ ಮಾಡಲಾಗಿದೆ.

ಕಳೆದ ಬಾರಿ ಕೇವಲ 250 ಅಂಗಡಿಗಳಿದ್ದವು. ಆದರೆ ಈ ಬಾರಿ 110 ಹೆಚ್ಚುವರಿ ಅಂಗಡಿಗಳನ್ನು ಮಾಡಲಾಗಿದೆ. ಒಬ್ಬ ವ್ಯಕ್ತಿಗೆ ಕೇವಲ 2 ಅಂಗಡಿಗಳನ್ನು ಮಾತ್ರ ನೀಡಲಾಗುತ್ತದೆ.

ಪುತ್ತೂರು ಜಾತ್ರೆಯಲ್ಲಿ ಅಂಗಡಿ ಹಾಕಿ ನನ್ನ ಮಗಳಿಗೆ ಮದುವೆ ಮಾಡಿದ್ದೇನೆ. ಮನೆ ಕಟ್ಟಿದ್ದೇನೆ ಎನ್ನುವ ಮಾತುಗಳು ವ್ಯಾಪಾರಿಗಳಿಂದ ಬಂದರೆ ನಮ್ಮ ಶ್ರಮ ಸಾರ್ಥಕವಾಗುತ್ತದೆ ಎಂದು ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಪಂಜಿಗುಡ್ಡೆ ಈಶ್ವರ ಭಟ್ ಹೇಳಿದರು.

ಅವರು ಜಾತ್ರೋತ್ಸವದ ಸಲುವಾಗಿ ದೇವಳದ ಸಭಾಭವನದಲ್ಲಿ ನಡೆದ ತಾತ್ಕಾಲಿಕ ಏಲಂ ಪ್ರಕ್ರಿಯೆಗಳಿಗೆ ಚಾಲನೆ ನೀಡಿ ಮಾತನಾಡಿದರು. ವಾಸ್ತು ಇಂಜಿನಿಯರ್ ಪಿ.ಜಿ.ಜಗನ್ನೀವಾಸ ರಾವ್ ಅವರು ಸೇವಾರೂಪದಲ್ಲಿ ಈ ತಾತ್ಕಾಲಿಕ ಅಂಗಡಿಗಳಿಗೆ ಮಾರ್ಕಿಂಗ್ ಮಾಡಿಕೊಟ್ಟಿದ್ದಾರೆ. ಯಾವುದೇ ತೊಂದರೆ ಉಂಟಾದರೂ ದೇವಳದ ಕಚೇರಿ ಅಥವಾ ನನ್ನನ್ನು ನೇರವಾಗಿ ಸಂಪರ್ಕಿಸಿ ಎಂದು ಅವರು ವ್ಯಾಪಾರಿಗಳಿಗೆ ತಿಳಿಸಿದರು.

**ನಿಯಮಪಾಲನೆ:** ಬಿಡ್ಡು ಮೊತ್ತವನ್ನು ಏಲಂ ನಡೆದ ದಿನದಂದೇ ಪೂರ್ತಿಯಾಗಿ ಪಾವತಿಸಬೇಕು. ತಪ್ಪಿದಲ್ಲಿ ಮುಂಗಡ ಠೇವಣಿ ಮೊಬಲಗನ್ನು ಮುಟ್ಟುಗೋಲು ಹಾಕಿ ಮರು ಹರಾಜು ಮಾಡಲಾಗುವುದು. ವೆಂಕಟ್ರಮಣ ದೇವಸ್ಥಾನದಿಂದ ರಥಬೀದಿಗೆ ಬರುವ ಕಂಬಳ ಗದ್ದೆಯ ಜಾಗದಲ್ಲಿ ಹಾಗು ಕಂಬಳದ ಸ್ಟೇಜಿನ 4 ಬದಿಯಲ್ಲಿ ಅನಧಿಕೃತವಾಗಿ ಯಾವುದೇ ಸ್ಟಾಲ್ ಮತ್ತು ಐಸ್‌ಕ್ರೀಮ್ ಮಾರಾಟಕ್ಕೆ ನಿಷೇಧ. ಸಂತೆ ಸ್ಥಳದಲ್ಲಿ ಜೂಜು, ಜುಗಾರಿ, ಲಕ್ಕಿಡಿಪ್, ಮಾಂಸದ ಹೋಟೇಲ್ ನಡೆಸುವುದಕ್ಕೆ ಅವಕಾಶ ಇಲ್ಲ. ಧ್ವನಿ ವರ್ಧಕ ಬಳಕೆಗೆ ಅನುಮತಿ ಕಡ್ಡಾಯ. ಕರ್ಕಶವಾಗಿ ಧ್ವನಿ ಬಿತ್ತರಿಸುವ ಧ್ವನಿವರ್ಧಕಗಳಿಗೆ ಅವಕಾಶ ನಿರಾಕರಣೆ. ಸ್ಟಾಲ್‌ನ ಹೊರಗಡೆ ಬಾಡಿಗೆ ಜನರೇಟರ್ ಅಳವಡಿಸಬಾರದು, ಜನರೇಟರ್ ಜೋಡಣೆಗೆ ಕಚೇರಿಯಿಂದ ಅಥವಾ ಅವಶ್ಯ ಬಿದ್ದಲ್ಲಿ ಮೆಸ್ಕಾಂನಿಂದ ಪರವಾನಿಗೆ ಪಡೆಯಬೇಕು. ನಿಯಮಗಳನ್ನು ಉಲ್ಲಂಘನೆ ಮಾಡಿದ ವ್ಯಾಪಾರಿಗಳ ವಿರುದ್ಧ ಕಾನೂನುಕ್ರಮ ಕೈಗೊಳ್ಳಲಾಗುವುದು.

# ಏ.10 ಉಡುಪಿಯಲ್ಲಿ ಜನಾಕ್ರೋಶ ಯಾತ್ರೆ

• ಉದಯವಾಹಿನಿ, ಉಡುಪಿ



ಉದಯವಾಹಿನಿ ಚಿತ್ರ

ಬಿಜೆಪಿ ಸ್ಥಾಪನಾ ದಿನಾಚರಣೆಯ ಅಂಗವಾಗಿ ಏ.6ರಂದು ಜಿಲ್ಲೆಯ ಎಲ್ಲಾ 1,112 ಬೂತ್ ಗಳಲ್ಲಿ ಮತ್ತು ಪಕ್ಷದ ಕಾರ್ಯಕರ್ತರ ಮನೆಗಳಲ್ಲಿ ಪಕ್ಷದ ಧ್ವಜಾರೋಹಣ ನಡೆಯಲಿದೆ. ಪಕ್ಷದ ಸೂಚನೆಯಂತೆ ಏ.10ರಂದು ಉಡುಪಿ ಜಿಲ್ಲಾ ಬಿಜೆಪಿ ನೇತೃತ್ವದಲ್ಲಿ ರಾಜ್ಯ ಕಾಂಗ್ರೇಸ್ ಸರಕಾರದ ವಿರುದ್ಧ ಜನಾಕ್ರೋಶ ಯಾತ್ರೆ ನಡೆಯಲಿದೆ ಎಂದು ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕಿಶೋರ್ ಕುಮಾರ್ ಕುಂದಾಪುರ ತಿಳಿಸಿದರು. ಅವರು ಬಿಜೆಪಿ ಜಿಲ್ಲಾ ಕಛೇರಿಯಲ್ಲಿ ನಡೆದ ಜಿಲ್ಲಾ ಪದಾಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಬಿಜೆಪಿ ಸ್ಥಾಪನಾ ದಿನಾಚರಣೆಯ ಪ್ರಯುಕ್ತ ಜಿಲ್ಲೆ ಮತ್ತು ಮಂಡಲಗಳ ಮಟ್ಟದಲ್ಲಿ ಪಕ್ಷದ ಧ್ವಜಾರೋಹಣ ಹಾಗೂ ಉಪನ್ಯಾಸ ಕಾರ್ಯಕ್ರಮ ನಡೆಯಲಿದೆ.

ಏ.10ರಂದು ಬೆಳಿಗ್ಗೆ ಗಂಟೆ 9.30ಕ್ಕೆ ಜನಾಕ್ರೋಶ ಯಾತ್ರೆಯ ಬೃಹತ್ ಜಾಥಾ ಉಡುಪಿಯ ಪಾರ್ಕಿಂಗ್ ಏರಿಯಾ ಬಳಿ ಪ್ರಾರಂಭಗೊಂಡು ಕಲ್ಸಂಕ ಮಾರ್ಗವಾಗಿ ಸಾಗಿ ಕಡಿಯಾಳಿಯಲ್ಲಿ ಸಮಾಪನಗೊಳ್ಳಲಿದೆ.

ಬೆಳಿಗ್ಗೆ ಗಂಟೆ 10.30ಕ್ಕೆ ಬಿಜೆಪಿ ಉಡುಪಿ ಜಿಲ್ಲಾ ಕಛೇರಿಯ ಬಳಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ಪಕ್ಷದ ರಾಜ್ಯ ಮತ್ತು ಜಿಲ್ಲಾ ನಾಯಕರು, ಜಿಲ್ಲೆಯ ಸಂಸದರು, ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರ ಸಮಾಗಮದೊಂದಿಗೆ ಬೃಹತ್ ಜನಾಕ್ರೋಶ ಸಮಾವೇಶ ನಡೆಯಲಿದೆ.

ಪಕ್ಷದ ಪ್ರಮುಖರು, ಪದಾಧಿಕಾರಿಗಳು, ಜನಪ್ರತಿನಿಧಿಗಳು ಮತ್ತು ಕಾರ್ಯಕರ್ತರು ಬೃಹತ್ ಸಂಖ್ಯೆಯಲ್ಲಿ ಭಾಗವಹಿಸಿ ಜನಾಕ್ರೋಶ ಯಾತ್ರೆಯನ್ನು ಯಶಸ್ವಿಗೊಳಿಸಬೇಕು ಎಂದು ಅವರು ಕರೆ ನೀಡಿದರು.

### ಖಾಸಗಿ ಬಸ್ ಪಲ್ಟಿ ಓರ್ವ ಮೃತ್ಯು, ಹಲವರಿಗೆ ಗಾಯ

• ಉದಯವಾಹಿನಿ, ಉಪ್ಪಿನಂಗಡಿ

ಚಾಲಕನ ನಿಯಂತ್ರಣ ತಪ್ಪಿದ ಖಾಸಗಿ ಬಸ್ಸೊಂದು ಪಲ್ಟಿಯಾದ ಪರಿಣಾಮ ಓರ್ವ ಮೃತಪಟ್ಟು, ಹತ್ತಕ್ಕೂ ಅಧಿಕ ಮಂದಿ ಗಂಭೀರ ಗಾಯಗೊಂಡ ಘಟನೆ ಮಂಗಳೂರು ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯ ನೀರಕಟ್ಟೆ ಎಂಬಲ್ಲಿ ನಡೆದಿದೆ. ಬೆಂಗಳೂರಿನಿಂದ ಉಡುಪಿಗೆ ತೆರಳುತ್ತಿದ್ದ ಖಾಸಗಿ ಬಸ್ ನೀರ ಕಟ್ಟೆಯ ಅಪಾಯಕಾರಿ ತಿರುವನ್ನು ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾಗಿದ್ದು, ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಓರ್ವ ಬಸ್ಸಿನಡಿ ಸಿಲುಕಿ ಮೃತಪಟ್ಟಿದ್ದು, ಹತ್ತಕ್ಕೂ ಅಧಿಕ ಮಂದಿಗೆ ಗಾಯಗಳಾಗಿವೆ. ಗಾಯಾಳುಗಳನ್ನು ಪುತ್ತೂರು, ಮಂಗಳೂರಿನ ಆಸ್ಪತ್ರೆಗೆ ಕರೆದೊಯ್ಯಲಾಗುತ್ತಿದ್ದು, ಘಟನೆಯ ಬಗ್ಗೆ ಹೆಚ್ಚಿನ ಮಾಹಿತಿ ಇನ್ನಷ್ಟೇ ತಿಳಿದು ಬರಬೇಕಿದೆ.

# ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರದಲ್ಲಿ ಅಕ್ರಮ

• ಉದಯವಾಹಿನಿ, ಅಥಣಿ

**ಕರ್ತವ್ಯ ನಿರತ ಶಿಕ್ಷಕ ಅಮಾನತ್ತು**




ತಾಲ್ಲೂಕಿನ ತೆಲಸಂಗ ಗ್ರಾಮದ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರದಲ್ಲಿ ಕಳೆದ ದಿನಾಂಕ 21 ಮತ್ತು 24ರಂದು ನಡೆದ ಕನ್ನಡ ಮತ್ತು ಗಣಿತ ಭಾಷಾ ಪರೀಕ್ಷೆಯ ಕೊಠಡಿಗಳಲ್ಲಿ ಮೇಲ್ವಿಚಾರಕರಾಗಿ ಕೊಠಡಿ ಸಂಖ್ಯೆ 10 ರಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಪರೀಕ್ಷೆ ಬರೆಯುತ್ತಿರುವ ಮಕ್ಕಳಿಗೆ ಕೆಲವೊಂದು ಉತ್ತರಗಳನ್ನು ಹೇಳಿ ಕೊಟ್ಟಿರುವ ಬಗ್ಗೆ, ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಈ ದೃಶ್ಯಾವಳಿಗಳನ್ನು ಪರಿಶೀಲಿಸಿ ಪರೀಕ್ಷಾ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ತೋಟದ ಶಾಲೆಯ ಶಿಕ್ಷಕ ವಿ.ಕೆ.ಪವಾರ ಅವರನ್ನು ಅಮಾನತುಗೊಳಿಸಿ ಚಿಕ್ಕೋಡಿ ಡಿಡಿಪಿಐ ಆರ್.ಎಸ್.ಸೀತಾರಾಮು ಆದೇಶ ಹೊರಡಿಸಿದ್ದಾರೆ.

ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರದಲ್ಲಿ ನಕಲು ಮಾಡುವುದನ್ನು, ಅಕ್ರಮ ಎಸಗುವುದನ್ನು ತಡೆಗಟ್ಟಬೇಕಾದ ಕೊಠಡಿಯ ಮೇಲ್ವಿಚಾರಕ ಶಿಕ್ಷಕ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಪಾವಿತ್ರ್ಯತೆಯನ್ನು ಕಾಪಾಡದೇ ಕರ್ತವ್ಯಲೋಪ ಎಸಗಿದ್ದಾರೆ ಎಂದು ಕ್ಷೇತ್ರಶಿಕ್ಷಣಾಕಾರಿ ಎಂ ಬಿ ಮೋರಟಗಿ ಇವರು ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸಿ ಶಿಕ್ಷಕರ ಮೇಲೆ ಶಿಸ್ತು ಕ್ರಮ ಜರುಗಿಸುವಂತೆ ಶಿಫಾರಸ್ಸು ಮಾಡಿದ್ದರು. ಕ್ಷೇತ್ರ ಶಿಕ್ಷಣಾಧಿಕಾರಿಗಳ ಶಿಫಾರಸ್ಸು ಹಾಗೂ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿದ ಚಿಕ್ಕೋಡಿ ಡಿಡಿಪಿಐ ಆರ್.ಎಸ್. ಸೀತಾರಾಮು ಅವರು ಕರ್ತವ್ಯ ಲೋಪ ಎಸಗಿದ ಶಿಕ್ಷಕನನ್ನು ಅಮಾನತ್ತು ಮಾಡಿ ಆದೇಶ ಹೊರಡಿಸಿದ್ದಾರೆ.

# ವಿವಿಧ ಯೋಜನೆಗಳ ಸೌಲಭ್ಯ ಒದಗಿಸಲು ಕ್ರಮ ವಹಿಸಿ

• ಉದಯವಾಹಿನಿ, ಗದಗ


ಉದಯವಾಹಿನಿ ಚಿತ್ರ

ಸರಕಾರದಿಂದ ಮಹಿಳಾ, ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಇರುವ ವಿವಿಧ ಯೋಜನೆಗಳ ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ಒದಗಿಸಲು ಕ್ರಮ ವಹಿಸಬೇಕೆಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಅವರು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಿವಿಧ ಜಿಲ್ಲಾ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಬಾಲ್ಯ ವಿವಾಹ ತಡೆಗಟ್ಟಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯೊಂದಿಗೆ ವಿವಿಧ ಇಲಾಖೆಯ ಸಹಭಾಗಿತ್ವವೂ ಅವಶ್ಯಕವಾಗಿದೆ ಎಂದರು. ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸಿ.ಎಸ್.ಶಿವನಗೌಡ್ರ ಮಾತ ನಾಡಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಯವರು ಕಾನೂನು ಇಲಾಖೆಯ ಸಹಕಾರ ದೊಂದಿಗೆ ಮಹಿಳೆಯರಿಗೆ ಮತ್ತು ಮಕ್ಕಳಿಗಾಗಿ ಇರುವ ವಿವಿಧ ಯೋಜನೆಗಳ ಹಾಗೂ ಬಾಲ್ಯ ವಿವಾಹ ನಿಷೇಧ, ಪೋಕ್ಸೋ ಕಾಯ್ದೆಗಳ ಕುರಿತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಹಮ್ಮಿಕೊಳ್ಳಬೇಕೆಂದು ನಿರ್ದೇಶನ ನೀಡಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಭರತ್ ಎಸ್ ಅವರು ಮಾತನಾಡಿ ಜಿಲ್ಲೆಯ ಅಂಗನವಾಡಿ ಕೇಂದ್ರಗಳಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ ಶುದ್ಧ ಕುಡಿಯುವ ನೀರು ಒದಗಿಸಲು ಕ್ರಮ ವಹಿಸಬೇಕೆಂದು ಸೂಚಿಸಿದರು.

ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರಾದ ಪದ್ಮಾವತಿ ಜಿ, ಹೆಚ್ಚುವರಿ ಜಿಲ್ಲಾ ಪೊಲೀಸ ವರಿಷ್ಟಾಧಿಕಾರಿ ಎಂ.ಬಿ.ಸಂಕದ, ಜಿಲ್ಲಾ ಆರ್.ಸಿ.ಎಚ್. ಅಧಿಕಾರಿ ಡಾ.ಮೀನಾಕ್ಷಿ, ಮಕ್ಕಳ ರಕ್ಷಣಾ ಘಟಕದ ಅಧಿಕಾರಿ ಶ್ರೀಮತಿ ರಫೀಕಾ ಹಳ್ಳೂರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ನಿರೂಪಣಾಧಿಕಾರಿ ಶ್ರೀಮತಿ ರಾಧಾ ಮಣ್ಣೂರ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ವಿವಿಧ ಇಲಾಖೆಯ ಅಧಿಕಾರಿಗಳು, ಸಂಘ ಸಂಸ್ಥೆಯವರು ಇದ್ದರು.

### ಅಕ್ರಮ ದನ ಸಾಗಣೆ ತಡೆ; ಚಾಲಕ ಪರಾರಿ

• ಉದಯವಾಹಿನಿ, ಬೆಳ್ತಂಗಡಿ

ಮಂಗಳೂರಿಗೆ ಅಕ್ರಮವಾಗಿ ಗೋವುಗಳನ್ನು ಸಾಗಿಸುತ್ತಿದ್ದ ವಾಹನವನ್ನು ಕಳಿಯ ನ್ಯಾಯತರ್ಪು ಸಮೀಪದ ಜಾರಿಗೆಬೈಲು ಎಂಬಲ್ಲಿ ತಡೆಹಿಡಿಯಲಾಗಿದೆ. ತರಕಾರಿ ಸಾಗಾಟದ ವಾಹನದಲ್ಲಿ ಸುಮಾರು 10 ರಿಂದ 15 ಗೋವುಗಳನ್ನು ವಧೆಗೆಂದು ಸಾಗಿಸಲಾಗುತ್ತಿತ್ತು. ಈ ಬಗ್ಗೆ ಖಚಿತ ಮಾಹಿತಿ ಮೇರೆಗೆ ಬಲಪಂಥೀಯ ಸಂಘಟನೆಯ ಸದಸ್ಯರು ವಾಹನವನ್ನು ಹಿಂಬಾಲಿಸಿ ತಡೆಹಿಡಿದಿದ್ದಾರೆ. ಘಟನೆಯಲ್ಲಿ ಚಾಲಕರು ವಾಹನ ಬಿಟ್ಟು ಪರಾರಿಯಾಗಿದ್ದ. ದೂರಿನ ಮೇರೆಗೆ ಬೆಳ್ತಂಗಡಿ ಪೊಲೀಸರು ಹೆಚ್ಚಿನ ತನಿಖೆ ಮತ್ತು ಕಾನೂನು ಕ್ರಮಕ್ಕಾಗಿ ವಾಹನ, 15 ಕ್ಕೂ ಹೆಚ್ಚು ಜಾನುವಾರುಗಳನ್ನು ವಶಕ್ಕೆ ಪಡೆದರು.

## ಮನೆ ಬಾಗಿಲಿಗೆ ಬರುತ್ತಾರೆ, ಅನ್ನಭಾಗ್ಯದ ಅಕ್ಕಿ ಖರೀದಿಸುತ್ತಾರೆ, ಟ್ರಕ್‌ನಲ್ಲಿ ಹಾಕೊಂಡು ಹೋಗ್ತಾರೆ; ಗಜೇಂದ್ರಗಡದಲ್ಲಿ ಪಡಿತರ ಅಕ್ರಮ!

# ಅನ್ನಭಾಗ್ಯಕ್ಕೆ ಬೀಳುತ್ತಿರುವ ಕನ್ನ ತಡೆಯೋರು ಯಾರು?

• ಉದಯವಾಹಿನಿ, ಗಜೇಂದ್ರಗಡ


ಉದಯವಾಹಿನಿ ಚಿತ್ರ

ಸ್ಥಳೀಯ ಎಪಿಎಂಸಿ ಮಾರುಕಟ್ಟೆಯಲ್ಲಿ ಅನ್ನಭಾಗ್ಯ ಯೊಜನೆ ಪಡಿತರ ಅಕ್ಕಿ ಅಕ್ರಮ ಮಾರಾಟ ವ್ಯವಹಾರ ಅವ್ಯಾಹತವಾಗಿ ನಡೆದಿರುವುದಕ್ಕೆ ಕಡಿವಾಣ ಹಾಕಲು ಅಧಿಕಾರಿಗಳು ಹೆಣಗಾಡುತ್ತಿದ್ದಾರೆ.

ಎಪಿಎಂಸಿ ಆವರಣದಲ್ಲಿನ ಅಂಗಡಿ ಮೇಲೆ ದಾಳಿ ಮಾಡಿದ ಆಹಾರ ಇಲಾಖೆ ಅಧಿಕಾರಿಗಳು, ಪೊಲೀಸರು ಅಕ್ರಮ ದಾಸ್ತಾನು ಮಾಡಿದ್ದ ಪಡಿತರ ಅಕ್ಕಿ ಚೀಲಗಳನ್ನು ವಶ ಪಡಿಸಿಕೊಂಡ ಘಟನೆ ವಾರದ ಹಿಂದೆ ನಡೆದಿದೆ. ಇಂತಹ ಘಟನೆ ಮೇಲಿಂದ ಮೇಲೆ ನಡೆಯುತ್ತಿರುವುದು ಸಾಮಾನ್ಯವಾಗುತ್ತಿದೆ ಎಂಬ ಆರೋಪ ಕೇಳಿಬರುತ್ತಿದೆ. ಅಧಿಕಾರಿಗಳು ಕಾಳಸಂತೆಯಲ್ಲಿ ಅಕ್ರಮ ಪಡಿತರ ಮಾರಾಟಕ್ಕೆ ಬ್ರೇಕ್ ಹಾಕಲು ಶ್ರಮ ವಹಿಸುತ್ತಿದ್ದಾರೆ. ಆದರೂ ಅಕ್ರಮ ಪಡಿತರ ಅಕ್ಕಿ ವ್ಯವಹಾರ ಎಗ್ಗಿಲ್ಲದೆ ಸಾಗಿರುವುದು ಜನ ಹುಬ್ಬೇರಿಸುವಂತೆ ಮಾಡಿದೆ.

ಸರ್ಕಾರ ಬಡವರಿಗೆ ಉಚಿತವಾಗಿ ನೀಡುವ ಅನ್ನಭಾಗ್ಯ ಯೋಜನೆಯ ಅಕ್ಕಿಯನ್ನು ಅಕ್ರಮವಾಗಿ ಖರೀದಿಸುತ್ತಿರುವುದು ಗಜೇಂದ್ರಗಡ ಪಟ್ಟಣ, ಸುತ್ತಲಿನ ಗ್ರಾಮದಲ್ಲಿ ನಡೆದಿದೆ. ಸರ್ಕಾರ ಬಡವರಿಗೆ ಉಚಿತವಾಗಿ ಅಕ್ಕಿ ವಿತರಣೆ ಮಾಡುತ್ತಿದ್ದರೆ, ಆ ಅಕ್ಕಿಯನ್ನು ಹೆಚ್ಚಿನ ಬೆಲೆಯ ಆಸೆ ತೋರಿಸಿ ಖರೀದಿಸುತ್ತಿರುವುದು ಅಲ್ಲಲ್ಲಿ ಕಂಡುಬಂದಿದೆ. ವಿಶೇಷವಾಗಿ ಹಳ್ಳಿಗಳಲ್ಲಿ ಸುತ್ತಾಡುವ ಕೆಲ ಜನರ ಗುಂಪು, ಪ್ರತಿ ಕೆಜಿಗೆ 10 ರೂ. ರಿಂದ 15 ರೂ.ವರೆಗೆ ಹಣ ನೀಡಿ ಖರೀದಿಸುತ್ತಿದ್ದಾರೆ ಎಂಬ ಆರೋಪ ಕೇಳಿಬರುತ್ತಿದೆ.

ಅಕ್ರಮವಾಗಿ ಅಕ್ಕಿ ದಾಸ್ತಾನು ಹಾಗೂ ಸಾಗಣೆ ಮೇಲೆ ದಾಳಿ ನಡೆಸಿರುವ ಆಹಾರ ಸರಬರಾಜು ನಿಗಮದ ಅಧಿಕಾರಿಗಳು, ಪ್ರಕರಣ ದಾಖಲಿಸಿಕೊಂಡು ಅಕ್ಕಿ ವಶಪಡಿಸಿಕೊಳ್ಳಲಾಗಿದೆ ಎಂದು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ ಅಧಿಕಾರಿ ಶಕುಂತಲಾ ಚವಡಿ ಹೇಳಿದ್ದಾರೆ.

**ದಲ್ಲಾಳಿಗಳಿಗೆ ಮಾರಾಟ:** ಗ್ರಾಮಸ್ಥರ ಮನೆಗೆ ತೆರಳುವ ಈ ಗುಂಪು, ರೇಷನ್ ಅಕ್ಕಿ ಖರೀದಿಸಲಾಗುವುದು ಎಂದು ಹೇಳುತ್ತಾರೆ. ಮನೆ ಬಾಗಿಲಿನಲ್ಲಿಯೇ ಅಕ್ಕಿಯ ತೂಕ ನೋಡಿ, ಹಣ ನೀಡಿ ವಾಹನದಲ್ಲಿ ಹಾಕಿಕೊಂಡು ಸಾಗುತ್ತಾರೆ. ಹೀಗೆ ಸಂಗ್ರಹಿಸಿದ ಅಪಾರ ಪ್ರಮಾಣದ ಅಕ್ಕಿಯನ್ನು ಕೆಲ ದಲ್ಲಾಳಿಗಳಿಗೆ ಮರು ಮಾರಾಟ ಮಾಡುತ್ತಾರೆ. ಅವರು ಅದನ್ನು ಡೀಲರ್ಸ್ ಮುಖಾಂತರ ಲಾರಿಗಳಲ್ಲಿ ಬೇರೆ ಕಡೆಗೆ ಸಾಗಿಸುತ್ತಾರೆ ಎಂಬ ದೂರುಗಳು ಕೇಳಿಬರುತ್ತಿವೆ.

ಯಾವುದೇ ಭಯವಿಲ್ಲದೇ ಅಕ್ರಮವಾಗಿ ಅಕ್ಕಿ ಖರೀದಿ ಹಾಗೂ ಸಾಗಣೆ ಮಾಡುತ್ತಿದ್ದರೂ ಕ್ರಮ ಇಲ್ಲದಂತಾಗಿದೆ. ಬಡವರ ಹೊಟ್ಟೆ ತುಂಬಿಸಲು ಸರ್ಕಾರ ಉಚಿತವಾಗಿ ಅಕ್ಕಿ ನೀಡಿದರೆ ಅದು ಅಕ್ರಮ ದಂಧೆಗೆ ಬಳಕೆಯಾಗುತ್ತಿದೆ. ಕೂಡಲೇ ಸರ್ಕಾರ ಮತ್ತು ಆಹಾರ ಇಲಾಖೆ ಕ್ರಮ ಕೈಗೊಳ್ಳಬೇಕು ಎಂಬುದು ಪ್ರಜ್ಞಾವಂತರ ಆಗ್ರಹವಾಗಿದೆ.

ಪಡಿತರ ಅಕ್ಕಿಯನ್ನು ಅಕ್ರಮವಾಗಿ ಮಾರಾಟ ಮಾಡುವವರು ಮತ್ತು ಅಕ್ಕಿ ಕೊಳ್ಳುವವರು ಸಿಕ್ಕರೆ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಈ ಕುರಿತು ಪ್ರಕರಣ ದಾಖಲು ಮಾಡಿ ಕ್ರಮ ಕೈಗೊಳ್ಳಲಾಗುವುದು.. ಎಂದು ಗಜೇಂದ್ರಗಡ ತಹಸೀಲ್ದಾರ್ ಕಿರಣಕುಮಾರ ಕುಲಕರ್ಣಿ ಎಚ್ಚರಿಸಿದ್ದಾರೆ.

**ಕೂಡಲೇ ಕಡಿವಾಣ ಹಾಕಿ**

**ಗದಗ ಜಿಲ್ಲೆಯ ಗಜೇಂದ್ರಗಡದ ಸ್ಥಳೀಯ ಎಪಿಎಂಸಿ ಮಾರುಕಟ್ಟೆಯಲ್ಲಿ, ಅನ್ನಭಾಗ್ಯ ಯೊಜನೆ ಪಡಿತರ ಅಕ್ಕಿ ಅಕ್ರಮ ಮಾರಾಟ ವ್ಯವಹಾರ ಅವ್ಯಾಹತವಾಗಿ ಮುಂದುವರೆದಿದೆ. ಈ ಮಧ್ಯೆ ಗ್ರಾಮಗಳಿಗೆ ತೆರಳಿ ಫಲಾನುಭವಿಗಳಿಂದ ಅನ್ನಭಾಗ್ಯದ ಅಕ್ಕಿಯನ್ನು ಹೆಚ್ಚಿನ ದರಕ್ಕೆ ಖರೀದಿಸುವ ಅಕ್ರಮ ದಂಧೆ ಕೂಡ ಬೆಳಕಿಗೆ ಬಂದಿದೆ. ಆಹಾರ ಇಲಾಖೆ ಈ ಅಕ್ರಮವನ್ನು ತಡೆಗಟ್ಟಬೇಕಿದ್ದು, ಅನ್ನಭಾಗ್ಯದ ಅಕ್ಕಿಯ ಅಕ್ರಮ ಖರೀದಿ ಮತ್ತು ಮಾರಾಟದ ಮೇಲೆ ಕೂಡಲೇ ಕಡಿವಾಣ ಹಾಕಬೇಕಿದೆ.**

# ಕೊಠಡಿ ಕೊರತೆ; ಮಕ್ಕಳಿಗೆ ಹೊರಗೆ ಬೋಧನೆ

• ಉದಯವಾಹಿನಿ, ಬಾದಾಮಿ


ಉದಯವಾಹಿನಿ ಚಿತ್ರ

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕೊಠಡಿಗಳ ಕೊರತೆಯಿಂದ ಶಾಲಾ ಮಕ್ಕಳು ಕೊಠಡಿಯ ಹೊರಗೆ ಕುಳಿತು ಶಿಕ್ಷಣ ಕಲಿಯ ಬೇಕಾದ ಸನ್ನಿವೇಶ ಬಿ.ಎನ್. ಜಾಲಿಹಾಳ ಗ್ರಾಮದಲ್ಲಿದೆ. ಶಾಲೆಯಲ್ಲಿ ಒಂದರಿಂದ 7ನೇ ವರ್ಗದವರೆಗಿನ ವಿದ್ಯಾರ್ಥಿಗಳಿಗೆ ಕೇವಲ ಮೂರು ಕೊಠಡಿಗಳಿವೆ. ಅದರಲ್ಲಿ ಒಂದು ಕೊಠಡಿಯಲ್ಲಿ ಕಾರ್ಯಾಲಯವಿದೆ.

ಒಂದು ಕೊಠಡಿಯಲ್ಲಿ 1 ರಿಂದ 3ನೇ ವರ್ಗದವರೆಗೆ ನಲಿ ಕಲಿ, ಇನ್ನೊಂದು ಕೊಠಡಿಯಲ್ಲಿ 5, 6 ಮತ್ತು 7ನೇ ವರ್ಗ ಹಾಗೂ ಮತ್ತೊಂದು ಕೊಠಡಿಯಲ್ಲಿ ಕಾರ್ಯಾಲಯ ಮತ್ತು ನಾಲ್ಕನೇ ತರಗತಿ ನಡೆಯುತ್ತಿದೆ. ಕಾರ್ಯಾಲಯದ ಛಾವಣಿ ಸಿಮೆಂಟ್ ಮತ್ತು ಜೆಲ್ಲಿಕಲ್ಲುಗಳು ಬೀಳಲು ಆರಂಭಿಸಿದ್ದು, ಶಿಕ್ಷಕರಿಗೆ ಮತ್ತು ಮಕ್ಕಳಿಗೆ ಭಯದ ವಾತಾವರಣ ಉಂಟಾಗಿದೆ. ಎರಡು ತರಗತಿಗಳಿಗೆ ಶಿಕ್ಷಕರು ಹೊರಗೆ ಪಾಠ ಮಾಡುತ್ತಿದ್ದಾರೆ.

ಮಕ್ಕಳಿಗೆ ಕುಳಿತುಕೊಳ್ಳಲು ಜಾಗವಿಲ್ಲದ ಕಾರಣ ಅನಿವಾರ್ಯವಾಗಿ ಎರಡು ವರ್ಗಗಳಿಗೆ ಹೊರಗೆ ಪಾಠ ಬೋಧನೆ ಮಾಡುತ್ತೇವೆ ಎಂದು ಶಿಕ್ಷಕರು ಹೇಳಿದರು.

ಆಸರೆ ಬಡಾವಣೆಯಲ್ಲಿ 15 ವರ್ಷಗಳ ಹಿಂದೆಯೇ ಒಂದು ಕೊಠಡಿ ನಿರ್ಮಿಸಲಾಗಿದೆ. ಅದು ಉಪಯೋಗಕ್ಕೆ ಬಾರದಂತಾಗಿದೆ. ಆಸರೆ ಬಡಾವಣೆಯ ಮಕ್ಕಳೆಲ್ಲ ಇದೇ ಶಾಲೆಗೆ ಬರುವವರು. ಸರಿಯಾಗಿ ಕಟ್ಟಡ ಇರದ್ದರಿಂದ ಮಕ್ಕಳು ಬೇರೆ ಊರುಗಳ ಶಾಲೆಗೆ ಹೋಗುವರು. ಹೊಸ ಕೊಠಡಿಗಳನ್ನು ನಿರ್ಮಿಸಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದರು.

ಒಂದೇ ಕೊಠಡಿಯಲ್ಲಿ ಎರಡು, ಮೂರು ವರ್ಗಕ್ಕೆ ಪಾಠ ಬೋಧನೆ ನಡೆಯುತ್ತಿದೆ. ಶಿಕ್ಷಕರು ಕಲಿಸುವುದು ಹೇಗೆ ಮತ್ತು ಮಕ್ಕಳು ವಿಷಯವನ್ನು ಹೇಗೆ ಅರಿತುಕೊಳ್ಳುತ್ತಾರೆ. ಬೋಧನೆ ಸರಿಯಾಗಿ ಆಗದ್ದರಿಂದ ಮಕ್ಕಳು ಕಲಿಕೆಯಲ್ಲಿ ಹಿಂದುಳಿಯುವರು' ಎಂದು ಹೇಳಿದರು.

ಕೊಠಡಿ ಕೊರತೆ ಬಗ್ಗೆ ಶಾಸಕ ಮತ್ತು ಬಿಇಒ ಅವರಿಗೆ ಅನೇಕ ಬಾರಿ ಮನವಿ ಸಲ್ಲಿಸಲಾಗಿದೆ. ನಾಲ್ಕು ಕೊಠಡಿಗಳ ಅವಶ್ಯಕತೆ ಇದೆ. ತುರ್ತಾಗಿ ಎರಡು ಕೊಠಡಿಗಳನ್ನಾದರೂ ನಿರ್ಮಿಸಬೇಕಿದೆ' ಎಂದು ಶಾಲಾ ಸುಧಾರಣಾ ಸಮಿತಿ ಅಧ್ಯಕ್ಷ ಚನ್ನಬಸಯ್ಯ ಕೋಟಿ ಹೇಳಿದರು.

ನೂತನ ಕೊಠಡಿಗಳ ನಿರ್ಮಾಣ ಮತ್ತು ಶಾಲಾ ಕೊಠಡಿಗಳ ದುರಸ್ತಿಗೆ ಕ್ರಿಯಾ ಯೋಜನೆ ತಯಾರಿಸಿದ ಜಿಲ್ಲಾ ಪಂಚಾಯಿತಿಗೆ ಕಳುಹಿಸಲಾಗಿದೆ' ಎಂದು ಬಿಇಒ ಕೇಶವ ಪೆಟ್ಲೂರ ತಿಳಿಸಿದರು.

### ಬೆಲ್ಲದ ಬಾಗೇವಾಡಿ ಕೃಷಿ ಸೇವಾ ಸಂಘ: 3.56 ಕೋಟಿ ನಿವ್ವಳ ಲಾಭ

• ಉದಯವಾಹಿನಿ, ಹುಕ್ಕೇರಿ

ತಾಲ್ಲೂಕಿನ ಬೆಲ್ಲದ ಬಾಗೇವಾಡಿ ಕೃಷಿ ಸೇವಾ ಸಹಕಾರಿ ಸಂಘವು 2024–25ನೇ ಸಾಲಿಗೆ 3.56 ಕೋಟಿ ನಿವ್ವಳ ಲಾಭಗಳಿಸಿ ಪ್ರಗತಿಯಲ್ಲಿದೆ ಎಂದು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ನಿರ್ದೇಶಕ ಮತ್ತು ಸೇವಾ ಸಂಘದ ಮಾರ್ಗದರ್ಶಕ ಪೃಥ್ವಿ ಕತ್ತಿ ಹೇಳಿದರು. ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 120 ವರ್ಷಗಳ ಹಿಂದೆ ಸ್ಥಾಪನೆಯಾದ ಸಂಘವು, ಪ್ರಸಕ್ತ ಸಾಲಿನಲ್ಲಿ ರಸಗೊಬ್ಬರ ಖರೀದಿಸಿದ ಸಂಘದ ರೈತ ಸದಸ್ಯರಿಗೆ ಶೇ 8 ರಸಗೊಬ್ಬರ ರಿಬೇಟ್ 24.41 ಲಕ್ಷ ತೆಗೆದಿರಿಸಿದೆ' ಎಂದರು. ಅಧ್ಯಕ್ಷ ಶ್ರೀಕಾಂತ ಖೆಮಲಾಪುರೆ ಮಾತನಾಡಿ, ಸಂಘವು 3 ಸಾವಿರ ಸದಸ್ಯರನ್ನು ಹೊಂದಿದ್ದು 2.35 ಕೋಟಿ ಸಾಲ ವಿತರಿಸಿ ಶೇ 100ಕ್ಕೆ ನೂರು ಸಾಲ ವಸೂಲಾತಿ ಮಾಡಿದೆ ಎಂದರು.

'ಸಂಘದ ಆಡಳಿತ ಮಂಡಳಿ ತನ್ನ ಸಿಬ್ಬಂದಿಗೆ ಶೇ 25ರಷ್ಟು ಬೋನಸ್ ಮತ್ತು ಎಕ್ಸ್ ಗ್ರೇಸಿಯಾ ನೀಡುವ ಜತೆಗೆ ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ನೌಕರರ 8ನೇ ಪರಿಷ್ಕೃತ ವೇತನ ಶ್ರೇಣಿ ಜಾರಿಗೊಳಿಸಿದೆ ಎಂದು ವ್ಯವಸ್ಥಾಪಕ ರವೀಂದ್ರ ಕತ್ತಿ ಹೇಳಿದರು. ಸಂಘದ ಕಾರ್ಯವ್ಯಾಪ್ತಿಯಲ್ಲಿ ಡೇರಿಗೆ ಹಾಲು ಪೂರೈಸುವ ರೈತರಿಗೆ ಸಂಘದ ವತಿಯಿಂದ 3 ಸಹಾಯ ಧನ ನೀಡುತ್ತಿರುವುದಾಗಿ ಉಪಾಧ್ಯಕ್ಷ ಅಶೋಕ ಬೆಲ್ಲದ ತಿಳಿಸಿದರು.

ನಿರ್ದೇಶಕರಾದ ಆರ್.ಎಸ್.ಪರೀಟ್, ಮುರಗೇಶ್ ಮಾಳಗಿ, ನಾಸೀರ್ ಜಗದಾಳ, ಭರಮಪ್ಪ ಮುನ್ನೋಳಿ, ವ್ಯವಸ್ಥಾಪಕ ರವೀಂದ್ರ ಕತ್ತಿ ಇದ್ದರು. ಭರತೇಶ್ ಉಪಾಧ್ಯೆ ಸ್ವಾಗತಿಸಿದರು. ಮಲ್ಲಿಕಾರ್ಜುನ್ ಬೆಲ್ಲದ ನಿರೂಪಿಸಿ, ವಂದಿಸಿದರು.

# ಉದಯ ವಾಹಿನಿ

## ಪ್ರಾದೇಶಿಕ

ಭಾನುವಾರ 06 ಏಪ್ರಿಲ್ 2025 | 07


## ವಕ್ಫ್ ತಿದ್ದುಪಡಿಯಿಂದ ಮಸೀದಿಗಳಿಗೆ ಹಾನಿಯಿಲ್ಲ: ರವಿಶಂಕರ್ ಪ್ರಸಾದ್

**ನವದೆಹಲಿ:** ವಕ್ಫ್ ತಿದ್ದುಪಡಿ ಮಸೂದೆಗೆ ಮುಸ್ಲಿಂ ಸಮುದಾಯ ವಿರೋಧ ವ್ಯಕ್ತಪಡಿಸುತ್ತಿರುವುದಕ್ಕೆ ಪ್ರತಿಕ್ರಿಯಿಸಿರುವ ರವಿಶಂಕರ್ ಪ್ರಸಾದ್ ಅವರು, ಯಾವುದೇ ಮಸೀದಿ, ಪೂಜಾ ಸ್ಥಳ ಅಥವಾ ಖಬ್ರಸ್ತಾನ್ ಮುಟ್ಟುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಲೋಕಸಭೆ, ರಾಜ್ಯಸಭೆಯಲ್ಲಿ ಅಂಗೀಕಾರಗೊಂಡಿರುವ ವಕ್ಫ್ ಮಸೂದೆಯು ಮುಸ್ಲಿಂ ಸಮುದಾಯದ ಮಹಿಳೆಯರಿಗೆ ಪ್ರಯೋಜನವನ್ನು ನೀಡುತ್ತದೆ.



ಪಾರದರ್ಶಕತೆಯನ್ನು ಖಚಿತಪಡಿಸುತ್ತದೆ ಎಂದು ಪ್ರಸಾದ್ ತಿಳಿಸಿದ್ದಾರೆ. ಈ ವಿಷಯವು ತುಂಬಾ ಸರಳ ಮತ್ತು ನೇರವಾಗಿದೆ. ವಕ್ಫ್ ಅನ್ನು ರಚಿಸಿದ ವಕೀಫ್‌ನ ಉದ್ದೇಶವನ್ನು ವ್ಯವಸ್ಥಾಪಕರಾಗಿರುವ ಮುತ್ತವಲಿ ಸರಿಯಾಗಿ ಕಾರ್ಯಗತಗೊಳಿಸುತ್ತಿದ್ದಾರೆಯೇ ಅಥವಾ ಇಲ್ಲವೇ ಎಂಬುದಷ್ಟೇ ಇದರ ಉದ್ದೇಶವಾಗಿದೆ ಎಂದಿದ್ದಾರೆ. ವಕ್ಫ್ ಧಾರ್ಮಿಕ ಸಂಸ್ಥೆಯಲ್ಲ, ಅದು ಕಾನೂನುಬದ್ಧ ಅಥವಾ ಶಾಸನಬದ್ಧ ಸಂಸ್ಥೆಯಾಗಿದೆ. ಮುತ್ತವಲಿ ಕೇವಲ ಸೂಪರಿಂಟೆಂಡೆಂಟ್ ಅಥವಾ ವ್ಯವಸ್ಥಾಪಕ. ಆಸ್ತಿಯ ಮೇಲೆ ಅವರಿಗೆ ಯಾವುದೇ ಹಕ್ಕುಗಳಿಲ್ಲ. ಒಂದು ಬಾರಿ ವಕ್ಫ್ ಅನ್ನು ರಚಿಸಿದ ನಂತರ, ಆಸ್ತಿ ಅಲ್ಲಾಹನದ್ದಾಗಿರುತ್ತದೆ. ಮಸೂದೆ ಮುಸ್ಲಿಂ ಮಹಿಳೆಯರಿಗೆ ಸಬಲೀಕರಣ ನೀಡುತ್ತದೆ. ವಿಧವೆಯರು, ಶೋಷಣೆಗೆ ಒಳಗಾದ ಜನತೆಗೆ ಸಹಕಾರಿಯಾಗಲಿದೆ ಎಂದು ಹೇಳಿದ್ದಾರೆ. ನಾನು ಹುಟ್ಟಿದ ನಗರವಾದ ಪಾಟ್ನಾದ ಡಾಕ್ ಬಂಗಲೋ ಬಳಿಯ ಪ್ರದೇಶಗಳಲ್ಲಿ ಸಾಕಷ್ಟು ವಕ್ಫ್ ಭೂಮಿ ಇದೆ. ಆದರೆ ಅಲ್ಲಿ ಪಂಚತಾರಾ ಹೋಟೆಲ್‌ಗಳು ಮತ್ತು ಶೋ ರೂಂಗಳು ತಲೆ ಎತ್ತಿವೆ. ಭಾರತವು ವಿಶ್ವದಲ್ಲೇ ಅತಿ ಹೆಚ್ಚು ವಕ್ಫ್ ಆಸ್ತಿಗಳನ್ನು ಹೊಂದಿದೆ. ಅಲ್ಲಿ ಎಷ್ಟು ಆಸ್ಪತ್ರೆಗಳು, ವಿಶ್ವವಿದ್ಯಾಲಯಗಳು ಮತ್ತು ತರಬೇತಿ ಕೇಂದ್ರಗಳನ್ನು ನಿರ್ಮಿಸಲಾಗಿದೆ ಎಂದು ಪ್ರಶ್ನಿಸಿದ್ದಾರೆ.

## ಪಾಕ್ ಒಳನುಸುಳುಕೋರನನ್ನು ಹೊಡೆದುರುಳಿಸಿದ ಬಿಎಸ್‌ಎಫ್

**ಜಮ್ಮು:** ಕಣಿವೆ ರಾಜ್ಯ ಕಾಶ್ಮೀರದ ಜಮ್ಮುವಿನ ಅಂತಾರಾಷ್ಟ್ರೀಯ ಗಡಿಯಲ್ಲಿ ಪಾಕಿಸ್ತಾನಿ ಒಳನುಸುಳುವವನನ್ನು ಗುಂಡಿಕ್ಕಿ ಕೊಲ್ಲಲಾಗಿದೆ ಎಂದು ಬಿಎಸ್‌ಎಫ್ ವಕ್ತಾರರು ತಿಳಿಸಿದ್ದಾರೆ.

ಆರ್ ಎಸ್ ಪುರ ವಲಯದ ಗಡಿ ಹೊರಠಾಣೆ ಅಬ್ದುಲಿಯನ್‌ನಲ್ಲಿ ಒಳನುಸುಳುವವರನ್ನು ತಟಸ್ಥಗೊಳಿಸಲಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ. ಮಧ್ಯರಾತ್ರಿ, ಜಾಗರೂಕ ಬಿಎಸ್‌ಎಫ್ ಸೈನಿಕರು ಜಮ್ಮು ಗಡಿ ಪ್ರದೇಶದಲ್ಲಿ ಅನುಮಾನಾಸ್ಪದ ಚಲನೆಯನ್ನು ನೋಡಿದರು. ಒಳನುಗ್ಗುವವರು ಐಬಿಯನ್ನು ದಾಟುತ್ತಿರುವುದು ಕಂಡುಬಂದಿದೆ ಎಂದು ಬಿಎಸ್‌ಎಫ್ ವಕ್ತಾರರು ತಿಳಿಸಿದ್ದಾರೆ.

ಒಳನುಗ್ಗುವವನಿಗೆ ಸೈನಿಕರು ಸವಾಲು ಹಾಕಿದರು ಆದರೆ ಅವರು ಗಮನ ಹರಿಸಲಿಲ್ಲ ಮತ್ತು ಚಲಿಸುತ್ತಲೇ ಇದ್ದರು ಎಂದು ಅವರು ಹೇಳಿದರು. ಬೆದರಿಕೆಯನ್ನು ಗ್ರಹಿಸಿದ ಬಿಎಸ್‌ಎಫ್ ಪಡೆಗಳು ಒಳನುಸುಳುವವರನ್ನು ತಟಸ್ಥಗೊಳಿಸಿದವು. ಒಳನುಗ್ಗುವವನ ಗುರುತು ಉದ್ದೇಶವನ್ನು ಕಂಡುಹಿಡಿಯಲಾಗುತ್ತಿದೆ ಎಂದು ಅವರು ಹೇಳಿದರು. ಪಾಕಿಸ್ತಾನದ ಸಹವರ್ತಿಯೊಂದಿಗೆ ಬಲವಾದ ಪ್ರತಿಭಟನೆಯನ್ನು ದಾಖಲಿಸಲಾಗುತ್ತಿದೆ ಎಂದು ಬಿಎಸ್‌ಎಫ್ ವಕ್ತಾರರು ತಿಳಿಸಿದ್ದಾರೆ. ಬಿಎಸ್‌ಎಫ್ ಪೊಲೀಸರಿಗೆ ಮಾಹಿತಿ ನೀಡಿದ್ದು, ಮರಣೋತ್ತರ ಪರೀಕ್ಷೆ, ಇತರ ಕಾನೂನು ಔಪಚಾರಿಕತೆಗಳಿಗಾಗಿ ಶವವನ್ನು ಸ್ಥಳದಿಂದ ಸ್ಥಳಾಂತರಿಸಲಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

### ಶ್ರೀಲಂಕಾದಲ್ಲಿರುವ ಭಾರತದ ಮೂಲದ ತಮಿಳಿಗರಿಗೆ ಮನೆ ನಿರ್ಮಾಣ ಭರವಸೆ: ಪ್ರಧಾನಿ ಮೋದಿ

# ಮೋದಿಗೆ ಶ್ರೀಲಂಕಾದ ಅತ್ಯುನ್ನತ ನಾಗರಿಕ ಗೌರವ 'ಮಿತ್ರ ವಿಭೂಷಣ'

**ಕೊಲಂಬೊ:** ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಶ್ರೀಲಂಕಾದ ಅಧ್ಯಕ್ಷ ಅನುರಾ ಕುಮಾರ ದಿಸ್ಸನಾಯಕೆ ಅವರನ್ನು ಭೇಟಿಯಾಗಿ ದ್ವಿಪಕ್ಷೀಯ ಮಾತುಕತೆ ನಡೆಸಿದ್ದಾರೆ. ಜೊತೆಗೆ ಶ್ರೀಲಂಕಾದಲ್ಲಿರುವ ಭಾರತ ಮೂಲದ ತಮಿಳುನಾಡಿನ ಜನಕ್ಕೆ ದಶಕಗಳ ನಂತರ ಸಿಹಿಸುದ್ದಿ ನೀಡಿದ್ದಾರೆ. ಶ್ರೀಲಂಕಾದಲ್ಲಿ ಸ್ವಂತ ನೆಲೆ ರೂಪಿಸುವ ಭರವಸೆಯನ್ನು ಪ್ರಧಾನಿ ಮೋದಿ ನೀಡಿದ್ದಾರೆ.

ದಶಕದಗಳಿಂದಲೂ ತಮಿಳು ನಾಡಿನಿಂದ ವಲಸೆ ಬಂದು ಶ್ರೀಲಂಕಾದಲ್ಲಿ ನೆಲೆಸಿರುವ ಭಾರತ ಮೂಲದ ತಮಿಳು ಗರಿಗೆ 10,000 ಮನೆ ನಿರ್ಮಿಸಿ ಕೊಡುವುದಾಗಿ, ಅದರ ಕಾಮಗಾರಿ ಶೀಘ್ರದಲ್ಲೇ ಪೂರ್ಣಗೊಳ್ಳಲಿದೆ ಎಂದು ಹೇಳಿದರು. ಭಾರತ ಸರ್ಕಾರ ತಮಿಳುನಾಡು ಮತ್ತು ಶ್ರೀಲಂಕಾದಲ್ಲಿರುವ ಭಾರತದ ಜನರ ನಡುವೆ ಶಾಂತಿಪೂರ್ಣ ಸಂಬಂಧವನ್ನು ಕಾಪಾಡಲು ಪ್ರಯತ್ನಿಸುತ್ತಿದೆ. ಈ ನಿಟ್ಟಿನಲ್ಲಿ ಭಾರತ ಸರ್ಕಾರ ಮೊದಲ ಹೆಜ್ಜೆಯನ್ನು ಇಟ್ಟಿದೆ.

- ಶ್ರೀಲಂಕಾದಲ್ಲಿ ನೆಲೆಸಿರುವ ಭಾರತ ಮೂಲದ ತಮಿಳಿಗರಿಗೆ ಸಿಹಿಸುದ್ದಿ
- ತಮಿಳುಗರಿಗೆ 10,000 ಮನೆ ನಿರ್ಮಿಸಿ ಕೊಡುವುದಾಗಿ ಭರವಸೆ

ಶ್ರೀಲಂಕಾ ಸರ್ಕಾರವು ತಮಿಳರ ಆಕಾಂಕ್ಷೆಗಳನ್ನು ಈಡೇರಿಸುತ್ತದೆ, ಸಂವಿಧಾನತ್ಮಕವಾಗಿ ಕೆಲಸ ಮಾಡುತ್ತದೆ ಎಂದು ಪ್ರಧಾನಿ ಮೋದಿ ಭರವಸೆ ನೀಡಿದರು. ಪ್ರಧಾನಿ ಮೋದಿ, ದಿಸ್ಸನಾಯಕೆ ಮಧ್ಯೆ ವಿಸ್ತೃತವಾದ ಮಾತುಕತೆಯ ಬಳಿಕ ಏಳು ಪ್ರಮುಖ ಒಪ್ಪಂದಗಳಿಗೆ ಸಹಿ ಹಾಕಲಾಯಿತು. ರಾಜೀವ್ ಗಾಂಧಿ ಹತ್ಯೆಯ ನಂತರ ಭಾರತದ ಭದ್ರತಾ ನೀತಿ ಬದಲಾಗಿದ್ದು, ತಮಿಳುನಾಡು ಮತ್ತು ಶ್ರೀಲಂಕಾ ನಡುವಿನ ಸಂಬಂಧಕ್ಕೆ ಧಕ್ಕೆಯಾಯಿತು.ರಾಜೀವ್ ಗಾಂಧಿಯ ಹತ್ಯೆ ಭಾರತ– ಶ್ರೀಲಂಕಾ ಸಂಬಂಧಗಳ ಇತಿಹಾಸದಲ್ಲಿ ಒಂದು ಕಪ್ಪು ಅಧ್ಯಾಯವಾಗಿದೆ. ಇದು ರಾಜಕೀಯ, ಸಾಮಾಜಿಕ, ಮತ್ತು ಭದ್ರತಾ ಪರಿಪ್ರೇಕ್ಷ್ಯಗಳಲ್ಲಿ ದೀರ್ಘಕಾಲೀನ ಪರಿಣಾಮಗಳನ್ನು ಉಂಟುಮಾಡಿತು. ಸದ್ಯ ದಿಸ್ಸಾನಾಯಕೆ ಅಧಿಕಾರಕ್ಕೆ ಬಂದ ನಂತರ ಪ್ರಧಾನಿ ಮೋದಿ ಮೊದಲ ವಿದೇಶಿ ನಾಯಕನಾಗಿ ಭೇಟಿ ನೀಡಿರುವುದು ಭಾರತ ಮತ್ತು ಶ್ರೀಲಂಕಾ ನಡುವಿನ ಸಂಬಂಧ ಇನ್ನಷ್ಟು ಗಟ್ಟಿಯಾಗುವ ಸಾಧ್ಯತೆ ಇದೆ.

**ಶ್ರೀಲಂಕಾಕ್ಕೆ 'ವಿಶೇಷ' ಸ್ಥಾನವಿದೆ:** ಕೊಲಂಬೊದಲ್ಲಿ ರಕ್ಷಣಾ ಒಪ್ಪಂದಕ್ಕೂ ಸಹಿ ಹಾಕಲಾಯಿತು. ನಮ್ಮ ರಕ್ಷಣಾ ಹಿತಾಸಕ್ತಿಗಳು



ಒಂದೇ ಆಗಿವೆ ಎಂದು ನಾವು ನಂಬುತ್ತೇವೆ. ಎರಡೂ ದೇಶಗಳ ಭದ್ರತೆ ನಂಟು ಹೊಂದಿದ್ದು, ಪರಸ್ಪರ ಅವಲಂಬಿತವಾಗಿವೆ. ಭಾರತದ ನೆರೆಹೊರೆಯ ರಾಷ್ಟ್ರ ಮೊದಲು ನೀತಿ ಹಾಗೂ 'ಮಹಾಸಾಗರ' ದೂರದೃಷ್ಟಿಯಲ್ಲಿ ಶ್ರೀಲಂಕಾಕ್ಕೆ 'ವಿಶೇಷ' ಸ್ಥಾನವಿದೆ ಎಂದು ಪ್ರಧಾನಿ ಮೋದಿ ಮಾತನಾಡಿದರು.

**ಮೀನುಗಾರರ ಬಿಡುಗಡೆ:** ಮೀನುಗಾರರ ಜೀವನೋಪಾಯಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲಾಗಿದೆ ಎಂದು ಪ್ರಧಾನಿ ಮೋದಿ ಹೇಳಿದರು. ಈ ವಿಷಯದಲ್ಲಿ ಮಾನವೀಯ ದೃಷ್ಟಿಕೋನವನ್ನು ತೆಗೆದುಕೊಳ್ಳಲು ಒಪ್ಪಿಗೆ ನೀಡಲಾಗಿದೆ. ಮೀನುಗಾರರನ್ನು ತಕ್ಷಣ ಬಿಡುಗಡೆ ಮಾಡಲು, ಅವರ ದೋಣಿಗಳನ್ನು ಹಿಂದಿರುಗಿಸಲು ಒತ್ತಿ ಹೇಳಿದರು. ಭಾರತ, ಶ್ರೀಲಂಕಾ ನಡುವಿನ ಸಂಬಂಧವು ಪರಸ್ಪರ ನಂಬಿಕೆ, ಸದ್ಭಾವನೆಯನ್ನು ಆಧರಿಸಿದೆ ಎಂದು ಅವರು ಹೇಳಿದರು. 2024ರಲ್ಲಿ ದಿಸ್ಸಾನಾಯಕೆ ಭಾರತಕ್ಕೆ ಭೇಟಿ ನೀಡಿದ್ದನ್ನು ಪ್ರಧಾನಿ ಮೋದಿ ನೆನಪಿಸಿಕೊಂಡರು. ಅಧ್ಯಕ್ಷ ಅನುರ ಕುಮಾರ ದಿಸ್ಸಾನಾಯಕೆ ತಮ್ಮ ಮೊದಲ ವಿದೇಶಿ ಭೇಟಿಗಾಗಿ ಭಾರತವನ್ನು ಆಯ್ಕೆ ಮಾಡಿಕೊಂಡರು. ಶನಿವಾರ ನಾನು ಅವರ ಮೊದಲ ವಿದೇಶಿ ಅತಿಥಿಯಾಗಿ ಶ್ರೀಲಂಕಾಗೆ ಬಂದಿದ್ದೇನೆ. ಇದು ನಮ್ಮ ವಿಶೇಷ ಸಂಬಂಧದ ಆಳವನ್ನು ತೋರಿಸುತ್ತದೆ ಎಂದು ಮೋದಿ ಹೇಳಿದರು.

**ಭಾರತದ ಭದ್ರತಾ ಹಿತಾಸಕ್ತಿಗೆ ವಿರುದ್ಧವಾಗಿ ನಡೆದುಕೊಳ್ಳಲ್ಲ**

ಭಾರತದ ಭದ್ರತಾ ಹಿತಾಸಕ್ತಿಗೆ ವಿರುದ್ಧವಾಗಿ ಶ್ರೀಲಂಕಾ ತನ್ನ ಪ್ರದೇಶವನ್ನು ಯಾವುದೇ ರೀತಿಯಲ್ಲಿ ಬಳಕೆ ಮಾಡಲು ಬಿಡುವುದಿಲ್ಲ ಎಂದು ಪ್ರಧಾನಿ ಮೋದಿಗೆ ಭರವಸೆ ನೀಡಿದ್ದೇನೆ. 2022ರಲ್ಲಿ ತೀವ್ರ ಆರ್ಥಿಕ ಹಿಂಜರಿತದಿಂದ ನಲುಗಿ ಹೋಗಿರುವ ಶ್ರೀಲಂಕಾ ಈಗ ಸಾಲದ ಸುಳಿಯಲ್ಲಿದೆ. ಸದ್ಯ ಬಿಕ್ಕಟ್ಟಿನಿಂದ

**ಸಂವಿಧಾನತ್ಮಕವಾಗಿ ಕೆಲಸ**

**ದಶಕದಗಳಿಂದಲೂ ತಮಿಳುನಾಡಿನಿಂದ ವಲಸೆ ಬಂದು ಶ್ರೀಲಂಕಾದಲ್ಲಿ ನೆಲೆಸಿರುವ ಭಾರತ ಮೂಲದ ತಮಿಳುಗರಿಗೆ 10,000 ಮನೆ ನಿರ್ಮಿಸಿ ಕೊಡುವುದಾಗಿ, ಮತ್ತು ಅದರ ಕಾಮಗಾರಿ ಶೀಘ್ರದಲ್ಲೇ ಪೂರ್ಣಗೊಳ್ಳಲಿದೆ ಎಂದು ಹೇಳಿದರು. ಭಾರತ ಸರ್ಕಾರ ತಮಿಳುನಾಡು ಮತ್ತು ಶ್ರೀಲಂಕಾದಲ್ಲಿರುವ ಭಾರತದ ಜನರ ನಡುವೆ ಶಾಂತಿಪೂರ್ಣ ಸಂಬಂಧವನ್ನು ಕಾಪಾಡಲು ಪ್ರಯತ್ನಿಸುತ್ತಿದೆ. ಈ ನಿಟ್ಟಿನಲ್ಲಿ ಭಾರತ ಸರ್ಕಾರ ಮೊದಲ ಹೆಜ್ಜೆಯನ್ನು ಇಟ್ಟಿದೆ. ಶ್ರೀಲಂಕಾ ಸರ್ಕಾರವು ತಮಿಳರ ಆಕಾಂಕ್ಷೆಗಳನ್ನು ಈಡೇರಿಸುತ್ತದೆ ಮತ್ತು ಸಂವಿಧಾನತ್ಮಕವಾಗಿ ಕೆಲಸ ಮಾಡುತ್ತದೆ ಎಂದು ಪ್ರಧಾನಿ ಮೋದಿ ಭರವಸೆ ನೀಡಿದರು.**

ಚೇತರಿಸಿಕೊಳ್ಳುತ್ತಿದೆ. ನಮ್ಮ ಆರ್ಥಿಕ ಚೇತರಿಕೆ, ಬೆಳವಣಿಗೆ ಮತ್ತು ಸ್ಥಿರತೆಗೆ ಶ್ರೀಲಂಕಾಕ್ಕೆ ನೀಡಿದ ಅಮೂಲ್ಯ ಬೆಂಬಲಕ್ಕಾಗಿ ನಾನು ಪ್ರಧಾನಿ ಮೋದಿ ಮತ್ತು ಭಾರತ ಸರ್ಕಾರಕ್ಕೆ ಧನ್ಯವಾದ ತಿಳಿಸುತ್ತೇನೆ ಎಂದು ದಿಸ್ಸನಾಯಕೆ ತಿಳಿಸಿದ್ದಾರೆ.

**ಶ್ರೀಲಂಕಾದ ಅತ್ಯುನ್ನತ ನಾಗರಿಕ ಗೌರವ 'ಮಿತ್ರ ವಿಭೂಷಣ?**

ಭಾರತದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಶ್ರೀಲಂಕಾದ ಅತ್ಯುನ್ನತ ನಾಗರಿಕ ಗೌರವ 'ಮಿತ್ರ ವಿಭೂಷಣ' ಅನ್ನು ನೀಡಿ ಗೌರವಿಸಲಾಗಿದೆ. ಶ್ರೀಲಂಕಾದ ಅಧ್ಯಕ್ಷ ಅನುರಾ ಕುಮಾರ ದಿಸ್ಸನಾಯಕೆ ಅವರು ಪ್ರಧಾನಿ ಮೋದಿ ಅವರಿಗೆ ಪ್ರಶಸ್ತಿ ನೀಡಿ ಸನ್ಮಾನಿಸಿದ್ದಾರೆ. ಶ್ರೀಲಂಕಾ ಜತೆ ದ್ವಿಪಕ್ಷೀಯ ಬಾಂಧವ್ಯ ವೃದ್ಧಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಕೊಡುಗೆಯನ್ನು ಗುರುತಿಸಿ ದ್ವೀಪ ರಾಷ್ಟ್ರದ ಅತ್ಯುನ್ನತ ನಾಗರಿಕ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಶ್ರೀಲಂಕಾ ಮಿತ್ರ ವಿಭೂಷಣ ಪ್ರಶಸ್ತಿ ಪಡೆದಿರುವುದು ಅತ್ಯಂತ ಹೆಮ್ಮೆಯ ವಿಷಯವಾಗಿದೆ. ಈ ಗೌರವ ನನಗೆ ಮಾತ್ರವಲ್ಲದೆ 140 ಕೋಟಿ ಭಾರತೀಯರಿಗೆ ಸಂದ ಗೌರವವಾಗಿದೆ. ಇದು ಭಾರತ ಹಾಗೂ ಶ್ರೀಲಂಕಾ ನಡುವಣ ಸ್ನೇಹ ಹಾಗೂ ಚಾರಿತ್ರಿಕ ಬಾಂಧವ್ಯವನ್ನು ಸಂಕೇತಿಸುತ್ತದೆ. ಈ ಗೌರವಕ್ಕಾಗಿ ಶ್ರೀಲಂಕಾದ ಅಧ್ಯಕ್ಷರು, ಸರ್ಕಾರ ಹಾಗೂ ಜನರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ ಎಂದು ಪ್ರಧಾನಿ ಮೋದಿ ಮಾತನಾಡಿದರು.

## ಚುನಾವಣೆ ಹೊಸ್ತಿಲಲ್ಲಿ ದೊಡ್ಡ ಪೆಟ್ಟು

**ಪಾಟ್ನಾ:** ಇತ್ತೀಚಿಗೆ ಲೋಕಸಭೆಯಲ್ಲಿ ಅಂಗೀಕಾರಗೊಂಡ ವಕ್ಫ್ ತಿದ್ದುಪಡಿ ಮಸೂದೆ 2025 ಬೆಂಬಲಿಸಿದ್ದಕ್ಕಾಗಿ ಬಿಹಾರದ ಮುಖ್ಯಮಂತ್ರಿ ಹಾಗೂ ಜೆಡಿಯು ಅಧ್ಯಕ್ಷ ನಿತೀಶ್ ಕುಮಾರ್ ಸಂಕಷ್ಟಕ್ಕೆ ಸಿಲುಕಿದ್ದಾರೆ. ಬಿಹಾರ ವಿಧಾನಸಭಾ ಚುನಾವಣೆಗೆ ಸಜ್ಜಾಗುತ್ತಿರುವಂತೆಯೇ ಒಬ್ಬರಾದ ನಂತರ ಒಬ್ಬರಂತೆ ಮುಸ್ಲಿಂ ನಾಯಕರು ರಾಜೀನಾಮೆ ನೀಡುತ್ತಿದ್ದಾರೆ.

ವಕ್ಫ್ ತಿದ್ದುಪಡಿ ಮಸೂದೆಗೆ ಪಕ್ಷದ ಬೆಂಬಲ ವಿರೋಧಿಸಿ ರಾಜೀನಾಮೆ ನೀಡಿದವರ ಜೆಡಿಯು ನಾಯಕರ ಸಂಖ್ಯೆ ಐದಕ್ಕೆ ಏರಿಕೆಯಾಗಿದೆ.

ಜೆಡಿ(ಯು)ನ ಮತ್ತೊಬ್ಬ ನಾಯಕ ನದೀಮ್



ಅಖ್ತರ್ ಪಕ್ಷಕ್ಕೆ ರಾಜೀನಾಮೆ ನೀಡಿದ್ದಾರೆ.

ಜೆಡಿಯು ನಾಯಕರಾದ ರಾಜು ನಯ್ಯರ್, ತಬ್ರೇಜ್ ಸಿದ್ದಿಕಿ ಅಲಿಗ್, ಮೊಹಮ್ಮದ್ ಶಹನವಾಜ್ ಮಲಿಕ್ ಮತ್ತು ಮೊಹಮ್ಮದ್ ಕಾಸಿಂ ಅನ್ಸಾರಿ ನಂತರ ನದೀಮ್ ಅಖ್ತರ್ ಜೆಡಿಯುಗೆ ಗುಡ್ ಬೈ ಹೇಳಿದ್ದಾರೆ. ಲೋಕಸಭೆಯಲ್ಲಿ ವಕ್ಫ್ ತಿದ್ದುಪಡಿ ಮಸೂದೆಯನ್ನು ಬೆಂಬಲಿಸಿದ್ದರಿಂದ ಪಕ್ಷದ ಬಗ್ಗೆ ನಿರಾಶೆಗೊಂಡು ಜೆಡಿಯು ಯುವ ಮಾಜಿ ರಾಜ್ಯ ಕಾರ್ಯದರ್ಶಿ ಸ್ಥಾನ, ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದು, ನನ್ನನ್ನು ಎಲ್ಲಾ ಜವಾಬ್ದಾರಿಗಳಿಂದ ಮುಕ್ತಗೊಳಿಸುವಂತೆ ಮನವಿ ಮಾಡುವುದಾಗಿ ನಿತೀಶ್ ಕುಮಾರ್ ಅವರಿಗೆ ಬರೆದಿರುವ ಪತ್ರದಲ್ಲಿ ರಾಜು ನಯ್ಯರ್ ಉಲ್ಲೇಖಿಸಿದ್ದಾರೆ. ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ ಬಿಜೆಪಿ ಮಿತ್ರಪಕ್ಷಗಳು, ಸಂಸದರು ಸೇರಿದಂತೆ ಎಲ್ಲಾ ಜಾತ್ಯತೀತ ರಾಜಕೀಯ ಪಕ್ಷಗಳನ್ನು ವಕ್ಫ್ ತಿದ್ದುಪಡಿ ಮಸೂದೆಯನ್ನು ವಿರೋಧಿಸುವಂತೆ ಒತ್ತಾಯಿಸಿತ್ತು.

ಪಕ್ಷವು ಮುಸ್ಲಿಂ ಸಮುದಾಯದ ನಂಬಿಕೆಗೆ ದ್ರೋಹ ಮಾಡಿದೆ ಎಂದು ಎಂದು ತಬ್ರೇಜ್ ಸಿದ್ದಿಕಿ ಅಲಿಗ್ ರಾಜೀನಾಮೆ ಪತ್ರದಲ್ಲಿ ತಿಳಿಸಿದ್ದಾರೆ. ಲಕ್ಷಾಂತರ ಮುಸ್ಲಿಂರ ನಂಬಿಕೆಯನ್ನು ನಿತೀಶ್ ಕುಮಾರ್ ದ್ರೋಹ ಬಗೆದಿದ್ದಾರೆ ಎಂದು ಮೊಹಮ್ಮದ್ ಶಹನವಾಜ್ ಮಲಿಕ್ ಹೇಳಿದ್ದಾರೆ. ಪಕ್ಷದ ನಿಲುವು ಲಕ್ಷಾಂತರ ಮುಸ್ಲಿಮರನ್ನು ನೋಯಿಸಿದೆ ಎಂದು ಮೊಹಮ್ಮದ್ ಕಾಸಿಂ ಅನ್ಸಾರಿ ಹೇಳಿದ್ದಾರೆ.

## ನಕ್ಸಲೀಯನೊಬ್ಬ ಹತ್ಯೆಯಾದಾಗ ಯಾರೂ ಖುಷಿ ಪಡುವುದಿಲ್ಲ

**ದಂತೇವಾಡ:** ಛತ್ತೀಸ್‌ಗಢದ ಬಸ್ತಾರ್ ಪ್ರದೇಶದಲ್ಲಿ ಬುಡಕಟ್ಟು ಜನಾಂಗದವರ ಅಭಿವೃದ್ಧಿಯನ್ನು ತಡೆಯಲು ನಕ್ಸಲರಿಂದ ಸಾಧ್ಯವಿಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಶನಿ ವಾರ ಹೇಳಿದ್ದಾರೆ. ಶನಿವಾರ ರಾಜ್ಯ ಸರ್ಕಾರದ ಬಸ್ತರ್ ಪಾಂಡಮ್ ಉತ್ಸವದ ಸಮಾರೋಪ ಸಮಾರಂಭವನ್ನುದ್ದೇಶಿಸಿ ಮಾತನಾಡಿದ ಅಮಿತ್ ಶಾ, ನಕ್ಸಲೀಯ ನೊಬ್ಬ ಹತ್ಯೆಯಾದಾಗ ಯಾರೂ ಸಂತೋಷ ಪಡುವುದಿಲ್ಲ. ಅವರು ಶಸ್ತ್ರಾಸ್ತ್ರಗಳನ್ನು ತ್ಯಜಿಸಿ ಶರಣಾಗಬೇಕು ಎಂದು ಮನವಿ ಮಾಡಿದರು.

ಮಾರ್ಚ್ 2026 ರೊಳಗೆ ನಕ್ಸಲ್ ಹಾವಳಿಯನ್ನು ತೊಡೆದುಹಾಕಲು ನಮ್ಮ ಸರ್ಕಾರ ಬದ್ಧವಾಗಿದೆ ಎಂದು ಪುನರುಚ್ಚರಿಸಿದ ಅವರು, ಶರಣಾಗುವವರು ಮುಖ್ಯವಾಹಿನಿಯ ಭಾಗ ವಾಗುತ್ತಾರೆ, ಉಳಿದವರನ್ನು ಭದ್ರತಾ ಪಡೆ ಗಳು ನೋಡಿಕೊಳ್ಳುತ್ತವೆ ಎಂದು ಎಚ್ಚರಿಸಿದರು. ಬಸ್ತರ್‌ನಲ್ಲಿ ಗುಂಡು ಹಾರಿಸಿ, ಬಾಂಬ್



**ಶಸ್ತ್ರಾಸ್ತ್ರ ತ್ಯಜಿಸಿ ಶರಣಾಗುವಂತೆ ಮನವಿ**

ಗಳನ್ನು ಸ್ಫೋಟಿಸುತ್ತಿದ್ದ ದಿನಗಳು ಮುಗಿದಿವೆ. ನಕ್ಸಲೀಯ ಸಹೋದರರು ಶಸ್ತ್ರಾಸ್ತ್ರ ಗಳನ್ನು ತ್ಯಜಿಸಿ ಮುಖ್ಯವಾಹಿನಿಗೆ ಸೇರಬೇಕೆಂದು ನಾನು ಒತ್ತಾಯಿಸುತ್ತೇನೆ. ನೀವು ನಮ್ಮವರು. ಯಾವುದೇ ಒಬ್ಬ ನಕ್ಸಲನನ್ನು ಹತ್ಯೆ ಮಾಡಿದಾಗ ಯಾರೂ ಖುಷಿ ಪಡುವುದಿಲ್ಲ. ಶಸ್ತ್ರಾಸ್ತ್ರಗಳನ್ನು ತ್ಯಜಿಸಿ ಶರಣಾಗಿ ಮತ್ತು ಮುಖ್ಯವಾಹಿನಿಗೆ ಬನ್ನಿ ಎಂದು ಕೇಳಿಕೊಂಡರು. ನೀವು ಶಸ್ತ್ರಾಸ್ತ್ರಗಳನ್ನು ಕೈಗೆ ತೆಗೆದುಕೊಳ್ಳುವ ಮೂಲಕ ನಿಮ್ಮ ಬುಡಕಟ್ಟು ಸಹೋದರ ಸಹೋದರಿಯರ ಅಭಿವೃದ್ಧಿಯನ್ನು ತಡೆಯಲು ಸಾಧ್ಯವಿಲ್ಲ.

ಅಭಿವೃದ್ಧಿಯ ಪ್ರಕ್ರಿಯೆಯ ಭಾಗವಾಗಲು ಶರಣಾಗುವ ನಕ್ಸಲರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಸಂಪೂರ್ಣ ರಕ್ಷಣೆ ಸಿಗುತ್ತದೆ ಎಂದು ಅಮಿತ್ ಶಾ ಹೇಳಿದರು. ಈ ಪ್ರದೇಶಕ್ಕೆ ಅಭಿವೃದ್ಧಿಯ ಅಗತ್ಯವಿದೆ.

ಪ್ರಧಾನಿ ನರೇಂದ್ರ ಮೋದಿ 5 ವರ್ಷಗಳಲ್ಲಿ ಬಸ್ತಾರ್‌ಗೆ ಎಲ್ಲವನ್ನೂ ನೀಡಲು ಬಯಸುತ್ತಾರೆ. ಬಸ್ತಾರ್ 50 ವರ್ಷಗಳಲ್ಲಿ ಅಭಿವೃದ್ಧಿಯನ್ನು ಕಂಡಿಲ್ಲ.

ಬಸ್ತಾರ್‌ನ ಜನರು ಸಾಮೂಹಿಕವಾಗಿ ತಮ್ಮ ಮನೆಗಳು, ಗ್ರಾಮಗಳನ್ನು ನಕ್ಸಲೀಯ ಪ್ರಭಾವದಿಂದ ಮುಕ್ತಗೊಳಿಸಲು ನಿರ್ಧರಿಸಿದಾಗ ಮಾತ್ರ ನಿಜವಾದ ಪ್ರಗತಿ ಸಾಧ್ಯ ಎಂದು ಅಮಿತ್ ಶಾ ಒತ್ತಿ ಹೇಳಿದರು.

2025ರಲ್ಲಿ ಇಲ್ಲಿಯವರೆಗೆ ಒಟ್ಟು 521 ನಕ್ಸಲೀಯರು ಶಸ್ತ್ರಾಸ್ತ್ರಗಳನ್ನು ತ್ಯಜಿಸಿದ್ದಾರೆ, ಆದರೆ 2024ರಲ್ಲಿ 881 ನಕ್ಸಲರು ಶರಣಾಗಿದ್ದಾರೆ. ಅಭಿವೃದ್ಧಿಗೆ ಶಸ್ತ್ರಾಸ್ತ್ರ, ಐಇಡಿ ಮತ್ತು ಗ್ರೆನೇಡ್‌ಗಳ ಅಗತ್ಯವಿಲ್ಲ ಎಂದು ಅರ್ಥಮಾಡಿಕೊಂಡ ನಕ್ಸಲೀಯರು ಕಂಪ್ಯೂಟರ್ ಮತ್ತು ಪೆನ್ನುಗಳಿಗೆ ಶರಣಾಗಿದ್ದಾರೆ ಎಂದರು.

## ಜನಸಾಮಾನ್ಯರು ಹಣ ಕಳೆದುಕೊಳ್ಳಲು ಕೇಂದ್ರವೇ ಕಾರಣ

**ಲಖನೌ:** ಜನಸಾಮಾನ್ಯರು ಹಣ ಕಳೆದುಕೊಳ್ಳುತ್ತಿದ್ದು, ಆರ್ಥಿಕತೆಗೂ ಮುಳುವಾಗುವ ಸಾಧ್ಯತೆಯಿರುವುದರಿಂದ ಭಾರತದ ಷೇರು ಮಾರುಕಟ್ಟೆ ಕುಸಿತದ ಬಗ್ಗೆ ಗಮನ ಹರಿಸುವುದು ಬಹಳ ಮುಖ್ಯವಾಗಿದೆ ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಶನಿವಾರ ಹೇಳಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಅಖಿಲೇಶ್ ಯಾದವ್, ಆರ್ಥಿಕತೆಯ ಈ ಡಬಲ್ ವಿಷ ವರ್ತುಲಕ್ಕೆ ಕೇಂದ್ರ ಸರ್ಕಾರವೇ ಹೊಣೆ ಎಂದಿದ್ದಾರೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತದ ಮೇಲೆ ಶೇ. 27 ರಷ್ಟು ಸೇರಿದಂತೆ ಪರಸ್ಪರ ಸುಂಕ ಘೋಷಿಸಿದ ನಂತರ ಭಾರತೀಯ ಷೇರು ಮಾರುಕಟ್ಟೆ ಕುಸಿದಿತ್ತು. ಹೂಡಿಕೆ ಮಾಡಲು, ಸರಕು, ವಾಹನ, ಭೂಮಿ ಖರೀದಿಗಾಗಿ ಜನರು ಇಟ್ಟಿದ್ದ ಹಣವನ್ನು ಕಳೆದು ಕೊಳ್ಳುತ್ತಿರುವುದರಿಂದ ದೇಶದ ಷೇರುಪೇಟೆಯಲ್ಲಿ ಲಕ್ಷಾಂತರ ಕೋಟಿ ರೂ. ನಷ್ಟವಾಗುತ್ತಿರುವ ಬಗ್ಗೆ ಗಮನ ಹರಿಸುವುದು ಬಹಳ



**ಷೇರು ಮಾರುಕಟ್ಟೆ ಕುಸಿತ**

ಮುಖ್ಯವಾಗಿದೆ. ಇವು ಮಾರುಕಟ್ಟೆಯಲ್ಲಿ ಖರೀದಿ ಮತ್ತು ಮಾರಾಟದ ಚಕ್ರಗಳಾಗಿದ್ದು, ಆರ್ಥಿಕತೆಯೂ ಆಗಿರುತ್ತವೆ. ಷೇರು ಮಾರುಕಟ್ಟೆಯಲ್ಲಿ ಜನ ಹಣವನ್ನು ಕಳೆದುಕೊಂಡರೆ ಮಾರುಕಟ್ಟೆ ಮತ್ತು ಆರ್ಥಿಕತೆ ಎರಡೂ ಹಾಳಾಗುತ್ತವೆ ಎಂದು ಯಾದವ್ ತಮ್ಮ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಬಿಎಸ್ ಇ ಸೆನ್ಸೆಕ್ಸ್ ಸುಮಾರು 900 ಪಾಯಿಂಟ್‌ಗಳಷ್ಟು ಕುಸಿದು 76,000 ಮಟ್ಟಕ್ಕಿಂತ ಕೆಳಗೆ ತಲುಪಿದ್ದರಿಂದ ಹೂಡಿಕೆದಾರರ ರೂ. 10 ಲಕ್ಷ ಕೋಟಿ ಸಂಪತ್ತು ಕರಗಿದೆ. ತಮ್ಮ ಉಳಿತಾಯವನ್ನು ಷೇರು ಮಾರುಕಟ್ಟೆಯಲ್ಲಿ ಹಾಕುವ ಯುವ ಜನತೆ ಮಾರುಕಟ್ಟೆಯ ಈ ಅನಿಶ್ಚಿತತೆಗೆ ಬಲಿಯಾಗುತ್ತಿದ್ದಾರೆ. ಇದು ಷೇರು ಮಾರುಕಟ್ಟೆಯ ಭವಿಷ್ಯಕ್ಕೆ ಸಕಾರಾತ್ಮಕ ಸಂಕೇತವಾಗುವುದಿಲ್ಲ, ಈ ಆರ್ಥಿಕತೆಯ ವಿಷ ವರ್ತುಲಕ್ಕೆ ಬಿಜೆಪಿ ಸರ್ಕಾರ ನೇರ ಹೊಣೆ ಮಾತ್ರವಲ್ಲದೇ, ಅದು ಕೂಡಾ ತಪಿತಸ್ಥ ಈಗ ಹೂಡಿಕೆದಾರರು ಬಿಜೆಪಿ ಬೇಡ ಎನ್ನುತ್ತಿದ್ದಾರೆ ಎಂದು ಅಖಿಲೇಶ್ ಯಾದವ್ ಹೇಳಿದ್ದಾರೆ.

## ಗುಜರಾತ್‌ನಲ್ಲಿ ಜಾಗ್ವಾರ್ ಯುದ್ಧ ವಿಮಾನ ಪತನ

**ಪುಣೆ:** ಏಪ್ರಿಲ್ 2 ರಂದು ಗುಜರಾತ್‌ನ ಜಾಮ್‌ನಗರ ಜಿಲ್ಲೆಯಲ್ಲಿ ನಡೆದ ಭಾರತೀಯ ವಾಯುಪಡೆಯ ಜಾಗ್ವಾರ್ ಯುದ್ಧ ವಿಮಾನ ಅಪಘಾತದಲ್ಲಿ ಗಾಯಗೊಂಡ ಪೈಲಟ್‌ನನ್ನು ಪುಣೆಯ ಕಿರ್ಕಿಯಲ್ಲಿರುವ ಮಿಲಿಟರಿ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಜಾಮ್‌ನಗರ ವಾಯುನೆಲೆಯಿಂದ ಬಂದ ಎರಡು ಆಸನಗಳ ಐಎಎಫ್ ಜಾಗ್ವಾರ್ ವಿಮಾನವು ರಾತ್ರಿ ಕಾರ್ಯಾಚರಣೆಯ ಸಮಯದಲ್ಲಿ ಅಪಘಾತಕ್ಕೀಡಾಗಿದ್ದು, ಫ್ಲೈಟ್ ಲೆಫ್ಟಿನೆಂಟ್ ಸಿದ್ಧಾರ್ಥ್ ಯಾದವ್ ಸಾವನ್ನಪ್ಪಿದ್ದಾರೆ, ಆದರೆ ಜಾಮ್‌ನಗರದಲ್ಲಿರುವ ಐಎಎಫ್‌ನ 224 ಸ್ಕ್ವಾಡ್ರನ್‌ನ ಗ್ರೂಪ್ ಕ್ಯಾಪ್ಟನ್ ಮನೀಶ್ ಕುಮಾರ್ ಸಿಂಗ್ (43) ಗಾಯಗೊಂಡಿದ್ದಾರೆ. ಘಟನೆಯಲ್ಲಿ ಸುಟ್ಟ ಗಾಯಗಳಿಂದ ಬಳಲುತ್ತಿದ್ದ ಸಿಂಗ್ ಆರಂಭದಲ್ಲಿ ಜಾಮ್‌ನಗರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು ಆದರೆ ಗುರುವಾರ ಅವರನ್ನು ಕಿರ್ಕಿಯ ಮಿಲಿಟರಿ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು.

ಅವರ ಸ್ಥಿತಿ ಸ್ಥಿರವಾಗಿದೆ ಎಂದು ಸೇನಾ ವೈದ್ಯಕೀಯ ದಳದ ಮೂಲಗಳು ತಿಳಿಸಿವೆ. ಎಂಎಚ್ ಖಡ್ಕಿ ಸಶಸ್ತ್ರ ಪಡೆಗಳ ಪ್ರಮುಖ ಮೂಳೆಚಿಕಿತ್ಸಾ ಸಂಸ್ಥೆಯಾಗಿದೆ. ಇದು ಬೆನ್ನುಹುರಿಯ ಗಾಯಗಳಿಗೆ ಮಾತ್ರ ಚಿಕಿತ್ಸೆ ನೀಡುವ ಸಶಸ್ತ್ರ ಪಡೆಗಳ ಏಕೈಕ ಕೇಂದ್ರವಾಗಿದೆ ಎಂದು ಹೇಳಲಾಗಿದೆ. ಜಾಮ್‌ನಗರ ನಗರದಿಂದ 12 ಕಿ.ಮೀ ದೂರದಲ್ಲಿರುವ ಸುವರ್ದಾ ಗ್ರಾಮದ ತೆರೆದ ಮೈದಾನದಲ್ಲಿ ರಾತ್ರಿ 9:30ರ ಸುಮಾರಿಗೆ ಫೈಟರ್ ಜೆಟ್ ಪತನಗೊಂಡು ಬೆಂಕಿ ಹೊತ್ತಿಕೊಂಡಿತು. ಘಟನೆಯ ಬಗ್ಗೆ ತನಿಖೆಗೆ ಭಾರತೀಯ ವಾಯುಪಡೆ ಆದೇಶಿಸಿದೆ. ಫೈಟರ್ ಜೆಟ್ ಅಪಘಾತದಲ್ಲಿ ಮೃತಪಟ್ಟ ಫ್ಲೈಟ್ ಲೆಫ್ಟಿನೆಂಟ್ ಸಿದ್ಧಾರ್ಥ್ ಯಾದವ್ (28) ಅವರನ್ನು ಹರಿಯಾಣದ ರೇವಾರಿ ಜಿಲ್ಲೆಯ ಅವರ ಹುಟ್ಟೂರು ಮಜ್ರಾ ಭಾಲ್ಖಿ ಗ್ರಾಮದಲ್ಲಿ ಪೂರ್ಣ ಮಿಲಿಟರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನೆರವೇರಿತು.

## ಮೈಕ್ರೋಸಾಫ್ಟ್‌ನ 50ನೇ ವಾರ್ಷಿಕೋತ್ಸವದಲ್ಲಿ ಪ್ರತಿಭಟನೆ

**ವಾಷಿಂಗ್ಟನ್:** ಇಸ್ರೇಲ್ ಸೇನೆಗೆ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಪೂರೈಸಲು ಒಪ್ಪಂದ ಮಾಡಿಕೊಂಡ ನಿರ್ಧಾರವನ್ನು ವಿರೋಧಿಸಿ ಮೈಕ್ರೋಸಾಫ್ಟ್ ಉದ್ಯೋಗಿಗಳು ಕಂಪನಿಯ 50ನೇ ವಾರ್ಷಿಕೋತ್ಸವ ಆಚರಣೆ ವೇಳೆ ಪ್ರತಿಭಟನೆ ನಡೆಸಿದ್ದಾರೆ.

ಕಂಪನಿಯ ಎಐ ಅಸಿಸ್ಟೆಂಟ್ ಉತ್ಪನ್ನ Copilot ಬಗ್ಗೆ ಮೈಕ್ರೋಸಾಫ್ಟ್ ಎಐ ಸಿಇಒ ಮುಸ್ತಫಾ ಸುಲೇಮಾನ್ ಅವರು ವಿವರಿಸುತ್ತಿದ್ದ ವೇಳೆ ಪ್ರತಿಭಟನೆ ನಡೆದಿದೆ. ಈ ವೇಳೆ ಮೈಕ್ರೋಸಾಫ್ಟ್ ಸಹಸಂಸ್ಥಾಪಕ ಬಿಲ್ ಗೇಟ್ಸ್ ಹಾಗೂ ಮಾಜಿ ಸಿಇಒ ಸ್ಟೀವ್ ಬಾಲ್ಮರ್ ಇದ್ದರು.

'ಮುಸ್ತಫಾ ನಿಮಗೆ ನಾಚಿಕೆಯಾಗಬೇಕು' ಎಂದು ಘೋಷಣೆ ಕೂಗಿದ ಇಬ್ತಿಹಾಲ್ ಅಬೂಸದ್ ಎನ್ನುವ ಮಹಿಳಾ ಉದ್ಯೋಗಿ, ವೇದಿಕೆಯ ಬಳಿ



ತೆರಳಿದ್ದಾರೆ. ಈ ವೇಳೆ ಮುಸ್ತಫಾ ಭಾಷಣ ನಿಲ್ಲಿಸಿದ್ದಾರೆ. ಎಐ ಅನ್ನು ಒಳಿತಿಗಾಗಿ ಬಳಕೆ ಮಾಡಲಾಗುವುದು ಎಂದು ನೀವು ಹೇಳುತ್ತೀರಿ. ಆದರೆ ಇಸ್ರೇಲ್ ಸೇನೆಗೆ ಮೈಕ್ರೋಸಾಫ್ಟ್ ಉತ್ಪನ್ನಗಳನ್ನು ಒದಗಿಸುತ್ತಿದೆ. 50 ಸಾವಿರ ಮಂದಿ ಸಾವಿಗೀಡಾಗಿದ್ದಾರೆ. ಈಗ ನಮ್ಮ ಪ್ರದೇಶದ ನರಮೇಧಕ್ಕೆ ಇಸ್ರೇಲ್ ಬೆಂಬಲ ನೀಡುತ್ತಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪ್ರತಿಭಟನೆ ದಾಖಲಿಸಿದ್ದಕ್ಕೆ ಧನ್ಯವಾದಗಳು. ನಾನು ಕೇಳುತ್ತೇನೆ ಎಂದು ಮುಸ್ತಫಾ ಹೇಳಿದ್ದಾರೆ. ಅದಾಗ್ಯೂ ಪ್ರತಿಭಟನೆ ಮುಂದುವರಿಸಿದ ಅಬೂಸದ್, ಇಡೀ ಮೈಕ್ರೋಸಾಫ್ಟ್‌ನವರ ಕೈಯಲ್ಲಿ ರಕ್ತದ ಕಲೆ ಇದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೆ ಪ್ಯಾಲೆಸ್ಟೀನಿ ಜನರ ಬೆಂಬಲ ಸೂಚಕವಾಗಿರುವ ಕೆಫಿಯ ಸ್ಕಾರ್ಫ್ ಅನ್ನು ವೇದಿಕೆಗೆ ಎಸೆದರು.

ಬಳಿಕ ಅವರನ್ನು ಕಾರ್ಯಕ್ರಮದಿಂದ ಹೊರಗೆ ಕಳುಹಿಸಲಾಯಿತು.

ಮತ್ತೊಬ್ಬ ಪ್ರತಿಭಟನಾಕಾರ, ಮೈಕ್ರೋಸಾಫ್ಟ್ ಉದ್ಯೋಗಿ ವನಿಯಾ ಅಗರಲ್ ಎಂಬವರು ಸಮಾರಂಭದ ಇನ್ನೊಂದು ವೇಳೆಯಲ್ಲಿ ಪ್ರತಿಭಟನೆ ದಾಖಲಿಸಿದರು. ಈ ವೇಳೆ ಬಿಲ್ ಗೇಟ್ಸ್, ಬಾಲ್ಕರ್ ಹಾಗೂ ಹಾಲಿ ಸಿಒಒ ಸತ್ಯ ನಾದೆಲ್ಲಾ ವೇದಿಕೆಯಲ್ಲಿದ್ದರು.

# ದ್ವಾರಕಾವರೆಗೆ ಅನಂತ್ ಅಂಬಾನಿ 170 ಕಿ.ಮೀ ಪಾದಯಾತ್ರೆ

### ಗುಜರಾತ್ ನಲ್ಲಿ ಏನಾದರೂ ರಾಜಕೀಯಕ್ಕೆ ಧುಮುಕುವ ಉದ್ದೇಶವೇನಾದರೂ ಇಟ್ಟುಕೊಂಡಿದ್ದಾರಾ?

**ಅಹಮದಾಬಾದ್:** ದೇಶದ ನಂಬರ್ ಒನ್ ಶ್ರೀಮಂತ ಮುಕೇಶ್ ಅಂಬಾನಿ ಕುಟುಂಬದ ಕುಡಿ ಅನಂತ್ ಅಂಬಾನಿ 170 ಕಿಲೋಮೀಟರ್ ಪಾದಯಾತ್ರೆಯನ್ನು ಈಗಾ ಗಲೇ ಆರಂಭಿಸಿರುವುದು ಗೊತ್ತಿರುವ ವಿಚಾರ. ಆದರೆ, ಅವರ ಪಾದಯಾತ್ರೆಯ ಹಿಂದಿನ ಉದ್ದೇಶವೇನು? ಮಾರ್ಚ್ 29ರಂದು, ಅಂಬಾನಿ ಕುಟುಂಬದ ಕರ್ಮಭೂಮಿ ಗುಜರಾತಿನ ಜಾಮ್ ನಗರದಿಂದ ದ್ವಾರಕಾದ ದ್ವಾರಕಾಧೀಶ ದೇವಸ್ಥಾನದವರೆಗೆ ಅನಂತ್ ಅಂಬಾನಿ ಪಾದ ಯಾತ್ರೆಯನ್ನು ಆರಂಭಿಸಿದ್ದಾರೆ.

**ಶ್ರೀಕೃಷ್ಣನ ಮೇಲಿನ ನಂಬಿಕೆ**

ಶ್ರೀಕೃಷ್ಣ ಚಿರಸ್ಥಾಯಿಯಾಗಿ ನೆಲೆಸಿರುವ ದೇಶದ ಪುರಾಣ ಪ್ರಸಿದ್ಧ ದೇವಾಲಗಳಲ್ಲೊಂದಾದ ದ್ವಾರಕಾದಲ್ಲಿ ಅನಂತ್ ಅಂಬಾನಿ ತಮ್ಮ ಪಾದಯಾತ್ರೆಯನ್ನು ಸಂಪನ್ನಗೊಳಿಸಲಿದ್ದಾರೆ. ದಿನವೊಂದಕ್ಕೆ ಆರರಿಂದ ಏಳು ಗಂಟೆಗಳ ಕಾಲ ನಡೆಯುವ ಟಾರ್ಗೆಟ್ ಅನ್ನು ಇಟ್ಟುಕೊಂಡಿರುವ ಅನಂತ್, ಸದ್ಯಕ್ಕೆ ಆ ಟಾರ್ಗೆಟ್ ಅನ್ನು ರೀಚ್ ಆಗುತ್ತಿದ್ದಾರೆ. ಏಪ್ರಿಲ್ 8ರಂದು ಅಂದರೆ, ಇದೇ ಬರುವ ಮಂಗಳವಾರ, ಅವರ 30ನೇ ಹುಟ್ಟುಹಬ್ಬದಂದು ಯಾತ್ರೆಯನ್ನು ಸಂಪೂರ್ಣಗೊಳಿಸುವ ಉದ್ದೇಶವನ್ನು ಹೊಂದಿದ್ದಾರೆ.

ಅನಂತ್ ಅಂಬಾನಿಯವರ ಪಾದಯಾತ್ರೆಯ ಹಿಂದಿನ ಉದ್ದೇಶವೇನು ಗುಜರಾತ್‌ನಲ್ಲಿ ಏನಾದರೂ ರಾಜಕೀಯಕ್ಕೆ ಧುಮುಕುವ ಉದ್ದೇಶವೇನಾದರೂ ಇಟ್ಟುಕೊಂಡಿದ್ದಾರಾ ಎನ್ನುವ ಪ್ರಶ್ನೆಗೆ, ಸದ್ಯದ ಮಟ್ಟಿಗೆ ಖಂಡಿತ ಇಲ್ಲ. ಇದು, ಶ್ರೀಕೃಷ್ಣನ ಮೇಲಿನ ಆಧ್ಯಾತ್ಮಿಕತೆ ಮತ್ತು ಭಕ್ತಿ. ಅನಂತ್ ಅಂಬಾನಿ ಅವರದ್ದು ದಢೂತಿ ದೇಹ, ಜೊತೆಗೆ ಕುಶಿಂಗ್ ಸಿಂಡ್ರೋಮ್ ಎನ್ನುವ ಅಪರೂಪದ ಕಾಯಿಲೆಯನ್ನೂ ಎದುರಿಸುತ್ತಿದ್ದಾರೆ. ಇದರ ಜೊತೆಗೆ, ತೂಕ ಜಾಸ್ತಿ ಇರುವುದರಿಂದ, ಅಸ್ತಮಾ, ಶ್ವಾಸಕೋಶದ ಸಮಸ್ಯೆಯನ್ನೂ ಎದುರಿಸುತ್ತಿದ್ದಾರೆ. ಆದರೂ, 170 ಕಿಲೋಮೀಟರ್ ಪಾದಯಾತ್ರೆ ನಡೆಸುತ್ತಿದ್ದಾರೆ ಅಂದರೆ, ಅದು ಅವರು ಆಧ್ಯಾತ್ಮಿಕದತ್ತ ಇಟ್ಟ ನಂಬಿಕೆ ಎನ್ನುವುದು ಅವರ ಸ್ನೇಹಿತರ ಬಳಗದ ಮಾತು. ವಿಶ್ವದ



ಅತಿದೊಡ್ಡ ತೈಲಶುದ್ಧೀಕರಣ ಕಾರ್ಯಾಗಾರ, ನವ ಇಂಧನ ಯೋಜನೆಯ ಜವಾಬ್ದಾರಿಯನ್ನು ತಂದೆ ಮುಕೇಶ್ ಅಂಬಾನಿ, ತಮ್ಮ ಎರಡನೇ ಪುತ್ರ ಅನಂತ್ ಅಂಬಾನಿಗೆ ವಹಿಸಿದ್ದಾರೆ. ಜೊತೆಗೆ, ವನತಾರೆ ಪ್ರಾಣಿ ಆಶ್ರಯ ಕೇಂದ್ರವನ್ನೂ ಮುನ್ನಡೆಸುತ್ತಿದ್ದಾರೆ. ತಮ್ಮ ಮೇಲಿರುವ ಗುರುತರ ವ್ಯಾವಹಾರಿಕ ಜವಾಬ್ದಾರಿ, ಆರೋಗ್ಯ ಸಮಸ್ಯೆ, ಆಧ್ಯಾತ್ಮಿಕತೆ, ಶ್ರೀಕೃಷ್ಣನ ಮೇಲಿನ ನಂಬಿಕೆಯೇ ಅವರ ಪಾದಯಾತ್ರೆಯ ಉದ್ದೇಶ.

ಹನುಮಾನ್ ಚಾಲೀಸ್, ಸುಂದರಕಾಂಡ, ದೇವಿ ಸ್ತೋತ್ರಗಳನ್ನು ಪಠಿಸುತ್ತಾ ನಡೆಯುತ್ತಿರುವ ಅನಂತ್ ಅಂಬಾನಿ, ಸಂಪೂರ್ಣ ಸನಾತನ ಧರ್ಮದ ಅನುಯಾಯಿಯಾಗಿದ್ದಾರೆ. ಅಂಬಾನಿ ಪುತ್ರನ ಪಾದಯಾತ್ರೆಗೆ ಸ್ಥಳೀಯರು ಉತ್ತಮವಾಗಿ ಸ್ಪಂದಿ ಸುತ್ತಿದ್ದಾರೆ. ಸ್ವಲ್ಪದೂರ ಅವರ ಜೊತೆ ಹೆಜ್ಜೆ ಹಾಕುತ್ತಿರುವ ಸ್ಥಳೀಯರು ಅವರಿಗೆ ಶುಭವನ್ನು ಕೋರುತ್ತಿದ್ದಾರೆ. ಕೆಲವರು ಅವರಿಗೆ ಕೃಷ್ಣನ ಫೋಟೋ ನೀಡುತ್ತಿದ್ದಾರೆ. ಕೆಲವು ದಿನಗಳ ಹಿಂದೆ ಪಾದಯಾತ್ರೆಯ ವೇಳೆ ಕೋಳಿಗಳ ಹಿಂಡನ್ನು ಅನಂತ್ ಅಂಬಾನಿ ರಕ್ಷಿಸಿದ್ದರು. ಪಂಜರದ ಮುಂದೆ ನಿಂತು ಕೋಳಿಯನ್ನು ಹಿಡಿದುಕೊಂಡು ಅವುಗಳ ಮಾಲೀಕರಿಗೆ ಹಣವನ್ನು ನೀಡಿ, ಯಾವುದೇ ತೊಂದರೆಯಿಲ್ಲದೆ ಅವುಗಳನ್ನು ರಕ್ಷಿಸುವಂತೆ ಅನಂತ್ ಸೂಚನೆ ನೀಡಿದ್ದರು.

> **ಭಾರತದ ಸಂಸ್ಕೃತಿಯಲ್ಲಿ ಪಾದಯಾತ್ರೆಗೆ ವಿಶೇಷ ಮನ್ನಣೆಯಿದೆ. ದೇಶದ ಶ್ರೀಮಂತ ಅಂಬಾನಿ ಕುಟುಂಬ ಈ ಸಂಪ್ರದಾಯವನ್ನು ಮುಂದುವರಿಸಿರುವುದು ವಿಶೇಷವಾಗಿದೆ. ಪಾದಯಾತ್ರೆಯ ಜೊತೆಗೆ ಏಕಾಂತದಲ್ಲಿ ದೇವರನ್ನು ಹುಡುಕುವ ಪ್ರಯತ್ನ ಎಂದು ಅಂಬಾನಿ ಹೇಳಿದ್ದಾರೆ. ಪಾದಯಾತ್ರೆಯಂತಹ ಕಠಿಣ ನಿರ್ಧಾರ ತೋರಿಕೆಗೆ ಅಲ್ಲ, ಶಾಂತಿಗಾಗಿ**
> –ಅನಂತ್ ಅಂಬಾನಿ

**ಪಾದಯಾತ್ರೆಗೆ ಬೆಂಬಲ**

**ಇದು ಬರೀ ಪಾದಯಾತ್ರೆ ಮಾತ್ರವಲ್ಲ, ಭಗವಾನ್ ಕೃಷ್ಣನಿಗೆ ದೇಹ, ಮನಸ್ಸು ಮತ್ತು ಆತ್ಮವನ್ನು ಸಮರ್ಪಿಸುವ ನನ್ನ ಭಕ್ತಿಯ ಸಂಕೇತ ಎಂದು ಅನಂತ್ ಅಂಬಾನಿ ಹೇಳಿದ್ದಾರೆ. ರಾಸರಾಹ್ ಮಹಾರಾಜ್, ಧೀರೇಂದ್ರ ಶಾಸ್ತ್ರಿ ಮುಂತಾದ ಆಧ್ಯಾತ್ಮಿಕ ಗುರುಗಳು ಅನಂತ್ ಅಂಬಾನಿಯವರ ಪಾದಯಾತ್ರೆಗೆ ಬೆಂಬಲವನ್ನು ಸೂಚಿಸಿದ್ದಾರೆ.**

## ಮಿನಿ ನ್ಯೂಸ್

### ಭಾರತೀಯ ವ್ಯಕ್ತಿಯ ಕೊಲೆ

**ಒಟ್ಟಾವಾ:** ಕೆನಡಾದ ರಾಕ್‌ಲ್ಯಾಂಡ್ ಪಟ್ಟಣದಲ್ಲಿ ಭಾರತೀಯ ಪ್ರಜೆಯೊಬ್ಬರಿಗೆ ಚೂರಿ ಇರಿದು ಹತ್ಯೆ ಮಾಡಲಾಗಿದೆ. ಸ್ಥಳೀಯ ಪೊಲೀಸರು ಶಂಕಿತ ಆರೋಪಿಯೊಬ್ಬನನ್ನು ವಶಕ್ಕೆ ತೆಗೆದುಕೊಂಡಿದ್ದಾರೆ. ಆದರೆ ದಾಳಿಯ ಸಂದರ್ಭಗಳ ಬಗ್ಗೆ ಹೆಚ್ಚಿನ ವಿವರಗಳು ತಿಳಿದಿಲ್ಲ. ಕೆನಡಾದಲ್ಲಿರುವ ಭಾರತೀಯ ರಾಯಭಾರ ಕಚೇರಿ ಈ ಘಟನೆಯನ್ನು ದೃಢಪಡಿಸಿದೆ, ಸಂತ್ರಸ್ತೆಯ ಕುಟುಂಬದೊಂದಿಗೆ ಸಂಪರ್ಕದಲ್ಲಿದೆ ಎಂದು ಹೇಳಿದೆ. ಒಟ್ಟಾವಾ ಬಳಿಯ ರಾಕ್‌ಲ್ಯಾಂಡ್‌ನಲ್ಲಿ ಇರಿತದಿಂದಾಗಿ ಭಾರತೀಯ ಪ್ರಜೆಯೊಬ್ಬರು ಸಾವನ್ನಪ್ಪಿದ ದುರಂತ ಸಾವಿನಿಂದ ನಾವು ತೀವ್ರ ದುಃಖಿತರಾಗಿದ್ದೇವೆ. ಶಂಕಿತನನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ದುಃಖಿತ ಸಂಬಂಧಿಕರಿಗೆ ಸಾಧ್ಯವಿರುವ ಎಲ್ಲಾ ಸಹಾಯವನ್ನು ಒದಗಿಸಲು ನಾವು ಸ್ಥಳೀಯ ಸಮುದಾಯ ಸಂಘದ ಮೂಲಕ ನಿಕಟ ಸಂಪರ್ಕದಲ್ಲಿದ್ದೇವೆ ಎಂದು ಪೋಸ್ಟ್‌ನಲ್ಲಿ ಬರೆಯಲಾಗಿದೆ. ಸಿಬಿಸಿ ನ್ಯೂಸ್ ವರದಿಯ ಪ್ರಕಾರ, ಕ್ಲಾರೆನ್ಸ್ ರಾಕ್‌ಲ್ಯಾಂಡ್‌ನಲ್ಲಿ ಒಬ್ಬ ವ್ಯಕ್ತಿ ಶವವಾಗಿ ಪತ್ತೆಯಾಗಿದ್ದು, ಇನ್ನೊಬ್ಬನನ್ನು ಬಂಧಿಸಲಾಗಿದೆ. ಸಾವಿಗೆ ಕಾರಣ ಅಥವಾ ಯಾವುದೇ ಆರೋಪಗಳನ್ನು ದಾಖಲಿಸಲಾಗಿದೆಯೇ ಎಂದು ಅಧಿಕಾರಿಗಳು ಬಹಿರಂಗಪಡಿಸಿಲ್ಲ.

### ಮಣಿಪುರದಲ್ಲಿ ನಿಷೇಧಿತ ಸಂಘಟನೆಯ ನಾಲ್ವರು ಉಗ್ರರ ಬಂಧನ

**ಇಂಫಾಲ್:** ಮಣಿಪುರದ ಬಿಷ್ಣುಪುರ, ತೌಬಲ್ ಮತ್ತು ಇಂಫಾಲ್ ಪೂರ್ವ ಜಿಲ್ಲೆಗಳಲ್ಲಿ ಎರಡು ನಿಷೇಧಿತ ಸಂಘಟನೆಗಳಿಗೆ ಸೇರಿದ ನಾಲ್ವರು ಉಗ್ರರನ್ನು ಭದ್ರತಾ ಪಡೆಗಳು ಬಂಧಿಸಿವೆ ಎಂದು ಪೊಲೀಸರು ತಿಳಿಸಿದ್ದಾರೆ. 47 ವರ್ಷದ ವ್ಯಕ್ತಿಯನ್ನು ಅಪಹರಿಸಿದ ಆರೋಪದ ಮೇಲೆ ನಿಷೇಧಿತ ಯುನೈಟೆಡ್ ನ್ಯಾಷನಲ್ ಲಿಬರೇಶನ್ ಫ್ರಂಟ್‌ನ ಇಬ್ಬರು ಸದಸ್ಯರನ್ನು ಬಿಷ್ಣುಪುರ ಜಿಲ್ಲೆಯ ನಂಬೋಲ್ ನಿಂದ ಬಂಧಿಸಲಾಗಿದೆ. ಇಂಫಾಲ್ ಪಶ್ಚಿಮ ಜಿಲ್ಲೆಯ ಪಟ್ಸೋಯ್ ಪಾರ್ಟ್ –4 ರ ಲೈಟೋಂಜಮ್ ದಿಲೀಪ್ ಸಿಂಗ್ (47) ಎಂಬಾತನನ್ನು ಕೆಲವು ಅಪರಿಚಿತ ವ್ಯಕ್ತಿಗಳು ಅವರ ನಿವಾಸದಿಂದ ಅಪಹರಿಸಿರುವ ಬಗ್ಗೆ ಮಾಹಿತಿ ಪಡೆದ ನಂತರ ಕಾರ್ಡನ್ ಮತ್ತು ಶೋಧ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ. ಶೋಧ ಕಾರ್ಯಾಚರಣೆಯ ಸಮಯದಲ್ಲಿ, ಈ ವ್ಯಕ್ತಿಯ ಅಪಹರಣದಲ್ಲಿ ಭಾಗಿಯಾಗಿದ್ದ ಇಬ್ಬರು ಯುಎನ್‌ಎಲ್‌ಎಫ್ (ಪಿ) ಕಾರ್ಯಕರ್ತರನ್ನು ಮನೆಯಿಂದ ಬಂಧಿಸಲಾಗಿದೆ ಮತ್ತು ಅಪಹರಣಕ್ಕೊಳಗಾದ ವ್ಯಕ್ತಿಯನ್ನು ರಕ್ಷಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ತೌಬಲ್ ಜಿಲ್ಲೆಯ ಖೊಂಗ್ಜೋಮ್ ಖೇಬಾಚಿಂಗ್ ಪ್ರದೇಶದಿಂದ ನಿಷೇಧಿತ ಕಾಂಗ್ಲೀಪಾಕ್ ಕಮ್ಯುನಿಸ್ಟ್ ಪಕ್ಷದ (ಪಿಡಬ್ಲ್ಯೂಜಿ) ಸಕ್ರಿಯ ಕಾರ್ಯಕರ್ತನನ್ನು ಭದ್ರತಾ ಪಡೆಗಳು ಬಂಧಿಸಿವೆ ಎಂದು ಅವರು ತಿಳಿಸಿದ್ದಾರೆ. ಬಂಧಿತ ಉಗ್ರ ಸುಲಿಗೆ ಚಟುವಟಿಕೆಯಲ್ಲಿ ಭಾಗಿಯಾಗಿದ್ದ ಎನ್ನಲಾಗಿದೆ.

### ದೇಶದ ಕಡಲ ತೀರಗಳ ಅಭಿವೃದ್ಧಿಗೆ ಮೋದಿ ಪಣ

**ನವದೆಹಲಿ:** ದೇಶದ ಕಡಲ ತೀರಗಳು ಹಾಗೂ ಬಂದರುಗಳನ್ನು ಬಲಪಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ತಿಳಿಸಿದ್ದಾರೆ. ದೇಶದ ಪ್ರಗತಿಗಾಗಿ ಭಾರತದ ಕಡಲ ವಲಯ ಮತ್ತು ಅದರ ಬಂದರುಗಳನ್ನು ಬಲಪಡಿಸುವುದನ್ನು ತಮ್ಮ ಸರ್ಕಾರ ಮುಂದುವರಿಸುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಈ ವಲಯದ ಮಹತ್ವವನ್ನು ಸ್ಮರಿಸುವ ರಾಷ್ಟ್ರೀಯ ಕಡಲ ದಿನದ ಅಂಗವಾಗಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ ಪಿಎಂ ಮೋದಿ, ಶನಿವಾರ ರಾಷ್ಟ್ರೀಯ ಕಡಲ ದಿನದಂದು, ನಾವು ಭಾರತದ ಶ್ರೀಮಂತ ಕಡಲ ಇತಿಹಾಸವನ್ನು ಮತ್ತು ರಾಷ್ಟ್ರ ನಿರ್ಮಾಣದಲ್ಲಿ ಈ ವಲಯವು ವಹಿಸಿದ ಪಾತ್ರವನ್ನು ನೆನಪಿಸಿಕೊಳ್ಳುತ್ತೇವೆ ಎಂದು ಹೇಳಿದರು.

ಭಾರತದ ಪ್ರಗತಿಗಾಗಿ ನಾವು ಕಡಲ ವಲಯ, ನಮ್ಮ ಬಂದರುಗಳನ್ನು ಬಲಪಡಿಸುವುದನ್ನು ಮುಂದುವರಿಸುತ್ತೇವೆ ಎಂದು ಅವರು ತಮ್ಮ ಪೋಸ್ಟ್‌ನಲ್ಲಿ ಮಾಹಿತಿ ನೀಡಿದ್ದಾರೆ.

### ಝೆಲೆನ್‌ಸ್ಕಿ ತವರೂರು ಕ್ರಿವಿ ರಿಹ್ ಮೇಲೆ ರಷ್ಯಾ ಕ್ಷಿಪಣಿ ದಾಳಿ


**ಕ್ವಿವ್:** ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರ ಹುಟ್ಟೂರು ಮಧ್ಯ ಉಕ್ರೇನ್‌ನ ಕ್ರಿವಿ ರಿಹ್ ನಗರದ ಮೇಲೆ ಶುಕ್ರವಾರ ರಷ್ಯಾದ ಕ್ಷಿಪಣಿ ದಾಳಿ ನಡೆಸಿದೆ. ಘಟನೆಯಲ್ಲಿ 9 ಮಕ್ಕಳು ಸೇರಿ 18 ಮಂದಿ ಸಾವಿಗೀಡಾಗಿದ್ದು, 60ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ.

ಕ್ಷಿಪಣಿ ವಸತಿ ಪ್ರದೇಶಕ್ಕೆ ಅಪ್ಪಳಿಸಿತು. ಸಮೀಪದಲ್ಲಿ ಆಟದ ಮೈದಾನವೂ ಇತ್ತು. ಮೃತರಲ್ಲಿ 9 ಮಕ್ಕಳೂ ಸೇರಿದ್ದಾರೆ ಎಂದು ಕ್ರಿವಿರಿಹ್‌ನ ರಕ್ಷಣಾ ಮಂಡಳಿಯ ಮುಖ್ಯಸ್ಥ ಓಲೆಕ್ಸಾಂಡರ್ ವಿಲ್ಕುಲ್ ಹೇಳಿದ್ದಾರೆ. ಸದ್ಯ ರಕ್ಷಣಾ ಕಾರ್ಯಾಚರಣೆ ಮುಂದುವರಿದಿದ್ದು, ಸಾವಿನ ಸಂಖ್ಯೆ ಹೆಚ್ಚಾಗಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. 'ರಷ್ಯಾಕ್ಕೆ ಕದನ ವಿರಾಮ ಬೇಕಿಲ್ಲ. ನಾವು ಅದನ್ನು ನೋಡುತ್ತಿದ್ದೇವೆ' ಎಂದು ಝೆಲೆನ್‌ಸ್ಕಿ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ. ಪಾಶ್ಚಿಮಾತ್ಯ ಬೋಧಕರು ಸಭೆ ಸೇರುತ್ತಿದ್ದ ನಗರದ ರೆಸ್ಟೋರೆಂಟ್ ಮೇಲೆ ಹೆಚ್ಚಿನ ಸ್ಫೋಟಕವಿರುವ ಕ್ಷಿಪಣಿಯೊಂದಿಗೆ ದಾಳಿ ನಡೆಸಿದೆ ಎಂದು ಹೇಳಲಾಗಿದೆ.

### ರಷ್ಯಾದ 51 ಡ್ರೋನ್‌ಗಳನ್ನು ಹೊಡೆದುರುಳಿಸಿದ ಉಕ್ರೇನ್



**ಕೀವ್:** ಶನಿವಾರ ರಾತ್ರಿ ಪೂರ್ತಿ ರಷ್ಯಾ ಉಡಾಯಿಸಿದ 92 ಡ್ರೋನ್‌ಗಳ ಪೈಕಿ 51 ಅನ್ನು ವಾಯು ರಕ್ಷಣಾ ಪಡೆಗಳು ಹೊಡೆದುರುಳಿಸಿವೆ ಎಂದು ಉಕ್ರೇನ್ ತಿಳಿಸಿದೆ. ರಷ್ಯಾದ ಉಳಿದ 31 ಡ್ರೋನ್‌ಗಳು ಕಾಣೆಯಾಗಿವೆ ಎಂದು ವಾಯುಪಡೆ ಪ್ರಕಟಣೆಯಲ್ಲಿ ತಿಳಿಸಿದೆ. ರಷ್ಯಾ ದಾಳಿಯಿಂದಾಗಿ ಕೀವ್, ಜೈಟೊಮಿರ್, ಸುಮಿ ಮತ್ತು ಡ್ನಿಪ್ರೊಪೆಟ್ರೋವ್ಸ್ ಪ್ರದೇಶಗಳಲ್ಲಿ ಹಾನಿ ಉಂಟಾಗಿದೆ ಎಂದು ಅದು ತಿಳಿಸಿದೆ. ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರ ಹುಟ್ಟೂರು ಮಧ್ಯ ಉಕ್ರೇನ್‌ನ ಕ್ರಿವಿ ರಿಹ್ ನಗರದ ಮೇಲೆ ರಷ್ಯಾದ ಕ್ಷಿಪಣಿ ದಾಳಿ ನಡೆಸಿದೆ. ಘಟನೆಯಲ್ಲಿ ಕನಿಷ್ಠ 14 ಮಂದಿ ಸಾವಿಗೀಡಾಗಿದ್ದು. 50ಕ್ಕೂ ಹೆಚ್ಚು ಜನ ಗಾಯಗೊಂಡಿದ್ದರು.




# ಚಿನ್ನ ತರಲು 5 ಸ್ಟೆಪ್ ಕೋಡ್‌ವರ್ಡ್ ಬಳಕೆ

**ಚಿನ್ನದ ಚೋರಿಯ ನಾಟಕ ಬಯಲು**

ದುಬೈನಿಂದ ಚಿನ್ನ ತಂದು ಪರಪ್ಪನ ಅಗ್ರಹಾರ ಸೇರಿರುವ ರನ್ಯಾ ರಾವ್ ಕೇಸ್‌ನಲ್ಲಿ ದಿನಕ್ಕೊಂದು ತಿರುವು ಸಿಗ್ತಿದೆ. 'ಮಾಣಿಕ್ಯ' ಬೆಡಗಿಯ ಕಳ್ಳಸಾಗಾಣಿಕೆಗೆ ಬಳಸುತ್ತಿದ್ದ ಕೋಡ್‌ವರ್ಡ್‌ಗಳ ರಹಸ್ಯ ಬಯಲಾಗಿದೆ.

ಕಳೆದ 5 ತಿಂಗಳಿನಲ್ಲಿಯೇ ಗೋಲ್ಡ್ ರಾಣಿ ದುಬೈನಿಂದ ಕದ್ದು ತಂದಿರುವ ಚಿನ್ನದ ಲೆಕ್ಕ ಕೇಳಿದ್ರೆ ನಿಬ್ಬೆರಗಿಸುತ್ತೆ. ಹೌದು, ರನ್ಯಾ ರಾವ್ ಗೋಲ್ಡ್ ಸ್ಮಗ್ಲಿಂಗ್ ಕೇಸ್ ತನಿಖೆ ಮಾಡುತ್ತಿರುವ ಡಿಆರ್‌ಐ ಅಧಿಕಾರಿಗಳು ಹಲವು ಸಂಗತಿಗಳನ್ನ ಬಯಲಿಗೆಳೆದಿದ್ದಾರೆ. ಗೋಲ್ಡ್ ಸ್ಮಗ್ಲಿಂಗ್‌ನಲ್ಲಿ ಹವಾಲ ನಂಟಿನ ಬಗ್ಗೆ ಸಾಕ್ಷ್ಯ ಕಲೆಹಾಕಿದ್ದಾರೆ. ರನ್ಯಾ ರಾವ್ ಮೊಬೈಲ್‌ನಲ್ಲಿ ಸೇವ್ ಆಗಿದ್ದ ಆ ಒಂದು ನಂಬರ್‌ನಿಂದ ಚಿನ್ನ ಕಳ್ಳಸಾಗಾಣಿಕೆಯ ಸ್ಫೋಟಕ ರಹಸ್ಯ ಹೊರಬಂದಿದೆ. ರನ್ಯಾ ಮೊಬೈಲ್‌ನಲ್ಲಿ 'ಎಯು ಬೆಂಗಳೂರು ಡಿಸ್ಪ್ಯಾಚ್ ನ್ಯೂಟನ್' ಎಂಬ ಹೆಸರಿನಲ್ಲಿ ಒಂದು ನಂಬರ್ ಸೇವ್ ಆಗಿತ್ತು. ಆ ನಂಬರ್‌ನ ಮೂಲಕವೇ ರನ್ಯಾ ಮತ್ತು ಸಾಹಿಲ್ ಮೆಸೇಜ್ ಮಾಡುತ್ತಿದ್ದರು.






# ಮುದ್ದು ಮಗಳ ಹುಟ್ಟುಹಬ್ಬದ ಸಂಭ್ರಮದಲ್ಲಿ ಅದಿತಿ

ಸ್ಯಾಂಡಲ್‌ವುಡ್ ಖ್ಯಾತ ನಟಿ ಅದಿತಿ ಪ್ರಭುದೇವ ಹಾಗೂ ಯಶಸ್ಸು ಚಂದ್ರಕಾಂತ್ ಸಖತ್ ಖುಷಿಯಲ್ಲಿದ್ದಾರೆ. ನಟಿ ಅದಿತಿ ಪ್ರಭುದೇವ ದಂಪತಿ ಅವರ ಮುದ್ದಾದ ಮಗಳ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ.

ಹೌದು, 2022ರಲ್ಲಿ ಉದ್ಯಮಿ ಯಶಸ್ಸು ಚಂದ್ರಕಾಂತ್ ಪಟ್ಲಾ ಅವರನ್ನು ಸ್ಯಾಂಡಲ್‌ವುಡ್ ಮುದ್ದಾದ ನಟಿ ಅದಿತಿ ಪ್ರಭುದೇವ ವಿವಾಹವಾಗಿದ್ದರು. ಹೊಸ ವರ್ಷದ ದಿನವೇ ಕುಟುಂಬಸ್ಥರಿಗೆ ಹಾಗೂ ಅಭಿಮಾನಿಗಳಿಗೆ ಸಿಹಿ ಸುದ್ದಿಯನ್ನು ಕೊಟ್ಟಿದ್ದರು. ಯುಗಾದಿ ಹಬ್ಬದ ದಿನ ಅಂದರೆ ಏಪ್ರಿಲ್ 4ರಂದು ನಟಿ ಅದಿತಿ ಪ್ರಭುದೇವ ಅವರ ಮನೆಗೆ ಮುದ್ದಾದ ಮಗಳ ಆಗಮನವಾಗಿತ್ತು. ಯುಗಾದಿ ಹಬ್ಬದಂದು ತಾಯಿ ಆದ ಖುಷಿಯ ಜೊತೆಗೆ ನಮ್ಮ ಮನೆ ಮಹಾಲಕ್ಷ್ಮಿ ಅಂತಾ ಮಗುವಿನ ಫೋಟೋವನ್ನು ಅಭಿಮಾನಿಗಳೊಂದಿಗೆ ಹಂಚಿಕೊಂಡಿದ್ದರು.

ಇದೀಗ ನಟಿ ಅದಿತಿ ಪ್ರಭುದೇವ ಅವರ ಮುದ್ದಾದ ಮಗಳು ನೇಸರ ಹುಟ್ಟು ಹಬ್ಬದ ಖುಷಿಯಲ್ಲಿದ್ದಾಳೆ. ಮಗಳ ಸಂಭ್ರಮವನ್ನು ಪೋಷಕರು ದುಪ್ಪಟ್ಟು ಮಾಡಿದ್ದಾರೆ. ಅಲ್ಲದೇ ಮಗಳ ಬರ್ತ್ ಡೇಯನ್ನು ಜೆಡಬ್ಲ್ಯು ಮ್ಯಾರಿಯೇಟ್ ಹೋಟೆಲ್‌ನಲ್ಲಿ ಸಖತ್ ಗ್ರ್ಯಾಂಡ್ ಆಗಿ ಮಾಡಿದ್ದಾರೆ. ಇನ್ನೂ, ನಿನ್ನೆ ಅದಿತಿ ಪ್ರಭುದೇವ ಮಗಳು ನೇಸರ ಹುಟ್ಟು ಹಬ್ಬಕ್ಕೆ ಸಾಕಷ್ಟು ತಾರೆಯರು ಭಾಗಿಯಾಗಿ ಪಾರ್ಟಿಗೆ ಮೆರಗು ತುಂಬಿದ್ದಾರೆ. ಅದಿತಿ ಪ್ರಭುದೇವ್ ಮಗಳ ಬರ್ತ್ ಡೇಗೆ ನಟಿಯರಾದ ಮಿಲನಾ ನಾಗರಾಜ್ ಹಾಗೂ ಅಮೃತಾ ಅಯ್ಯಂಗಾರ್ ಭಾಗಿಯಾಗಿದ್ದರು. ನೆನಪಿರಲಿ ಪ್ರೇಮ್ ಮತ್ತು ಮಗಳು ಅಮೃತಾ ಕೂಡ ಬಂದಿದ್ದರು.

# ಮುಂದಿನ ಮೂರು ಹೊಸ ಸಿನಿಮಾಗಳ ಬಗ್ಗೆ ಸುಳಿವು



**ಹಾಸ್ಯ ಪ್ರಧಾನ ಆಕ್ಷನ್ ಸಿನಿಮಾ**

ಸುಮಾರು ಎರಡು ವಾರಗಳ ಕಾಲ ಜಪಾನ್ ಪ್ರವಾಸದಲ್ಲಿದ್ದ ಜೂ ಎನ್‌ಟಿಆರ್ ಅಲ್ಲಿ ತಮ್ಮ 'ದೇವರ' ಸಿನಿಮಾದ ಪ್ರಚಾರದಲ್ಲಿ ಪಾಲ್ಗೊಂಡಿದ್ದರು. ಜಪಾನ್‌ನಲ್ಲಿ ಭಾರಿ ಜನಪ್ರೀತಿ ಅವರಿಗೆ ಲಭಿಸಿತು.

ಹೈದರಾಬಾದ್‌ಗೆ ಮರಳುತ್ತಿದ್ದಂತೆ ಮತ್ತೆ ಸಿನಿಮಾ ಸಂಬಂಧಿ ಕಾರ್ಯಕ್ರಮಗಳಲ್ಲಿ ಬ್ಯುಸಿ ಆಗಿರುವ ಜೂ ಎನ್‌ಟಿಆರ್, ಇತ್ತೀಚೆಗೆ ಬಿಡುಗಡೆ ಆದ 'ಮ್ಯಾಡ್ ಸ್ಕ್ವೇರ್' ಸಿನಿಮಾದ ಸಕ್ಸಸ್ ಮೀಟ್ ಕಾರ್ಯಕ್ರಮದಲ್ಲಿ ಭಾಗಿ ಆಗಿದ್ದರು. ಈ ಸಮಯ ತಮ್ಮ ಮುಂದಿನ ಎರಡು ಸಿನಿಮಾಗಳ ಬಗ್ಗೆ ಅವರು ಸುಳಿವು ನೀಡಿದರು. ಹಾಸ್ಯ ಪ್ರಧಾನವಾದ ಸಿನಿಮಾಗಳು ತಮ್ಮ ಫೇವರೇಟ್ ಎಂದ ಜೂ ಎನ್‌ಟಿಆರ್, 'ತೆರೆ ಮೇಲೆ ಹಾಸ್ಯ ಮಾಡುವುದು ಬಹಳ ಕಷ್ಟದ ಕೆಲಸ. ಇದೇ ಕಾರಣಕ್ಕೆ ನಾನು 'ಅದುರ್ಸ್ 2' ಮಾಡಲು ಹಿಂದೇಟು ಹಾಕುತ್ತಿದ್ದೀನಿ. ಆದರೆ ಎಂದಾದರೂ ಅದನ್ನು ಮಾಡುವ ಆಸೆಯೂ ಇದೆ' ಎಂದಿದ್ದಾರೆ. 'ಅದುರ್ಸ್' ಜೂ ಎನ್‌ಟಿಆರ್ ಮಾಡಿದ್ದ ಹಾಸ್ಯ ಪ್ರಧಾನ ಆಕ್ಷನ್ ಸಿನಿಮಾ ಆಗಿತ್ತು. ಆ ಸಿನಿಮಾದಲ್ಲಿ ಜೂ ಎನ್‌ಟಿಆರ್ ಅವರು ಬ್ರಾಹ್ಮಣ ಯುವಕನಾಗಿ ನೀಡಿದ್ದ ನಟನೆ ಬಹಳ ಮೆಚ್ಚುಗೆಗೆ ಪಾತ್ರವಾಗಿತ್ತು. ರಾಜಮೌಳಿಗೆ ಜೂ ಎನ್‌ಟಿಆರ್ ಅವರ ಮೆಚ್ಚಿನ ಸಿನಿಮಾ ಎಂದರೆ ಅದು 'ಅದುರ್ಸ್'.

# ಸಂಜನಾ ಗಲ್ರಾನಿ ಮತ್ತೆ ಗರ್ಭಿಣಿ



**2ನೇ ಮಗುವಿನ ನಿರೀಕ್ಷೆಯಲ್ಲಿ**

ಸ್ಯಾಂಡಲ್‌ವುಡ್ ನಟಿ ಸಂಜನಾ ಗಲ್ರಾನಿ ಅವರ ಮನೆಯಲ್ಲಿ ಸಂತಸ ಮನೆ ಮಾಡಿದೆ. ಸದ್ಯ ಸಿನಿಮಾಗಳಿಂದ ಆಗಿ ದೂರ ಸರಿದು ಕುಟುಂಬದೊಂದಿಗೆ ಸಂತಸದ ದಿನಗಳನ್ನು ಕಳೆಯುತ್ತಿರುವ ನಟಿ ಈಗ 2ನೇ ಮಗುವಿನ ನಿರೀಕ್ಷೆಯಲ್ಲಿದ್ದಾರೆ. ಸಿನಿಮಾಗಳಿಂದ ವಿರಾಮ ಪಡೆದುಕೊಂಡಿರುವ ನಟಿ, ಪತಿ ಅಜೀಜ್ ಪಾಷಾ ಮತ್ತು ಮಗ ಅಲಾರಿಕ್ ಜೊತೆ ಸಂತಸದ ಕ್ಷಣಗಳನ್ನು ಕಳೆಯುತ್ತಿದ್ದಾರೆ. ಸೋಶಿಯಲ್ ಮೀಡಿಯಾದಲ್ಲೂ ಸಿಕ್ಕಾಪಟ್ಟೆ ಆಕ್ಟೀವ್ ಆಗಿರುವ ಸಂಜನಾ ಮತ್ತೆ ತಾಯಿಯಾಗುತ್ತಿರುವ ಸಿಹಿ ಸುದ್ದಿಯನ್ನು ಹಂಚಿಕೊಂಡಿದ್ದಾರೆ. ಸಂಜನಾ ಗಲ್ರಾನಿ ತಾವು ಮತ್ತೆ ಗರ್ಭಿಣಿಯಾಗಿರುವ ಸಂತಸದ ಸುದ್ದಿಯನ್ನು ಸೋಶಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ. ಹಸಿರು ಸೀರೆಯುಟ್ಟು, ಸೀಮಂತದ ಫೋಟೋಗಳು ಮತ್ತು ವಿಡಿಯೋವನ್ನು ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಶೇರ್ ಮಾಡಿಕೊಂಡಿದ್ದಾರೆ.

ಈ ಪೋಸ್ಟ್‌ಗೆ, ಈ ಯುಗಾದಿ ನನಗೆ ತುಂಬಾ ವಿಶೇಷವಾಗಿದೆ ಏಕೆಂದರೆ ನಮ್ಮ ಕುಟುಂಬದ ಹೊಸ ಸದಸ್ಯರು ಶೀಘ್ರದಲ್ಲೇ ನಮ್ಮೊಂದಿಗೆ ಸೇರಲು ನಾವು ಕಾಯುತ್ತಿದ್ದೇವೆ. ದಯವಿಟ್ಟು ನಿಮ್ಮ ಪ್ರಾರ್ಥನೆ ಮತ್ತು ಆಶೀರ್ವಾದದಲ್ಲಿ ನನ್ನನ್ನು ಇರಿಸಿ ಎಂದು ನಟಿ ಕ್ಯಾಪ್ಷನ್ ಸಹ ಕೊಟ್ಟಿದ್ದಾರೆ. ಸಂಜನಾ ಅವರ ಸೀಮಂತದ ಫೋಟೋಗಳು ಸಖತ್ ವೈರಲ್ ಆಗಿದ್ದು, ಅಭಿಮಾನಿಗಳು, ಸ್ನೇಹಿತರು ಮತ್ತು ಹಿತೈಶಿಗಳು ಶುಭ ಹಾರೈಸಿದ್ದಾರೆ. ತೆಲುಗು ಚಿತ್ರದ ಮೂಲಕ ಬಣ್ಣದ ಲೋಕಕ್ಕೆ ಪಾದಾರ್ಪಣೆ ಮಾಡಿದ್ದ ಸಂಜನಾ, ಬಳಿಕ ಕನ್ನಡದಲ್ಲಿ ಹಲವು ಸಿನಿಮಾಗಳಲ್ಲಿ ಚಾನ್ಸ್ ಗಿಟ್ಟಿಸಿಕೊಂಡಿದ್ದರು.


# ಪಾಕಿಸ್ತಾನದ ಹಳ್ಳಿಗಳಲ್ಲೂ ಕೆಜಿಎಫ್ ಹವಾ



ರಾಕಿಂಗ್ ಸ್ಟಾರ್ ಯಶ್ ಅವರು 'ಕೆಜಿಎಫ್ 2' ಮೂಲಕ ವಿಶ್ವಾದ್ಯಂತ ತಲುಪಿದ್ದಾರೆ. ಅವರನ್ನು ವಿದೇಶದಲ್ಲೂ ಗುರುತಿಸುತ್ತಾರೆ. ಅಮೆರಿಕ, ಇಂಗ್ಲೆಂಡ್ ಜನರಿಗೆ ಯಶ್ ಪರಿಚಯ ಇದೆ ಎಂದರೆ ಅದು ಅಂಥ ದೊಡ್ಡ ವಿಚಾರ ಏನೂ ಅಲ್ಲ. ಆದರೆ, ಶತ್ರು ರಾಷ್ಟ್ರ ಎಂದೇ ಕರೆಸಿಕೊಳ್ಳುವ ನೆರೆಯ ಪಾಕಿಸ್ತಾನದ ಹಳ್ಳಿಯವರಿಗೂ ಯಶ್ ಪರಿಚಯ ಇದೆ ಎಂದರೆ ನೀವು ನಂಬುತ್ತೀರಾ ನಿಜಕ್ಕೂ ನಂಬಲೇ ಬೇಕು. ಇದಕ್ಕೆ ಸಾಕ್ಷಿ ಕೂಡ ಸಿಕ್ಕಿದೆ. 'ಗ್ಲೋಬಲ್ ಕನ್ನಡಿಗ' ಯೂಟ್ಯೂಬ್ ಚಾನೆಲ್‌ನಲ್ಲಿ ಈ ವಿಚಾರ ರಿವೀಲ್ ಆಗಿದೆ. ಮಹಾಬಲ ರಾಮ್ ಅವರು 'ಗ್ಲೋಬಲ್ ಕನ್ನಡಿಗ' ಯೂಟ್ಯೂಬ್ ಚಾನೆಲ್ ಹೊಂದಿದ್ದಾರೆ. ಇದಕ್ಕೆ 3 ಲಕ್ಷಕ್ಕೂ ಅಧಿಕ ಹಿಂಬಾಲಕರು ಇದ್ದಾರೆ. ಅವರು ಇತ್ತೀಚೆಗೆ ಪಾಕಿಸ್ತಾನ ಪ್ರವಾಸಕ್ಕೆ ತೆರಳಿದ್ದರು. ಅಲ್ಲಿ ಕರಾಚಿ, ಇಸ್ಲಾಮಾಬಾದ್ ನಗರಗಳನ್ನು ಅವರು ಎಕ್ಸ್‌ಪ್ಲೋರ್ ಮಾಡಿದ್ದರು. ಇಸ್ಲಾಮಾಬಾದ್‌ನ ಸಮೀಪ ಇರುವ ಹಳ್ಳಿ ಒಂದಕ್ಕೆ ರಾಮ್ ತೆರಳಿದ್ದಾರೆ. ಅಲ್ಲಿನ ಮಕ್ಕಳು 'ಕೆಜಿಎಫ್' ಬಗ್ಗೆ ಮಾತನಾಡಿದ್ದಾರೆ.

ಮೊದಲು ತೆಲುಗಿನ 'ಪುಷ್ಪ 2' ಚಿತ್ರದ 'ತಗ್ಗದೆಲೆ..' ಸ್ಟೈಲ್ ಮಾಡಿದ್ದಾರೆ. 'ಪಾಕಿಸ್ತಾನ ಹಳ್ಳಿಗಳಲ್ಲಿ ದಕ್ಷಿಣ ಭಾರತದ ಕ್ರೇಜ್ ಇದೆ. ಪಾಕ್ ಹಳ್ಳಿಯಲ್ಲಿ ಇದನ್ನು ಮಾಡುತ್ತಿದ್ದಾರೆ. ಸಿನಿಮಾದ ಪವರ್ ಇದು.

# ಜಸ್ಪ್ರೀತ್ ಬುಮ್ರಾ ಐಪಿಎಲ್ ಎಂಟ್ರಿಗೆ ದಿನಾಂಕ ಫಿಕ್ಸ್



**ಯಾವ ತಂಡದ ವಿರುದ್ಧ ಕಣಕ್ಕೆ**

ಆಡಿರುವ 4 ಪಂದ್ಯಗಳ ಪೈಕಿ ಮೂರು ಪಂದ್ಯಗಳಲ್ಲಿ ಸೋತು ಪಾಯಿಂಟ್ ಪಟ್ಟಿಯಲ್ಲಿ ಕೆಳ ಸ್ಥಾನದಲ್ಲಿರುವ ಮುಂಬೈ ಇಂಡಿಯನ್ಸ್‌ಗೆ ಸಿಹಿ ಸುದ್ದಿಯೊಂದು ಸಿಕ್ಕಿದೆ. ಹಾರ್ದಿಕ್ ಪಾಂಡ್ಯ ನಾಯಕತ್ವದಲ್ಲಿ, ಮುಂಬೈ ತನ್ನ ಮೂರನೇ ಪಂದ್ಯದಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ ತಂಡವನ್ನು ಸೋಲಿಸಿತ್ತು. ಆದರೆ ಆ ಬಳಿಕ ನಡೆದ ಲಕ್ನೋ ಸೂಪರ್ ಜೈಂಟ್ಸ್ ವಿರುದ್ಧದ ಪಂದ್ಯವನ್ನು ಕೊನೆ ಹಂತದಲ್ಲಿ ಕೈಚೆಲಿತು.

ಏತನ್ಮಧ್ಯೆ, ಮುಂಬೈ ಇಂಡಿಯನ್ಸ್ ತಂಡಕ್ಕೆ ಸ್ಟಾರ್ ವೇಗಿ ಜಸ್ಪ್ರೀತ್ ಬುಮ್ರಾ ಮರಳಿರುವ ಬಗ್ಗೆ ದೊಡ್ಡ ಸುದ್ದಿ ಸಿಕ್ಕಿದೆ. ವರದಿ ಪ್ರಕಾರ ಮುಂದಿನ ಕೆಲವು ದಿನಗಳಲ್ಲಿ ಬುಮ್ರಾ ತಂಡಕ್ಕೆ ಮರಳಲಿದ್ದು, ಶೀಘ್ರದಲ್ಲೇ ಆಡುವ ಹನ್ನೊಂದರ ಬಳಗದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಆಸ್ಟ್ರೇಲಿಯಾ ಪ್ರವಾಸದ ವೇಳೆ ಬೆನ್ನುನೋವಿಗೆ ತುತ್ತಾಗಿದ್ದ ಬುಮ್ರಾ ಕ್ರಿಕೆಟ್‌ನಿಂದ ದೂರ ಉಳಿದಿದ್ದಾರೆ. ಇದರಿಂದಾಗಿ ಅವರು ಚಾಂಪಿಯನ್ಸ್ ಟ್ರೋಫಿಯಲ್ಲಿ ಆಡಲು ಕೂಡ ಸಾಧ್ಯವಾಗಲಿಲ್ಲ. ಅಂದಿನಿಂದ, ಬುಮ್ರಾ ಬಿಸಿಸಿಐನ ಸೆಂಟರ್ ಆಫ್ ಎಕ್ಸಲೆನ್ಸ್ (ಸಿಒಇ) ವೈದ್ಯಕೀಯ ತಂಡದ ಮೇಲ್ವಿಚಾರಣೆಯಲ್ಲಿ ತಮ್ಮ ಪುನರ್ವಸತಿಯನ್ನು ಪೂರ್ಣಗೊಳಿಸುತ್ತಿದ್ದಾರೆ. ಇತ್ತೀಚೆಗೆ ಬುಮ್ರಾ ಬೆಂಗಳೂರು ಮೂಲದ ಸಿಒಇಯಲ್ಲಿ ಬೌಲಿಂಗ್ ಮಾಡುತ್ತಿರುವುದು ಕಂಡುಬಂದಿತ್ತು. ಬುಮ್ರಾ ವೈದ್ಯಕೀಯವಾಗಿ ಫಿಟ್ ಆಗಿದ್ದಾರೆಂದು ಘೋಷಿಸಲಾಗಿದೆ ಎಂದು ಕೆಲವು ವರದಿಗಳು ಹೇಳಿವೆ. ಆದರೆ ಅವರ ಬೌಲಿಂಗ್ ಕೆಲಸದ ಹೊರೆ ಕ್ರಮೇಣ ಹೆಚ್ಚಾದ ಕಾರಣ ಅವರಿಗೆ ಗ್ರೀನ್ ಸಿಗ್ನಲ್ ಸಿಗಲಿಲ್ಲ. ಈಗ ಇಎಸ್‌ಪಿಎನ್-ಕ್ರಿಕ್‌ಇನ್ಫೋ ವರದಿಯ ಪ್ರಕಾರ ಬುಮ್ರಾ ಅಂತಿಮ ಸುತ್ತಿನ ಫಿಟ್‌ನೆಸ್ ಪರೀಕ್ಷೆಗೆ ಸನಿಹ ಬಂದಿದ್ದಾರೆ. ಮುಂದಿನ ಕೆಲವು ದಿನಗಳಲ್ಲಿ ಅವರು ನಲ್ಲಿ ಫಿಟ್ನೆಸ್ ಪರೀಕ್ಷೆಯನ್ನು ನಡೆಸಲಿದ್ದು, ಇದರಲ್ಲಿ ಪೂರ್ಣ ಸಾಮರ್ಥ್ಯದಲ್ಲಿ ಬೌಲಿಂಗ್ ಮಾಡುವಾಗ ಅವರ ಕೆಲಸದ ಹೊರೆಯನ್ನು ಪರಿಶೀಲಿಸಲಾಗುತ್ತದೆ. ಬುಮ್ರಾ ಅವರ ಪ್ರಸ್ತುತ ಸ್ಥಿತಿಯನ್ನು ನೋಡಿದರೆ, ಅವರು ಮತ್ತೆ ತಂಡಕ್ಕೆ ಮರಳುವ ಸಾಧ್ಯತೆ ಹೆಚ್ಚಿದೆ.

# ಸಿಎಸ್‌ಕೆಗೆ ಮತ್ತೊಂದು ಹೀನಾಯ ಸೋಲು.. ಕನ್ನಡಿಗ ಕೆಎಲ್ ರಾಹುಲ್ ಆರ್ಭಟ, ಡೆಲ್ಲಿ ಜಯಭೇರಿ

ಕನ್ನಡಿಗ ಕೆ.ಎಲ್ ರಾಹುಲ್ ಅವರ ಭರ್ಜರಿ ಬ್ಯಾಟಿಂಗ್‌ನಿಂದ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಡೆಲ್ಲಿ ಕ್ಯಾಪಿಟಲ್ಸ್ ಸತತ 3ನೇ ಗೆಲುವು ಪಡೆದಿದೆ. 25 ರನ್‌ಗಳ ಅಂತರದಿಂದ ಡೆಲ್ಲಿ ತಂಡ ವಿಜಯಶಾಲಿಯಾಗಿದೆ.

ಚೆನ್ನೈನ ಎಂ.ಎ ಚಿದಂಬರಂ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ ಡೆಲ್ಲಿ ನಾಯಕ ಅಕ್ಷರ ಪಟೇಲ್, ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ಡೆಲ್ಲಿ ಪರ ಓಪನರ್ ಆಗಿ ಕ್ರೀಸ್‌ಗೆ ಆಗಮಿಸಿದ್ದ ಕೆ.ಎಲ್ ರಾಹುಲ್, ಮೆಕ್‌ಗುರ್ಕ್ ಉತ್ತಮ ಆರಂಭ ಪಡೆಯಲಿಲ್ಲ. ಮೆಕ್‌ಗುರ್ಕ್ ಡಕೌಟ್ ಆದರು. ಆದ್ರೆ ರಾಹುಲ್ ತಾಳ್ಮೆಯ ಬ್ಯಾಟಿಂಗ್ ಮುಂದುವರೆಸಿ ಚೆನ್ನೈ ಬೌಲರ್‌ಗಳನ್ನ ಕಾಡಿದರು.

ಹೀಗಾಗಿ ಕೆ.ಎಲ್. ರಾಹುಲ್ ಕೇವಲ 33 ಎಸೆತಗಳಲ್ಲಿ 2 ಬೌಂಡರಿ, 3 ಸಿಕ್ಸರ್‌ಗಳಿಂದ 50 ರನ್ ಬಾರಿಸಿದರು. ಹಾಗೇ ಬ್ಯಾಟಿಂಗ್ ಮುಂದುವರೆಸಿದ ರಾಹುಲ್, 51 ಎಸೆತಗಳಲ್ಲಿ 6 ಫೋರ್, 3 ಸಿಕ್ಸ್‌ಗಳಿಂದ 77 ರನ್‌ಗಳ ಕೊಡುಗೆ ನೀಡಿದರು.



ಇದು ಅಲ್ಲದೇ ಈ ಐಪಿಎಲ್ ಟೂರ್ನಿಯಲ್ಲಿ ರಾಹುಲ್ ಅವರ ಮೊದಲ ಅರ್ಧ ಶತಕವಾಗಿದೆ. ಡೆಲ್ಲಿ ಬ್ಯಾಟರ್‌ಗಳಾದ ಪೊರೇಲ್ 33, ನಾಯಕ ಅಕ್ಷರ್ 21, ರಿಜ್ವಿ 20, ಸ್ಟಬ್ಸ್ 24 ರನ್‌ಗಳಿಂದ ಡೆಲ್ಲಿ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 184 ರನ್‌ಗಳ ಗುರಿ ನೀಡಿತ್ತು.


ಈ ಟಾರ್ಗೆಟ್ ಹಿಂದೆ ಬಿದ್ದಿದ್ದ ಚೆನ್ನೈ ತಂಡ ಗುರಿ ತಲುಪಲಾಗದೇ ಸೋಲೊಪ್ಪಿಕೊಂಡಿದೆ. ಆರಂಭಿಕರಾಗಿ ಕ್ರೀಸ್‌ಗೆ ಆಗಮಿಸಿದ್ದ ರಚಿನ್ ರವೀಂದ್ರ (3) ಹಾಗೂ ಡಿವೋನ್ ಕಾನ್ವೆ (13) ಬೇಗ ವಿಕೆಟ್ ಒಪ್ಪಿಸಿದರು. ಇವರ ನಂತರ ಬಂದ ನಾಯಕ ರುತುರಾಜ್ ಗಾಯಕ್ವಾಡ್ ಕೂಡ 5ರನ್‌ಗೆ ಕ್ಯಾಚ್ ಕೊಟ್ಟು ಪೆವಿಲಿಯನ್‌ಗೆ ಹೆಜ್ಜೆ ಹಾಕಿದರು. ಈ 3 ವಿಕೆಟ್‌ಗಳಿಂದ ಚೆನ್ನೈ ಆರಂಭದಲ್ಲೇ ತೀವ್ರ ಸಂಕಷ್ಟಕ್ಕೆ ಒಳಗಾಗಿತ್ತು.

ವಿಫಲ ಬ್ಯಾಟಿಂಗ್ ಮುಂದುವರೆಸಿರುವ ದುಬೆ 18, ಜಡೇಜಾ 2ಕ್ಕೆ ಔಟ್ ಆಗಿದ್ದು ದೊಡ್ಡ ನಷ್ಟವಾಯಿತು.


ಎಂ.ಎಸ್ ಧೋನಿ ಹಾಗೂ ವಿಜಯ್ ಶಂಕರ್ ಅವರು ತಂಡದ ಗೆಲುವಿಗಾಗಿ ಹೋರಾಟ ಮಾಡಿದರು. ಆದರೆ ಅದು ಸಫಲವಾಗಲಿಲ್ಲ. ಈ ಪಂದ್ಯದಲ್ಲಿ ಧೋನಿ 26 ಬಾಲ್‌ಗಳಲ್ಲಿ 1 ಸಿಕ್ಸರ್, 1 ಫೋರ್ ಸಮೇತ 30 ರನ್‌ಗಳಿಸಿದರು. ವಿಜಯ್ ಶಂಕರ್ ಅಮೋಘವಾದ ಅರ್ಧಶತಕ ಬಾರಿಸಿದರು. 54 ಎಸೆತಗಳಲ್ಲಿ 5 ಬೌಂಡರಿ, 1 ಸಿಕ್ಸ್‌ನಿಂದ 69 ರನ್ ಗಳಿಸಿದರು. ಕೊನೆಗೆ ಚೆನ್ನೈ 20 ಓವರ್‌ಗಳಲ್ಲಿ 5 ವಿಕೆಟ್‌ಗೆ 158 ರನ್ ಮಾತ್ರ ಗಳಿಸಿತು. ಹೀಗಾಗಿ ಚೆನ್ನೈ 25 ರನ್‌ಗಳಿಂದ ಡೆಲ್ಲಿ ವಿರುದ್ಧ ಹೀನಾಯ ಸೋಲಿಗೆ ತುತ್ತಾಯಿತು.

# ಬ್ಯಾಕ್ ಟು ಬ್ಯಾಕ್ ದಂಡ ಕಟ್ಟಿದ ದಿಗ್ವೇಶ್ ರಾಠಿ

ಐಪಿಎಲ್‌ನ 16ನೇ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ ಲಕ್ನೋ ಸೂಪರ್ ಜೈಂಟ್ಸ್ ಜಯ ಸಾಧಿಸಿದೆ. ಲಕ್ನೋನ ಏಕನಾ ಸ್ಟೇಡಿಯಂನಲ್ಲಿ ನಡೆದ ಈ ಪಂದ್ಯದ ಗೆಲುವಿನ ರೂವಾರಿ ಯುವ ಸ್ಪಿನ್ನರ್ ದಿಗ್ವೇಶ್ ರಾಠಿ. ಏಕೆಂದರೆ ಎಲ್‌ಎಸ್‌ಜಿ ನೀಡಿ 204 ರನ್‌ಗಳ ಗುರಿ ಬೆನ್ನತ್ತಿದ ಮುಂಬೈ ಇಂಡಿಯನ್ಸ್ ತಂಡವು ಉತ್ತಮ ಆರಂಭ ಪಡೆದಿತ್ತು. ಆದರೆ ದಿಗ್ವೇಶ್ ರಾಠಿ ಸ್ಪಿನ್‌ನಲ್ಲಿ ರನ್ ಗಳಿಸಲು ಪರದಾಡಿದರು. 4 ಓವರ್‌ಗಳನ್ನು ಎಸೆದ ದಿಗ್ವೇಶ್ ನೀಡಿದ್ದು ಕೇವಲ 21 ರನ್‌ಗಳು ಮಾತ್ರ. ಅಲ್ಲದೆ 1 ವಿಕೆಟ್ ಕೂಡ ಪಡೆದರು. ಈ ಮೂಲಕ ಮುಂಬೈ ಇಂಡಿಯನ್ಸ್ ತಂಡದ ರನ್ ಗತಿಯನ್ನು ನಿಯಂತ್ರಿಸುವಲ್ಲಿ ದಿಗ್ವೇಶ್ ರಾಠಿ ಪ್ರಮುಖ ಪಾತ್ರವಹಿಸಿದರು. ವಿಶೇಷ ಎಂದರೆ ಈ ಪಂದ್ಯದಲ್ಲಿ ನಮನ್ ಧೀರ್ ಅವರನ್ನು ದಿಗ್ವೇಶ್ ರಾಠಿ ಕ್ಲೀನ್ ಬೌಲ್ಡ್ ಮಾಡಿ ನೋಟ್‌ಬುಕ್ ಸೆಲೆಬ್ರೇಷನ್ ಮಾಡಿದ್ದರು. ಈ ಸಂಭ್ರಮಕ್ಕೆ ಇದೀಗ ದಂಡದ ಶಿಕ್ಷೆ ನೀಡಲಾಗಿದೆ. ಅದರಂತೆ ರಾಠಿಗೆ ಪಂದ್ಯ ಶುಲ್ಕದ ಶೇ.50 ರಷ್ಟು ದಂಡ ವಿಧಿಸಲಾಗಿದೆ. ಇದಕ್ಕೂ ಮುನ್ನ ಪಂಜಾಬ್ ಕಿಂಗ್ಸ್ ವಿರುದ್ಧದ ಪಂದ್ಯದಲ್ಲಿ ಪ್ರಿಯಾಂಶ್ ಆರ್ಯ ಅವರನ್ನು ಔಟ್ ಮಾಡಿದ ದಿಗ್ವೇಶ್ ರಾಠಿ ನೋಟ್‌ಬುಕ್ ಸೆಲೆಬ್ರೇಷನ್ ಮಾಡಿದ್ದರು. ಐಪಿಎಲ್‌ನ ನೀತಿ ಸಂಹಿತೆಯ ಉಲ್ಲಂಘನೆ ಮಾಡಿದ್ದಕ್ಕಾಗಿ ದಿಗ್ವೇಶ್‌ಗೆ ಪಂದ್ಯ ಶುಲ್ಕದ ಶೇ.25 ರಷ್ಟು ದಂಡ ಹಾಗೂ ಒಂದು ಡಿಮೆರಿಟ್ ಪಾಯಿಂಟ್ ನೀಡಲಾಗಿತ್ತು.



# ಸೋಲಿನ ಬೆನ್ನಲ್ಲೇ ಕಣ್ಣೀರಿಟ್ಟ ಹಾರ್ದಿಕ್ ಪಾಂಡ್ಯ



ಇಂಡಿಯನ್ ಪ್ರೀಮಿಯರ್ ಲೀಗ್ ಸೀಸನ್-18 ರಲ್ಲಿ ಮುಂಬೈ ಇಂಡಿಯನ್ಸ್ ತಂಡ ಆಡಿದ 4 ಪಂದ್ಯಗಳಲ್ಲಿ ಮೂರಲ್ಲಿ ಸೋಲನುಭವಿಸಿದೆ.

ಅದರಲ್ಲೂ ಕಳೆದ ಪಂದ್ಯದಲ್ಲಿ ಕೆಕೆಆರ್ ವಿರುದ್ಧ ಗೆದ್ದು ಬೀಗಿದ್ದ ಮುಂಬೈ ಪಡೆ ಈ ಬಾರಿ ಕೂಡ ಗೆಲ್ಲುವ ನಿರೀಕ್ಷೆಯಲ್ಲಿತ್ತು. ಆದರೆ ಲಕ್ನೋ ಸೂಪರ್ ಜೈಂಟ್ಸ್ ತಂಡದ ಸಾಂಘಿಕ ಪ್ರದರ್ಶನದಿಂದಾಗಿ ಸೋಲೊಪ್ಪಿಕೊಳ್ಳಬೇಕಾಯಿತು.

ಈ ಸೋಲಿನ ಬಳಿಕ ಮಾತನಾಡಿದ ಮುಂಬೈ ಇಂಡಿಯನ್ಸ್ ತಂಡದ ನಾಯಕ ಹಾರ್ದಿಕ್ ಪಾಂಡ್ಯ, ಈ ಪರಾಜಯದ ಸಂಪೂರ್ಣ ಹೊಣೆಯನ್ನು ಹೊತ್ತುಕೊಳ್ಳುವುದಾಗಿ ತಿಳಿಸಿದರು. ಅಲ್ಲದೆ ತಿಲಕ್ ವರ್ಮಾ ಅವರನ್ನು ರಿಟೈರ್ಡ್ ಔಟ್ ಮಾಡಿರುವುದನ್ನು ಸಮರ್ಥಿಸಿಕೊಂಡರು. ಪೋಸ್ಟ್ ಮ್ಯಾಚ್ ಸಂದರ್ಶನದಲ್ಲಿ ನಗುಮುಖದೊಂದಿಗೆ ಕಾಣಿಸಿಕೊಂಡ ಪಾಂಡ್ಯ ಆ ಬಳಿಕ ಭಾವುಕರಾದರು.

ಅಂದರೆ ಸಂದರ್ಶನದ ವೇಳೆ ತನ್ನ ಭಾವನೆಗಳನ್ನು ಅದುಮಿಟ್ಟುಕೊಂಡು ಪಾಂಡ್ಯ ಪ್ರಶ್ನೆಗಳಿಗೆ ಉತ್ತರಿಸಿದ್ದರು. ಅಲ್ಲದೆ ಸಂದರ್ಶನ ಮುಗಿಯುತ್ತಿದ್ದಂತೆ ದೂರ ಸರಿದು ನಿಂತ ಹಾರ್ದಿಕ್ ಪಾಂಡ್ಯ ತನ್ನ ಮುಖ ಕೆಳಗೆ ಮಾಡಿ ತಮ್ಮ ಕಣ್ಣೀರನ್ನು ನಿಯಂತ್ರಿಸಲು ಪ್ರಯತ್ನಿಸುತ್ತಿರುವುದು ಕಂಡು ಬಂತು. ಈ ವೇಳೆ ತೆಗೆದ ಫೋಟೋ ಇದೀಗ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ.

ಮುಂಬೈ ಇಂಡಿಯನ್ಸ್ ತಂಡವನ್ನು ಈವರೆಗೆ 17 ಪಂದ್ಯಗಳಲ್ಲಿ ಮುನ್ನಡೆಸಿರುವ ಹಾರ್ದಿಕ್ ಪಾಂಡ್ಯ, ಗೆಲುವಿನ ರುಚಿ ನೋಡಿದ್ದು ಕೇವಲ 5 ಪಂದ್ಯಗಳಲ್ಲಿ ಮಾತ್ರ. ಇನ್ನುಳಿದ 12 ಮ್ಯಾಚ್‌ಗಳಲ್ಲೂ ಮುಂಬೈ ಪಡೆ ಸೋಲನುಭವಿಸಿದೆ. ಈ ಸೋಲುಗಳಿಂದಲೇ ಇದೀಗ ಹಾರ್ದಿಕ್ ಪಾಂಡ್ಯ ಹತಾಶರಾಗಿದ್ದಾರೆ.

ಸದ್ಯ 4 ಪಂದ್ಯಗಳನ್ನು ಮುಗಿಸಿರುವ ಮುಂಬೈ ಇಂಡಿಯನ್ಸ್ ಮುಂದೆ ಲೀಗ್ ಹಂತದಲ್ಲಿ ಇನ್ನೂ 10 ಪಂದ್ಯಗಳಿವೆ. ಅದರಲ್ಲೂ ಮುಂದಿನ ಪಂದ್ಯವನ್ನು ತವರು ಮೈದಾನ ವಾಂಖೆಡೆ ಸ್ಟೇಡಿಯಂನಲ್ಲಿ ಆಡಲಿದ್ದು, ಏಪ್ರಿಲ್ 7 ರಂದು ನಡೆಯಲಿದೆ.

ಈ ಮ್ಯಾಚ್‌ನಲ್ಲಿ ಮುಂಬೈ ಇಂಡಿಯನ್ಸ್ ಹಾಗೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳು ಮುಖಾಮುಖಿಯಾಗಲಿವೆ.

# ಶ್ರೇಯಸ್ ಪಡೆಗೆ ಮೊದಲ ಸೋಲು..

2025ರ ಐಪಿಎಲ್ ಟೂರ್ನಿಯಲ್ಲಿ ಶ್ರೇಯಸ್ ಅಯ್ಯರ್ ನೇತೃತ್ವದ ಪಂಜಾಬ್ ಕಿಂಗ್ಸ್ ತಂಡ ಮೊದಲು ಸೋಲು ಕಂಡಿದೆ. ಪಂಜಾಬ್ ವಿರುದ್ಧ ರಾಜಸ್ಥಾನ ರಾಯಲ್ಸ್ 50 ರನ್‌ಗಳಿಂದ ಅಮೋಘವಾದ ಗೆಲುವು ಪಡೆದಿದೆ. ಚಂಡೀಗಢದ ಮುಲ್ಲನ್ಪುರದ ಅಂತರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡದ ನಾಯಕ ಶ್ರೇಯಸ್ ಅಯ್ಯರ್ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಅದರಂತೆ ರಾಜಸ್ಥಾನ ಪರ ಸಂಜು ಸ್ಯಾಮ್ಸನ್ ಹಾಗೂ ಯಶಸ್ವಿ ಜೈಸ್ವಾಲ್ ಓಪನರ್ ಆಗಿ ಕ್ರೀಸ್‌ಗೆ ಆಗಮಿಸಿ ಭರ್ಜರಿ ಆರಂಭ ಪಡೆದರು. ಸಂಜು 38 ರನ್ ಗಳಿಸಿ ಆಡುವಾಗ ಶ್ರೇಯಸ್ ಅಯ್ಯರ್‌ಗೆ ಕ್ಯಾಚ್ ನೀಡಿದ್ರೆ, ಜೈಸ್ವಾಲ್ (67) ಅರ್ಧಶತಕ ಸಿಡಿಸಿ ಸಂಭ್ರಮಿಸಿದರು.



**ಜೈಸ್ವಾಲ್ ಬ್ಯಾಟಿಂಗ್ ಅಬ್ಬರ**

ನಿತೀಶ್ ರಾಣ 12, ಬಿರುಸಿನ ಬ್ಯಾಟಿಂಗ್ ಮಾಡಿದ ಹೆಟ್ಮರ್ 12 ಎಸೆತಗಳಲ್ಲಿ 20 ರನ್ ಗಳಿಸಿದ್ರು. ರಿಯಾನ್ ಪರಾಗ್ ಅವರ ಅಮೋಘ ಬ್ಯಾಟಿಂಗ್‌ನಿಂದ 25 ಎಸೆತಗಳಲ್ಲಿ 43 ಹಾಗೂ ಧೃವ್ ಜುರೆಲ್ 13 ರನ್‌ಗಳನ್ನು ಗಳಿಸಿ ಅಜೇಯರಾಗಿ ಉಳಿದರು. ಈ ಎಲ್ಲರ ಕಾಣಿಕೆಯಿಂದ ರಾಜಸ್ಥಾನ್ 20 ಓವರ್‌ಗಳಲ್ಲಿ 4 ವಿಕೆಟ್‌ಗೆ 206 ರನ್‌ಗಳ ಬಿಗ್ ಟಾರ್ಗೆಟ್ ನೀಡಿತ್ತು. ಈ ಗುರಿ ಮುಟ್ಟಲು ಪ್ರಯತ್ನಿಸಿದ ಪಂಜಾಬ್ ಕಿಂಗ್ಸ್ ಆರಂಭದಲ್ಲೇ ದೊಡ್ಡ ಹೊಡೆತ ಬಿದ್ದಿತ್ತು. ಏಕೆಂದರೆ, ಪ್ರಿಯಾಂಶ್ ಆರ್ಯ ಡಕೌಟ್ ಆದ್ರೆ, ಪ್ರಭಸಿಮ್ರನ್ ಸಿಂಗ್ 17 ರನ್‌ಗೆ ಕ್ಯಾಚ್ ಕೊಟ್ಟು ಔಟ್ ಆದರು. ಇವರ ಬೆನ್ನಲ್ಲೇ ನಾಯಕ ಶ್ರೇಯಸ್ ಅಯ್ಯರ್ ಕೂಡ 10 ರನ್‌ಗೆ ಆಟ ಮುಗಿಸಿದರು. ನೆಹಾಲ್ ವಧೇರಾ 41 ಎಸೆತಗಳಲ್ಲಿ 4 ಫೋರ್, 3 ಸಿಕ್ಸರ್‌ನಿಂದ 62 ಗಳಿಸಿ ಗೆಲುವಿನ ಅಲೆ ಮೂಡಿಸಿದ್ದರು. ಆದರೆ ನೆಹಾಲ್ ವಧೇರಾ ಬ್ಯಾಟಿಂಗ್‌ಗೆ ಹಸರಂಗ ಬ್ರೇಕ್ ಹಾಕಿದರು. ಮ್ಯಾಕ್ಸ್‌ವೆಲ್ ಕೊಂಚ ಹೊಡೆದಾಡಿದರೂ 30 ರನ್‌ಗೆ ಪೆವಿಲಿಯನ್ ಸೇರಿದರು. ಬಳಿಕ ಬಂದ ಯಾವ ಬ್ಯಾಟ್ಸ್‌ಮನ್ ಕೂಡ ಒಳ್ಳೆಯ ಬ್ಯಾಟಿಂಗ್ ಪ್ರದರ್ಶನ ಮಾಡಲಿಲ್ಲ. ಹೀಗಾಗಿ ಪಂಜಾಬ್ 9 ವಿಕೆಟ್‌ಗೆ 155 ರನ್ ಗಳಿಸಲು ಮಾತ್ರ ಶಕ್ತವಾಯಿತು. ಇದರಿಂದಾಗಿ ರಾಜಸ್ಥಾನ ಜೊತೆ 50 ರನ್‌ಗಳಿಂದ ಪಂಜಾಬ್ ಸೋತಿದೆ. ಆರ್‌ಆರ್ ಪರ ಜೋಫ್ರಾ ಆರ್ಚರ್ 3 ವಿಕೆಟ್ ಪಡೆದು ತಂಡಕ್ಕೆ ನೆರವಾದರು.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news

ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966